"ಗೋಪಾಲಕೃಷ್ಣ ಪೈರವರ 'ಸ್ವಪ್ನ ಸಾರಸ್ವತ' ಕಾದಂಬರಿ: ಒಂದು ಅಧ್ಯಯನ"

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಬಸವರಾಜ ಎಮ್. ಜನಗೌಡ

ಮಾರ್ಗದರ್ಶಕರು

ಡಾ. ಅಮರೇಶ ಎಸ್.

ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ -೫೮೩೨೭೬

ಹೊಸಪೇಟೆ ತಾ, ಬಳ್ಳಾರಿ ಜಿ.

೨೦೧೧-೨೦೧೨

"ಗೋಪಾಲಕೃಷ್ಣ ಪೈರವರ 'ಸ್ವಪ್ನ ಸಾರಸ್ವತ' ಕಾದಂಬರಿ: ಒಂದು ಅಧ್ಯಯನ "

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಬಸವರಾಜ ಎಮ್. ಜನಗೌಡ

ಮಾರ್ಗದರ್ಶಕರು

ಡಾ. ಅಮರೇಶ ಎನ್.

ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ -೫೮೩೨೭೬

ಹೊಸಪೇಟೆ ತಾ, ಬಳ್ಳಾರಿ ಜಿ.

೨೦೧೧-೨೦೧೨

ಪ್ರಮಾಣ ಪತ್ರ

"ಗೋಪಾಲಕೃಷ್ಣ ಪೈರವರ 'ಸ್ವಪ್ನ ಸಾರಸ್ವತ' ಕಾದಂಬರಿ : ಒಂದು ಅಧ್ಯಯನ" ಎಂಬ ನಿಬಂಧವನ್ನು **ಡಾ. ಅಮರೇಶ ಎನ್.** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ **ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಈ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 29/8/2012

B Janagouda
ಬಸವರಾಜ ಎಮ್. ಜನಗೌಡ
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣಪತ್ರ

"ಗೋಪಾಲಕೃಷ್ಣ ಪೈರವರ 'ಸ್ವಪ್ನ ಸಾರಸ್ವತ' ಕಾದಂಬರಿ : ಒಂದು ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್ ಪದವಿಗಾಗಿ **ಬಸವರಾಜ ಎಮ್. ಜನಗೌಡ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 21/6/2012

ಡಾ. ಅಮರೇಶ ನುಗಡೋಣಿ
ಪ್ರವಾಚಕರು ಹಾಗೂ ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಹಾಗೂ ವೈಧಾನಿಕತೆ.

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಹಾಗೂ ವೈಧಾನಿಕತೆ.

ಅಧ್ಯಯನದ ಉದ್ದೇಶ

ಕನ್ನಡ ಸಾಹಿತ್ಯ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವದರಿಂದ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಅದಕ್ಕೆ "ಸಾಹಿತ್ಯ ಎಂಬುವದು ನಿಂತ ನೀರಲ್ಲಾ ಸದಾ ಹರಿಯುತ್ತಿರುವ ಜೀವನದಿ" ಎಂದು ಕರೆಯುತ್ತೇವೆ. ನಾವು ಸಾಹಿತ್ಯ ಇತಿಹಾಸದ ಪುಟಗಳನ್ನು ತೆಗೆದಾಗ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ವಿಭಾಗ ಕ್ರಮವನ್ನು ಕಾಲ ಮತ್ತು ಅಧ್ಯಯನ ದೃಷ್ಟಿಯಿಂದ ವಿದ್ವಾಂಸರು ಮಾಡಿರುವದನ್ನು ಕಾಣುತ್ತೇವೆ. ಇದೇ ರೀತಿ ಹೊಸಗನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯ ಎಂಬ ವಿಭಾಗ ಕ್ರಮಗಳು ಹುಟ್ಟಿಕೊಂಡಿವೆ. ಹೀಗೆ ಸಾಹಿತ್ಯವನ್ನು ನೋಡುತ್ತಾ ಹೋದಂತೆ ಅದರ ವಿಸ್ತಾರತೆಯನ್ನು ಕಾಣುತ್ತೇವೆ. ಒಂದು ಶತಮಾನ ಪೂರೈಸಿದ ಆಧುನಿಕ ಕನ್ನಡ ಸಾಹಿತ್ಯ ಹುಟ್ಟಿಕೊಂಡಿರುವುದೇ ಹೊಸದನ್ನು ಸೃಷ್ಟಿಸಲು. ಈ ಸಾಹಿತ್ಯದ ಪ್ರಕಾರಗಳಾಗಿ ಕಥೆ, ಕಾದಂಬರಿ, ಕಾವ್ಯ, ನಾಟಕ, ಮಹಾಕಾವ್ಯ, ಕವಿತೆ, ಪ್ರವಾಸ ಸಾಹಿತ್ಯ, ಅನುವಾದ ಇತ್ಯಾದಿ ಸಾಹಿತ್ಯಗಳು ಇವುಗಳಲ್ಲಿ ಕೆಲವು ಸಾಹಿತ್ಯ ಪೂರ್ವದಲ್ಲಿ ಕಂಡುಬಂದರು ಸಹ ವಿಶಿಷ್ಟ ಸಾಹಿತ್ಯ ಎಂದು ಬೆಳೆದು ಬಂದಿರುವುದೇ ಈ ಆಧುನಿಕ ಘಟ್ಟದಲ್ಲಿ ಹೊಸ ಕಲ್ಪನೆಯ ನೈಜತೆಯ ವಿಷಯ ಇಲ್ಲಿ ಮುಖ್ಯವಾಗಿ ಕಂಡು ಬರುತ್ತದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕಾದಂಬರಿಯು ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಆಧುನಿಕ ಸಾಹಿತ್ಯದಲ್ಲಿ ಬೆಳೆದು ಬಂದಿದೆ. ಹಳೆಯ ಬೇರು ಹೊಸ ಚಿಗುರನ್ನು ಮರಕ್ಕೆ ನೀಡಿ ಅದರ ಸೊಬಗನ್ನು ಹೆಚ್ಚಿಸುವಂತೆ ಸಾಹಿತ್ಯವು ಕೂಡಾ ಕಾಲಕಾಲಕ್ಕೆ ಹೊಸ ರೀತಿಯಲ್ಲಿ ಸೃಷ್ಟಿಯಾಗುತ್ತಾ ಆಯಾ ಭಾಷೆಯ ಸಾರಸ್ವತ ಲೋಕಕ್ಕೆ ಮೇರುಗನ್ನು ತಂದುಕೊಡುತ್ತದೆ. ಕಾದಂಬರಿ ಅತ್ಯಂತ ಸ್ವತಂತ್ರವಾದ, ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರ. ಕಾದಂಬರಿಯನ್ನು 'ಕರತಲ ರಂಗಭೂಮಿ' ಎಂದು ಔಚಿತ್ಯ ಪೂರ್ಣವಾಗಿ ಕರೆಯಲಾಗಿದೆ. ಆಧುನಿಕ ಪಾಶ್ಚಾತ್ಯರ ಸಾಹಿತ್ಯದ ಪ್ರಭಾವ ಇದರ ಮೇಲೂ ಆಯಿತು. ತೆಲುಗು, ಬಂಗಾಳಿ, ಹಾಗೂ ಮರಾಠಿ ಸಾಹಿತ್ಯ ಮೊದಲ ಸೂತ್ತಿನ ಕಾದಂಬರಿ ಪ್ರಕಾರವು ಮನುಷ್ಯನ ದುರ್ನಡತೆಯನ್ನು ಚಿತ್ರಿಸುವುದರ ಮೂಲಕ ಅವನು ಸದ್ಭಾವದಿಂದ ನಡೆದುಕೊಳ್ಳಬೇಕೆಂಬ ಉದ್ದೇಶವನ್ನು ಹೊಂದಿ ಆರಂಭಗೊಂಡಿತು. ಗುಲ್ವಾಡಿಯವರ 'ಇಂದಿರಾಬಾಯಿ' (೧೮೯೯) ನೀತಿಪ್ರಧಾನ ಎಂಬುವುದನ್ನು ತೋರಿಸುತ್ತಿದೆ. ಬೋಳಾರ ಬಾಬುರಾಯರ 'ವಾಗ್ದೇವಿ'

(೧೯೦೫) ಘಟನೆಗಳಿಂದ ಕೂಡಿದ್ದು ಕನ್ನಡ ಕಾದಂಬರಿಯ ಲೋಕಕ್ಕೆ ಹಾಸ್ಯ ಪ್ರವೇಶವಾಯಿತು.

ಕಾದಂಬರಿ ಸಾಹಿತ್ಯ ಸಾಮಾನ್ಯ ಜನರ ಆಶೆ, ಅಭಿರುಚಿ ಹಾಗೂ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಮಟ್ಟವನ್ನು ವಿವರಿಸುವ ಮಾಧ್ಯಮವಾಗಿದೆ. ಕಾದಂಬರಿ ಸಾಹಿತ್ಯಕ್ಕೆ ಇಂಥದ್ದೇ ರೂಪ, ಗುಣಲಕ್ಷಣ, ನಿಯಮ, ನಿರ್ಬಂಧನೆಗಳು ಇಲ್ಲವಾದರು ಅದರದೇಯಾದ ನೆಲೆ, ತಾತ್ತ್ವಿಕ ಚೌಕಟ್ಟು ಇರುತ್ತದೆ. ಸಾಮಾನ್ಯವಾಗಿ ಜೀವನ ವೃತಾಂತ ಮತ್ತು ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ವಿಷಯ, ಪಾತ್ರ, ಘಟನೆ, ಪರಿಸರಗಳಿಂದ ವಿಸ್ತರಿಸುವ ರೂಪವನ್ನು ಕಾದಂಬರಿ ಎಂದು ಕರೆಯುತ್ತೇವೆ. ಕಾದಂಬರಿ ವಸ್ತು ವಿಷಯವಾಗಿ ಪ್ರಾದೇಶಿಕತೆ, ಇತಿಹಾಸ, ವಾಸ್ತವತೆ, ಗ್ರಹಿಕೆ, ಧರ್ಮ, ಆಚರಣೆ, ನಂಬಿಕೆ, ಸತ್ಯ, ಮೂಢನಂಬಿಕೆ, ರಾಷ್ಟ್ರೀಯ ಪ್ರಜ್ಞೆ, ಮೊಸ, ಲಂಚಗೂಳಿತನ, ಸಾವು–ನೋವು, ಪ್ರೀತಿ ವಿಶ್ವಾಸ ಇತ್ಯಾದಿ ವಿಷಯಗಳಲ್ಲಿ ರೂಪಗೊಂಡಿರುತ್ತವೆ. ಕಾದಂಬರಿಕಾರರೆಂದೆ ಕರೆಸಿಕೊಳ್ಳುವ ಕೆರೂರು ವಾಸುದೇವಾಚಾರ್ಯ, ಎಮ್.ಎಸ್. ಪುಟ್ಟಣ್ಣ, ದೇವುಡು, ರಾವಬಹ್ದೂರ, ಮಾಸ್ತಿ, ಕೆ.ವಿ.ಅಯ್ಯರ, ಮಿರ್ಜಿ ಅಣ್ಣಾರಾಯ, ಅ.ನ.ಕೃ, ತ.ರಾಸು, ಬಸವರಾಜ ಕಟ್ಟಿಮನಿ, ಚದುರಂಗ, ತ್ರಿವೇಣಿ, ಅಶ್ವತ್ಥ, ನಿರಂಜನ, ಯು.ಆರ್.ಅನಂತಮೂರ್ತಿ. ತೇಜಸ್ವಿ, ಚಿತ್ತಾಲ, ಶಾಂತಿನಾಥ ದೇಸಾಯಿ, ಎಸ್.ಎಲ್.ಭೈರಪ್ಪ, ಎಮ್.ಕೆ.ಇಂದಿರಾ, ಅನುಪಮಾ ನಿರಂಜನ, ದೇವನೂರು ಮಹಾದೇವ ಹೀಗೆ ಅನೇಕ ಕಾದಂಬರಿಕಾರರ ಕಾದಂಬರಿಗಳನ್ನು ನೋಡಿದಾಗ ಅವರ ಭಾಷಾಶೈಲಿ, ವಿಷಯ, ಪಾತ್ರಚಿತ್ರಣದ ವಿಭಿನ್ನ ಶೈಲಿಗಳು ಕಾಣುತ್ತೇವೆ. ಇವರು ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರಾದರು ಸಹ ಇವರ ದೃಷ್ಟಿಕೊನ ಬೇರೆ ಬೇರೆ ಮಾರ್ಗದಲ್ಲೇ ಇರುವದರಿಂದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಎಂಬ ಪಂಥಗಳಿಗೆ ಸೇರಿದವರಾಗಿದ್ದಾರೆ. ಒಬ್ಬರು ನಿಸರ್ಗದ ಕುರಿತು ಕಾದಂಬರಿ ರಚಿಸಿದರೆ ಮತ್ತೊಬ್ಬರು ರಾಷ್ಟ್ರೀಯತೆ ಬಗ್ಗೆ ಇತಿಹಾಸ, ಧರ್ಮ, ಬಡತನ, ಹಸಿವು, ಕುರಿತಾಗಿ ಬರೆಯುವ ಕಾದಂಬರಿಕಾರರು ಇದ್ದಾರೆ.

ಕನ್ನಡ ಆರಂಭಕಾಲೀನ ಕಾದಂಬರಿಗಳು ಬಹು ಬೇಗ ಸಾಮಾಜಿಕ ವಾಸ್ತವೆಕ್ಕೆ ಪ್ರತಿಸ್ಪರ್ದಿಸಿದವು 'ಕಾದಂಬರಿಯ ಸ್ವರೂಪದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ತಮ್ಮದೇ ಆದ ಮಾರ್ಗವನ್ನು ಹುಡಿಕಿ ಕೊಂಡವು. ಕೆಲವರು ಕಾಲ್ಪನಿಕತೆಯನ್ನೇ ಹೆಚ್ಚಾಗಿ ಅವಲಂಬಿಸಿದರೆ ಇನ್ನು ಕೆಲವರು ವಾಸ್ತವ ಕಾಲ್ಪನಿಕ ಅಂಶಗಳ ಸಮನ್ವಯ ಸಾಧಿಸಲು ಯತ್ನಿಸಿದರು'. ಎಂಬ ಡಾ. ಜಿ.ಎಸ್.ಆಮೂರ ಅವರ ಮಾತು ಗಮನಾರ್ಹ.

ಎಸ್.ಎಲ್.ಭೈರಪ್ಪ, ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪಾ, ಗೋಪಾಲಕೃಷ್ಣ ಪೈರವರ ಕಾದಂಬರಿಗಳು ವಿಭಿನ್ನ ನೆಲೆಯಿಂದ ಹುಟ್ಟಿಕೊಂಡು ಬಂದಿರುವದನ್ನು ನಾವು ನೋಡುತ್ತೇವೆ. ಕಾದಂಬರಿ ಸಾಹಿತ್ಯಕ್ಕೆ

ಇಂಥದೇ ರೂಪ ಗುಣಲಕ್ಷಣ ನಿಯಮ ನಿಬಂಧನೆಗಳಿಲ್ಲವಾದರು ಸಹ ಅದರದೇ ಆದ ನೆಲೆ ತಾತ್ತ್ವಿಕ ಚೌಕಟ್ಟು ಇರುತ್ತದೆ. ಸಾಮಾನ್ಯವಾಗಿ ಜೀವನ ವೃತ್ತಾಂತ ಮತ್ತು ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ವಿಷಯ, ಪಾತ್ರ,ಘಟನೆ, ಪರಿಸರಗಳಿಂದ ವಿಸ್ತರಿಸುವ ರೂಪವನ್ನು ಕಾದಂಬರಿ ಎಂದು ಕರೆಯುತ್ತೇವೆ.

ಅಕಾಡಮಿಕ ವಲಯದಿಂದ ಹೊರಗಿನವರಾದ ಗೋಪಾಲಕೃಷ್ಣ ಪೈರವರು ವೃತ್ತಿಯಿಂದ ನಿವೃತ್ತ ಬ್ಯಾಂಕ ಅಧಿಕಾರಿಯಾಗಿದ್ದರು ಸಹ ಕನ್ನಡ ಸಾಹಿತ್ಯದಲ್ಲಿ ತಮ್ಮನ್ನು ಕಥನ ಮತ್ತು ಕಾದಂಬರಿ ಸಾಹಿತ್ಯದಿಂದ ಗುರುತಿಸಿಕೊಂಡವರು. ಇವರ 'ಸ್ವಪ್ನ ಸಾರಸ್ವತ' ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಕಾದಂಬರಿಕಾರರು ನಾನೂರು ವರ್ಷದ ಹಿಂದಿನ ಘಟನೆಯನ್ನು ತಗೆದುಕೊಂಡು ತಮ್ಮ ಕಲ್ಪನ ಶೈಲಿಯನ್ನು ಅಳವಡಿಸಿ ಕಾದಂಬರಿಯನ್ನು ರಚನೆ ಮಾಡಿದ್ದಾರೆ. ನಾನೂರು ವರ್ಷಗಳ ಹಿಂದೆ ಗೋವಾದಲ್ಲಿ ಸಂತೃಪ್ತವಾಗಿದ್ದ ಸಾರಸ್ವತ ಬ್ರಾಹ್ಮಣರ ಕುಟುಂಬಗಳು ಪೋರ್ಚುಗೀಸರ ಆಕ್ರಮಣದಿಂದ ತಮ್ಮ ನಂಬಿಕೆ, ಧರ್ಮ, ಜೀವಗಳನು, ಉಳಿಸಿಕೊಳ್ಳಲೂ ದಕ್ಷಿಣಾಭಿಮುಖವಾಗಿ ಹೋಗುವುದರಿಂದಲೇ ಈ ಕಾದಂಬರಿಯ ವಸ್ತು ಹುಟ್ಟುತ್ತದೆ. ಮುಂದೆ ವಲಸೆ ಹೋಗಿ ಬೆಳೆದ ಆ ಕುಟುಂಬಗಳ ಎಲ್ಲಾ ಪಾತ್ರಗಳು ಈ ಕಾದಂಬರಿಯ ವಿಷಯಗಳೆ ಆಗಿವೆ. ಸಾವಿನ ನೆರಳಿನಲ್ಲೂ ತಮ್ಮ ಸ್ವಂತಿಕೆ ಉಳಿಸಿಕೊಳ್ಳಲು ಯತ್ನಿಸಿದ ಸಾರಸ್ವತ ಸಮುದಾಯದ ಕಥೆಯಾಗಿದೆ.

ವಲಸೆಯಿಂದ ಪ್ರಾರಂಭವಾಗುವ ಕಥೆ ನಂತರದಲ್ಲಿ ಮಹಾಭಾರತದಂತೆ ವಿರಾಟ ಸ್ವರೂಪವನ್ನು ಪಡೆಯುತ್ತದೆ. ಕಾದಂಬರಿಯು ಇತಿಹಾಸದ ನೆಲೆಯಲ್ಲಿ ಹಾದುಹೋಗುವಾಗ ಪುರಾಣ, ನಂಬಿಕೆ, ಧರ್ಮಾಭಿಮಾನ, ಮನೆತನಗಳ ಭದ್ರತೆ ಇವುಗಳೆಲ್ಲ ಬೆಂಬಿಡದೆ ಹೋಗುವುದು ಬಹುಮುಖ್ಯ. ಕಥನವು ಇತಿಹಾಸದ ಫ್ರೇಮಿನಲ್ಲಿ ಸಮುದಾಯವೊಂದರ ಬದುಕಿನ ವ್ಯಾಪಾರವೊಂದರ ಆಗು ಹೋಗುಗಳ ಕಡೆಗೇ ಬೆಳಕನ್ನು ಚೆಲ್ಲಿರುವುದು ವಿಶೇಷ. ವಲಸೆಯಲ್ಲಿ ರಾಜಕಾರಣದ ಸೂಕ್ಷ್ಮಗಳು, ಭೂಮಿಯ ಪ್ರಶ್ನೆ ತನ್ನ ಸಮುದಾಯದಲ್ಲಿ ಕುಟುಂಬದಲ್ಲಿ ಹುಟ್ಟಿಕೊಂಡ ಸ್ವಾರ್ಥ, ಅಸೂಹೆ, ದ್ವೇಷಗಳು ಬಿಚ್ಚಿಕೊಳ್ಳತ್ತಾ ಹೊಗುತ್ತವೆ. ಬದುಕನ್ನು ಕಟ್ಟಿಕೊಳ್ಳುವ ಆಶಯವಾಗಿ ಇಲ್ಲಿನ ವಲಸೆಯ ಆಶಯಬಂದಿದೆ. ಕಾದಂಬರಿಯು ಒಂದು ದಿರ್ಘಪ್ರಮಾಣದ ವಿನ್ಯಾಸಲ್ಲಿಯೇ ರಚನೆಗೊಂಡಿದೆ. ಬದುಕು ಕೂಡಾ ಒಂದು ಪ್ರಯಾಣ ಎಂದು ಹೇಳುವದು ಈ ಅರ್ಥದಲ್ಲಯೇ ಇರಬೇಕು.

ಅಧ್ಯಯನದ ಮಹತ್ವ

ಗೋಪಾಲಕೃಷ್ಣ ಪೈರವರು 'ಸ್ವಪ್ನ ಸಾರಸ್ವತ' ಕಾದಂಬರಿಯು ಚರಿತ್ರೆ ನಿಟ್ಟುಕೊಂಡ ಕಲ್ಪನಧಾರಿತ ಕಾದಂಬರಿಯಾಗಿದೆ. ನಾನೂರ ವರ್ಷಗಳಲ್ಲಿ ಹಾದುಬಂದ ಸಾರಸ್ವತ ಸಮುದಾಯದ ಅನುಭವಗಳ ಮೂಲಕ ಚರಿತ್ರೆ ಹಾಗೂ ವರ್ತಮಾನದ ಜೀವನದ ಪರಸ್ಪರ ಮುಖಾಮುಖಿಗಳನ್ನು ಸಂಬಂಧಗಳನ್ನು ವೈಯಕ್ತಿಕ ಅನುಭವದ ನೆಲೆಗಳಲ್ಲಿ ಕೌಟುಂಬಿಕ ಸಂದರ್ಭಗಳಲ್ಲಿಟ್ಟು ಪರೀಕ್ಷಿಸುತ್ತದೆ. ಇತಿಹಾಸವನ್ನು ನೆನಪಿಗೆ ತರುವ ಈ ಕಾದಂಬರಿ ಅರಸು, ಯುದ್ಧ, ರಾಜ್ಯ ವಿಸ್ತರಣೆ ಎಂಬ ವಿಷಯಗಳ ಬಗ್ಗೆಹೇಳದೆ ಸಾರಸ್ವತ ಸಮುದಾಯಗಳ ಜೀವನ ಕುರಿತು ಹೇಳುತ್ತದೆ.

ಪೋರ್ಚುಗೀಸರು ಆಡಳಿತ ನಡೆಸಿದ ಕಾಲವನ್ನಿಟ್ಟುಕೊಂಡು ಅದಕ್ಕೆ ನಿರೂಪಕರು ತಮ್ಮ ಕಲ್ಪನೆಯನ್ನು ಬೆರೆಸಿ ಕಾದಂಬರಿಯನ್ನು ರಚನೆ ಮಾಡಿ ವಾಸ್ತವತೆಯಲ್ಲಿ ಇಟ್ಟು ನೋಡುತ್ತಾರೆ. ಪರಕೀಯರ ಬಗ್ಗೆ ಹೇಳುತ್ತಾ ನಮ್ಮ ಅರಸರ ಚಿತ್ರಣವನ್ನು ಇಲ್ಲಿ ಕಾಣುತ್ತೇವೆ. ಚರಿತ್ರೆ ಎಂದರೇ ಕೇವಲ ಚಕ್ರವರ್ತಿಗಳ ಕಥೆಯಲ್ಲ ಸಾಮಾನ್ಯ ಜನರ ಸ್ಥಳಿಯ ಆಡಳಿತದಲ್ಲಿ ಹೊಂದಿಕೊಂಡು ಬೆಳೆದ ಭಾಗವೂ ಚರಿತ್ರೆಯಾಗಿದೆ ಎಂಬುದನ್ನು ಈ ಕಾದಂಬರಿ ತೊರಿಸುತ್ತದೆ.

'ಸ್ವಪ್ನ ಸಾರಸ್ವತ' ಕಾದಂಬರಿ ಗೋವೆಯ ಪರಿಸರದಿಂದ ಪ್ರಾರಂಭವಾಗಿ ಮಂಗಳೂರು ಪರಿಸರದಲ್ಲಿ ಮುಕ್ತಾಯಗೊಳ್ಳುತ್ತದೆ. ಈ ಪರಿಸರದಲ್ಲಿಯ ಸಾರಸ್ವತ ಸಮುದಾಯಗಳ ಪಾರಿಭಾಷಿಕ ಪದಗಳಾಗಿ ಕೊಂಕಣಿ ಭಾಷಾಪದಗಳು ಬಳಕೆಯಾಗಿವೆ. 'ಬದುಕಿನಲ್ಲಿ ಧರ್ಮ ಎಂಬುವದು ಎಲ್ಲವನ್ನು ಮಿರಿನಿಲ್ಲುವಂತದ್ದು' ಎಂಬುದನ್ನು ವಿಟ್ಠು ಪೈ ಮತ್ತು ಅಲ್ವೇರಾಳ ಸಂಬಂಧದ ಹಿನ್ನೆಲೆಯಲ್ಲಿ ಚಿತ್ರಣಗೊಂಡಿದೆ. ಕಾಲ್ಪನಿಕ ಸತ್ಯವನು ಪ್ರತಿಬಿಂಬಿಸುವ ಸ್ವಪ್ನ ಸಾರಸ್ವತ ಕನ್ನಡಕ್ಕೊಂದು ವಿಶಿಷ್ಟವಾದ ಕಾದಂಬರಿಯಾಗಿದೆ. ಧರ್ಮವೇ ಇಲ್ಲಿ ಮೂಲ 'ನಾವು ಧರ್ಮವನ್ನು ಕಾಪಾಡಿದರೇ ನಮ್ಮನ್ನು ಧರ್ಮ ಕಾಪಾಡುತ್ತದೆ' ಎಂಬುವದು ಸಾರಸ್ವತರ ಜಾಗ್ರತ ಧ್ವನಿಯಾಗಿ ಕಾದಂಬರಿಯಲ್ಲಿ ಬಂದಿದೆ. ಬದುಕಲು ಮನುಷನಿಗೆ ಆಹಾರ, ನೀರು, ಗಾಳಿ ಎಷ್ಟು ಮುಖ್ಯವೋ ಅಷ್ಟೇ ಧರ್ಮ, ನಂಬಿಕೆ, ಆಚರಣೆಗಳು ಮುಖ್ಯವಾಗಿವೆ ಎಂಬುದನ್ನು ಪ್ರತಿಯೊಂದು ಸನ್ನಿವೇಶದಲ್ಲಿ ಕಾದಂಬರಿ ಒತ್ತಿ ಹೇಳಿದೆ.

ನಾನೂರು ವರ್ಷಗಳ ಹಿಂದೆ ಆಗಿಹೊದ ಘಟನೆಗಳನ್ನು ಕಲ್ಪನೆಯ ಹಿನ್ನೆಲೆಯಲ್ಲಿ ನೈಜತೆಯಂತೆ ಚಿತ್ರಣವಾಗಿದೆ. ಕಾದಂಬರಿಯ ನಾಯಕನಾಗಿ ರಾಮಚಂದ್ರ ಪೈ ಕಾಣಿಸಿಕೊಳ್ಳುತ್ತಾನೆ. ಇವನ ಮತ್ತು ಇವನ ಪೂರ್ವಜರ ಕಥೆಯನ್ನು ಕಾದಂಬರಿ ವಸ್ತುವಾನ್ನಾಗಿಟ್ಟುಕೊಂಡು ಸಾರಸ್ವತ ಸಮುದಾಯದ ಸುತ್ತ ಹೆಣೆದು ಕೊಂಡಿದೆ. ಪೋರ್ಚುಗೀಸರ ದಬ್ಬಾಳಿಕೆ ಒಂದೆಡೆಯಾದರೆ ಬ್ರಾಹ್ಮಣರ ಅಸಹಾಯಕತೆ ಇನ್ನೊಂದೆಡೆ ಇವುಗಳ ಮಧ್ಯ ಕರ್ಪೂರದ ಗೊಂಬೆಯಂತೆ ಬರುವ ಅಲ್ವೇರಾಳ ಪಾತ್ರ ಚಿತ್ರಣವನ್ನು ಲೇಖಕರು ಸುಂದರವಾಗಿ ಚಿತ್ರಿಸಿದ್ದಾರೆ. ಇತಿಹಾಸ ಆಧರಿತ

ಕಾದಂಬರಿಯಾದರೂ ಸಹ ವರ್ತಮಾನ ಕಾಲದಲ್ಲಿ ನಿಂತು ಕಾದಂಬರಿಯನ್ನು ಚಿತ್ರಿಸಿದ್ದಾರೆ. ಕಾದಂಬರಿಯಲ್ಲಿ ಹಲವಾರು ಸಂಗತಿಗಳ ಬದುಕಿನ ಕ್ಲಿಷ್ಟತೆಯಿಂದ ಬಿಚ್ಚಿಕೊಳ್ಳುತ್ತವೆ. ಹಿಂಸೆ-ಅಹಿಂಸೆ, ಪ್ರೀತಿ-ದ್ವೇಷ ತ್ಯಾಗ ಬಲಿದಾನವು ಇದೆ. ನಿರಂತರ ಹರಿಯುವ ನದಿ ನೀರಿನಂತೆ ಸಾರಸ್ವತ ಕುಟುಂಬಗಳ ಜೀವನ ಹರಿಯುತ್ತಲೆ ಇದೆ.

ಈ ಕಾದಂಬರಿಯನ್ನು ಓದಿದ ವಿದ್ವಾಂಸರು ತಮ್ಮ ಲೇಖನಗಳ ಮೂಲಕ ಅಭಿಪ್ರಾಯ ಹೇಳಿರುವ ಟಿ. ಪಿ. ಅಶೋಕ, ಹೆಚ್. ಎಸ್. ರಾಘವೇಂದ್ರರಾವ, ಎನ್.ಮನುಚಕ್ರವರ್ತಿ, ಎಸ್.ದಿವಾಕರ, ಅಶೋಕ ಹೆಗಡೆ, ಶ್ರೀನಿವಾಸ ವೈದ್ಯ, ಎಸ್.ಆರ್.ವಿಜಯಶಂಕರ್, ಕೆ.ಎಸ್.ಸತ್ಯ ನಾರಾಯಣ, ಮಹಾಲಿಂಗ, ಗುರುಪ್ರಸಾದ ಕಾಗಿನೆಲೆ, ವಿಲಿಯಂ, ಎಚ್.ದಂಡಪ್ಪ, ಚ.ಹ.ರಘುನಾಥ, ಹೀಗೆ ಹಲವೂ ವಿದ್ವಾಂಸರುಗಳ ಲೇಖನಗಳು 'ಸ್ವಪ್ನ ಸಾರಸ್ವತ' ಕಾದಂಬರಿಯ ಅಧ್ಯಯನಕ್ಕೆ ಪೂರಕವಾಗಿವೆ ಅಲ್ಲದೇ ಮಹತ್ವದಾಗಿವೆ.

ಕನ್ನಡ ಕಾದಂಬರಿಯ ಪ್ರಕಾರಗಳಲ್ಲಿ ಎಂ.ಎಸ್.ಪುಟ್ಟಣ್ಣ, ಶಿವರಾಮ ಕಾರಂತ, ಅನಕೃ, ತರಾಸು, ನಿರಂಜನ, ಕಟ್ಟಿಮನಿ ಹೀಗೆ ಹಲವೂ ಕಾದಂಬರಿಕಾರರು ಬೇರೆ ಬೇರೆ ನೆಲೆಗಳಲ್ಲಿ ಕಾದಂಬರಿಯ ರಚನೆ ಮಾಡಿದರು ಕೂಡಾ ಆ ಕಾದಂಬರಿಗಳಿಗಿಂತ ಗೋಪಾಲಕೃಷ್ಣ ಪೈರವರ "ಸ್ವಪ್ನ ಸಾರಸ್ವತ" ಕಾದಂಬರಿಯು ವಿಭಿನ್ನವಾಗಿ ಕಂಡುಬರುತ್ತದೆ. ನಡೆದುಹೋದ ಘಟನೆಯನ್ನು ಕಲ್ಪನೆಯ ಹಿನ್ನೆಲೆಯಲ್ಲಿ ವಾಸ್ತವಾಗಿ ಕಾಣುವಂತೆ ಕಾದಂಬರಿಕಾರರು ರಚನೆ ಮಾಡಿದ್ದಾರೆ.

ಒಂದು ಶತಮಾನ ಪೂರೈಸಿದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಲಸೆ ಹೋಗುವ ವಿಷಯದ ಕುರಿತು ಹಲವಾರು ಕಾದಂಬರಿಗಳು ಬೆಳೆದು ಬಂದಿವೆ. ಆದರೆ ಅವು ವ್ಯಕ್ತಿ ಇಲ್ಲವೇ ಕುಟುಂಬಗಳಿಗೆ ಮಾತ್ರ ಸೀಮಿತವಾಗಿವೆ. 'ಸ್ವಪ್ನ ಸಾರಸ್ವತ' ಕಾದಂಬರಿ ಒಂದು ಸಾರಸ್ವತ ಸಮುದಾಯವೇ ವಲಸೆ ಹೋಗುವ ಚಿತ್ರಣವನ್ನು ಮಾಡಿರುವದು ಕನ್ನಡ ಕಾದಂಬರಿ ಕ್ಷೇತ್ರದಲ್ಲೇ ಒಂದು ಸಾಧನೆ ಎಂಥಲೇ ಹೇಳಬಹುದು.

ಈಚೆಗೆ ಹೊಸ ಸಾಮಾಜಿಕ ವ್ಯವಸ್ಥೆ ಜಾಗತಿಕ ವಿದ್ಯಮಾನಗಳು ಗ್ರಾಮೀಣ ಬದುಕಿನ ರೂಪಾಂತರ ಮೌಲ್ಯ ಸಂಘರ್ಷಗಳಿಂದ ಲೇಖಕರು ಹೊಸದಾದ ಪ್ರಯೋಗಗಳಿಗೆ ತೊಡಗಿದ್ದಾರೆ. 'ಸ್ವಪ್ನ ಸಾರಸ್ವತ'ವು ಸಾರಸ್ವತ ಕುಟುಂಬಗಳ ಅನ್ವೇಷಣೆಯ ನೆಪದಲ್ಲಿ ನೀಡುವ ಆಶೆಗಳನ್ನು ಗುರುತಿಸುವ ಗ್ರಹಿಸುವ ಉದ್ದೇಶವೂ ಪ್ರಸ್ತುತ ಅಧ್ಯಯನಕ್ಕಿದೆ ಹೀಗೆ ಅಧ್ಯಯನವೂ ಮಹತ್ವದಾಗಿದೆ.

ಅಧ್ಯಯನದ ವ್ಯಾಪ್ತಿ

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಗೋಪಾಲಕೃಷ್ಣ ಪೈರವರ ಚೊಚ್ಚಲ ಕಾದಂಬರಿಯಾದ 'ಸ್ವಪ್ನ ಸಾರಸ್ವತ' ಮಹತ್ವದ ಕಾದಂಬರಿಯಾಗಿದೆ. ಇದು ನಾನೂರು ವರ್ಷಗಳ ಹಿಂದೆ ನಡೆದು ಹೊದ ಘಟನೆಯನ್ನು ವಸ್ತುವಾಗಿಟ್ಟುಕೊಂಡು ಲೇಖಕರು ತಮ್ಮ ಕಲ್ಪನ ಶಕ್ತಿಯಿಂದಾ ಕಾದಂಬರಿಗೆ ಜೀವ ತುಂಬಿದ್ದಾರೆ.

'ಸ್ವಪ್ನ ಸಾರಸ್ವತ' ಕಾದಂಬರಿಯ ಸಮಗ್ರ ಅಧ್ಯಯನ ಮಾಡಲಾಗಿದ್ದು. ಕನ್ನಡ ಕಾದಂಬರಿ ಪರಂಪರೆಯಿಂದ ಕೆಲವೂ ಕಾದಂಬರಿಗಳನ್ನು ತೆಗೆದುಕೊಂಡು ಅವುಗಳಿಗೂ ಮತ್ತು ಈ ಕಾದಂಬರಿಗೆ ಇರುವ ಭಿನ್ನತೆಯನ್ನು ನೋಡಲಾಗಿದೆ. ಕಾದಂಬರಿಯ ಕುರಿತ ಅಧ್ಯಯನಗಳ ತಾತ್ತ್ವಿಕ ಚರ್ಚೆಯನ್ನು ಒಂದು ಅಧ್ಯಾಯವಾಗಿ ನೋಡಲಾಗಿದೆ. ಮೊದಲ ಅಧ್ಯಯದಲ್ಲಿ ಅಧಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ನೋಡುವದಾಗಿದೆ. ಎರಡನೇ ಅಧ್ಯಾಯದಲ್ಲಿ ಕಾದಂಬರಿಯ ಪ್ರಕಾರದ ವಿಶೇಷತೆ. ಮೂರನೇ ಅಧ್ಯಾಯದಲ್ಲಿ ಕನ್ನಡ ಕಾದಂಬರಿ ಪರಂಪರೆ ಮತ್ತು ಸ್ವಪ್ನ ಸಾರಸ್ವತ ಕುರಿತ ಚರ್ಚೆ. ನಾಲ್ಕನೆಯ ಅಧ್ಯಾಯದಲ್ಲಿ ಕಾದಂಬರಿ ವಸ್ತು ವಿಶ್ಲೇಷಣೆ. ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ನೋಡಲಾಗಿದೆ. ಕೊನೆಯಲ್ಲಿ ಛಾಯಾಚಿತ್ರಗಳನ್ನು ಮತ್ತು ಅಧ್ಯಯನಕ್ಕೆ ಪೂರಕವಾದ ಗ್ರಂಥಗಳನ್ನು ಕೊಡಲಾಗಿದೆ. ಇದು ಅಧ್ಯಯನದ ವ್ಯಾಪ್ತಿಯಾಗಿದೆ.

ಈ ಕಾದಂಬರಿಯ ಕಥಾವಸ್ತು ಹುಟ್ಟು ಮತ್ತು ಸಾವು ಸಾರಸ್ವತ ಕುಟುಂಬದ ಸುತ್ತ ಹೆಣೆದು ಕೊಂಡಿದೆ. ಗೋವಾ ಸುತ್ತಮುತ್ತಲಿನ ಸಾರಸ್ವತ ಕುಟುಂಬಗಳು ಮಂಗಳೂರು ಸುತ್ತಮುತ್ತಲಿನ ಪ್ರದೇಶಗಳಿಗೆ ಬಂದು ನೆಲೆ ನಿಲ್ಲುವುದು ಕಾದಂಬರಿಯ ವಸ್ತುವಾಗಿದೆ. ಇಹಾಸದಲ್ಲಿ ಲೇಖಕರು ತಮ್ಮ ಕಲ್ಪನ ವಸ್ತುವನ್ನು ಹೇಗೆ ಅಳವಡಿಸಿದ್ದಾರೆ. ಅವರ ಗ್ರಹಿಕಾ ಸಾಮರ್ಥ್ಯವನ್ನು ಕಾದಂಬರಿಯ ಅಧ್ಯಯನ ದಿಂದಾ ತಿಳಿಯತ್ತೇವೆ. ಮುಂತಾದ ವಿಷಯ ಕುರಿತ ಅಧ್ಯಯನ ಮಾಡಲಾಗಿದ್ದು ಇದು ಪ್ರಸ್ತುತ ಕಿರುಪ್ರಬಂಧದ ವ್ಯಾಪ್ತಿಯಾಗಿದೆ.

ಅಧ್ಯಯನದ ವೈಧಾನಿಕತೆ

ಕಾದಂಬರಿಯನ್ನು ಇತಿಹಾಸ, ರಾಜಕೀಯ, ಆರ್ಥಿಕ, ಪ್ರಾದೇಶಿಕತೆ, ಸಮಾಜ ಜೀವನ ಕ್ರಮ, ಧರ್ಮ, ಸಾಹಿತ್ಯ, ಇತ್ಯಾದಿ ಹಿನ್ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಕಾದಂಬರಿಯ ವಸ್ತು ಮತ್ತು ಆಶೆಯನ್ನೇ ಕೇಂದ್ರವಾಗಿಟ್ಟು ಅಧ್ಯಯನ ಮಾಡಲಾಗಿದೆ. ಪಾತ್ರಗಳ ಚಿತ್ರಣವನ್ನು ಒಂದು ವಿಶೇಷತೆಯಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಭಾಷಿಕ ವಿವೇಚನೆಯನ್ನು ಪ್ರಾದೇಶಿಕ ಭಾಷೆ, ದ್ವಿರುಕ್ತಿಪದಗಳು, ಉಪಮೇಯ, ಬೈಗುಳಗಳು, ಜೋಡಿನುಡಿ ಪದ ವಿಶಿಷ್ಟಪದ ಪ್ರಯೋಗ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

⇒ ಕಾದಂಬರಿಯನ್ನು ಚರಿತ್ರೆಯ ಹಿನ್ನೆಲೆ ಇಟ್ಟುಕೊಂಡು ರಚನೆಯಾಗಿರುವ ಕುರಿತು ಅಧ್ಯಯನ ಮಾಡಲಾಗಿದೆ.

⇒ ಕಾದಂಬರಿಯ ಪ್ರಕಾರವು ಕಲ್ಪನೆಯ ಹಿನ್ನೆಲೆಯಲ್ಲಿ ಚರಿತ್ರೆಯನ್ನು ಅಳವಡಿಸಿಕೊಂಡು ರಚನೆಯಾಗಿರುವ ಕುರಿತ ಅಧ್ಯಯನ.

⇒ ಚರಿತ್ರೆ ಮತ್ತು ಕಲ್ಪನೆಯನ್ನು ಇಟ್ಟುಕೊಂಡು ಕಾದಂಬರಿಯನ್ನು ನಿರೂಪಕರು ವಾಸ್ತವತೆಯ ಹಿನ್ನಲೆಯಲ್ಲಿ ನಿಂತು ರಚನೆ ಮಾಡಿರುವುದನ್ನು ನೋಡಲಾಗಿದೆ.

⇒ ಕನ್ನಡ ಕಾದಂಬರಿ ಪರಂಪರೆಯ ನಿಟ್ಟುಕೊಂಡು ಕೆಲವೂ ಕಾದಂಬರಿಗಳ ಹಿನ್ನೆಲೆಯಲ್ಲಿ 'ಸ್ವಪ್ನ ಸಾರಸ್ವತ' ಕಾದಂಬರಿ ಭಿನ್ನತೆಯನ್ನು ಗುರ್ತಿಸಲಾಗಿದೆ. ಈ ನಾಲ್ಕು ನೆಲೆಗಳಲ್ಲಿ ಕಾದಂಬರಿಯ ಕುರಿತಾದ ಅಧ್ಯಯನವನ್ನು ಗ್ರಹಿಸಲಾಗಿದೆ.

ಇದು ಆದರ್ಶ ಮಾನವೀಯತೆಗಳು ಅದರ ಮೂಲ ಮೌಲ್ಯಗಳಲ್ಲಿ ಒಂದು ಆಧುನಿಕ ಮನಸ್ಸು ಇರಬೇಕಾದ್ದು ಹೇಗೆ ಎಂಬುದರ ಬಗ್ಗೆ ಹೆಚ್ಚು ಯೋಜಿಸುವುದಿಲ್ಲ. ಇರುವದು ಹೇಗೆ ಎಂಬುದನ್ನು ಗ್ರಹಿಸತೊಡಗುತ್ತದೆ. ಕಾದಂಬರಿಯಲ್ಲಿ ಬಳಕೆಯಾದ ಕೊಂಕಣಿ ಭಾಷಾ ಪದಗಳ ಬಳಕೆ ಕಾದಂಬರಿಗೆ ಮೆರಗನ್ನು ತಂದಿದೆ. ಇದು ಅಧ್ಯಯನದ ವೈಧಾನಿಕತೆಯಾಗಿದೆ.

ಅಧ್ಯಾಯ – ೨

'ಕಾದಂಬರಿ' ಪ್ರಕಾರದ ವಿಶೇಷತೆ

ಅಧ್ಯಾಯ – ೨

ಕಾದಂಬರಿ ಪ್ರಕಾರದ ವಿಶೇಷತೆ

ಸಾಹಿತ್ಯ ರಚನೆಯ ವಿವಿಧ ಪ್ರಕಾರಗಳಾದ ಕಾವ್ಯ, ನಾಟಕ, ವಿಮರ್ಶೆ, ಭಾವಗೀತೆ ಯಂತೆ ಕಾದಂಬರಿಯು ಒಂದು ಮಹತ್ವದ ಪ್ರಕಾರ ಎನಿಸಿಕೊಂಡಿದೆ. ಕೆಲಚಿಂತಕರು ಕಾದಂಬರಿ ಸಾಹಿತ್ಯ ೧೯ನೇ ಶತಮಾನದ ಕೊನೆಗೆ ಮತ್ತು ೨೦ನೇ ಶತಮಾನದ ಆರಂಭದಲ್ಲಿ ಕಾಣಿಸಿಕೊಂಡಿದೆ ಎಂದು ಹೇಳುತ್ತಾರೆ. ಈ ಪ್ರಕಾರ ಮೊದಲಿಗೆ ಆರಂಭವಾದುದು ಭಾಷಾಂತರದಿಂದಲೇ ಎಂಬುದು ಗಮನಾರ್ಹ. ಇದೇ ಮುಂದೆ ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳು ರಚನೆಯಾಗಲು ಪ್ರೇರಣೆ ಆಯಿತೆಂಬುದನ್ನು ಅಲ್ಲಗಳೆಲಾಗದು. ಬಿ. ಎಮ್. ಶ್ರೀಕಂಠಯ್ಯನವರು ಹೇಳುವಂತೆ 'ಭಾಷಾಂತರ ಕೀಳು ಕೆಲಸವಲ್ಲ ಸುಲಭದ ಕೆಲಸವು ಅಲ್ಲ. ನಿರರ್ಥಕವಾದ ಕೆಲಸವು ಅಲ್ಲ'[೧] ಎಂಬ ಮಾತು ಈ ಕಾರ್ಯದ ಮಹತ್ವವನ್ನು ಕುರಿತು ಹೇಳಿದುದೆ ಆಗಿದೆ. ನಮ್ಮ ಸಾಹಿತ್ಯದಲ್ಲಿ ವೈವಿಧ್ಯ ಮತ್ತು ಬೆಳವಣಿಗೆಯ ಉದ್ದೇಶದಿಂದ ಸಂಸ್ಕೃತ ,ಬಂಗಾಳಿ, ಮರಾಠಿ, ಇಂಗ್ಲಿಷ ಇತ್ಯಾದಿ ಭಾಷೆಗಳಿಂದ ಮಾಡಿದ ಭಾಷಾಂತರ ನಮ್ಮ ಸಾಹಿತ್ಯ ಬಹುಮುಖವಾಗಿ ಬೆಳೆಯಲಿಕ್ಕೆ ಮುಖ್ಯ ಕಾರಣವಾಗಿದೆ.

ಕಾದಂಬರಿಯು ಅತ್ಯಂತ ಜನಪ್ರಿಯ ಹಾಗೂ ಆಧುನಿಕ ಪ್ರಕಾರವಾಗಿ ಬೆಳೆದು ಬಂದಿದೆ. ಕಾದಂಬರಿ ಸಾಹಿತ್ಯ ಸಾಮಾನ್ಯ ಜನರ ಆಶೆ ಅಭಿರುಚಿ ಹಾಗೂ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಮಟ್ಟವನ್ನು ವಿವರಿಸುವ ಮಾಧ್ಯಮವಾಗಿದೆ. ಕಾದಂಬರಿ ಸಾಹಿತ್ಯಕ್ಕೆ ಇಂಥವೇ ರೂಪ, ಗುಣಲಕ್ಷಣ, ನಿಯಮ ನಿರ್ಬಂಧಗಳಿಲ್ಲವಾದರೂ ಅದರದೇ ಆದ ನೆಲೆ ತಾತ್ತ್ವಿಕ ಚೌಕಟ್ಟು ಇರುತ್ತದೆ. ಸಾಮಾನ್ಯವಾಗಿ ಜೀವನ ವೃತ್ತಾಂತ ಮತ್ತು ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ವಿಷಯ, ಪಾತ್ರ, ಘಟನೆ, ಪರಿಸರಗಳಿಂದ ವಿಸ್ತರಿಸುವ ರೂಪವನ್ನು ಕಾದಂಬರಿ ಎಂದು ಕರೆಯುತ್ತಾರೆ.

ಕಾದಂಬರಿಗಳ ಬಗ್ಗೆ ಕೆಲವರ ವ್ಯಾಖ್ಯಾನಗಳು

೧. "ಕಾದಂಬರಿ ಕಲೆ ನಮ್ಮ ಒಂಟಿ ಬದುಕನ್ನು ಬಹುರೂಪಿಯಾಗಿ ಗುಣಿಸಿ, ನಮ್ಮ ವ್ಯಕ್ತಿತ್ವದಿಂದಲೇ ಪಾರು ಮಾಡಿ ಪರಕಾಯ ಪ್ರವೇಶದ ಶಕ್ತಿಯನ್ನು ನಮ್ಮಲ್ಲಿ ಧಾರಾಳಗೊಳಿಸುತ್ತದೆ". – ಆರ್ಟಿಕಾಗ್ಯಾಸೆ

೨. ಕಾದಂಬರಿ ಎಂದರೇ 'ಗದ್ಯರೂಪದಲ್ಲಿರುವ ವೈನೋದಿಕ ಮಹಾಕಾವ್ಯ'. – ಹೆನ್ರಿ ಫೀಲ್ಡಿಂಗ್

೩. 'ಕಾದಂಬರಿ ಕರತಲ ರಂಗಭೂಮಿ'. – ಮ್ಯಾನ್ಯುಯನ್ ಕ್ರಾಫರ್ಡ.[೨]

೪. 'ಕಾದಂಬರಿ ಒಂದು ದೀರ್ಘ ಕಥಾ ಪ್ರಬಂಧ' – ಫ್ರಾಂಕ್ ಕರ್ಮೋಡ್.[೩]

೫. 'ಮನುಷ್ಯ ಇರುವರೆಗೆ ಸಾಧಿಸಿದ ಅಭಿವ್ಯಕ್ತಿಯ ಅತ್ಯುನ್ನತ ರೂಪ'. – ಜೇಮ್ಸ್.[೪]

೬. ಕಾದಂಬರಿ ಜೀವನದ ಏಕೈಕ ಉಜ್ವಲ ಪುಸ್ತಕ – ಡಿ. ಎಚ್. ಲಾರೆನ್ಸ್.[೫]

೭. ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಅತ್ಯಂತ ಸ್ವತಂತ್ರವಾದದ್ದು, ಅತ್ಯಂತ ಸ್ಥಿತಿ ಸ್ಥಾಪಕ ಗುಣಉಳ್ಳದ್ದು, ಅತ್ಯಂತ ಪ್ರಚಂಡವಾದದ್ದು – ಹೆನ್ರಿ ಜೇಮ್ಸ್.

೮. "ಕಾದಂಬರಿ ಒಂದು ಸ್ವತಂತ್ರ ಸಂಕಥನವಾಗಿರದೆ ಮೂರು ಸಂಕಥನಗಳ ಸಂಯೋಗದಲ್ಲಿ ಹುಟ್ಟುವ ಪ್ರಕಾರವಾದುದರಿಂದ ಅದರ ಸ್ವರೂಪ ಜಿಜ್ಞಾಸೆ ಜಟಿಲವಾಗಿದೆ. ಈ ಮೂರು ಸಂಕಥನಗಳೆಂದರೇ ಕಲ್ಪನೆ, ಕಥನ ಹಾಗೂ ಭಾಷೆ. ಈ ಮೂರು ಸಂಕಥನಗಳ ಯಥಾರ್ಥ ತಿಳುವಳಿಕೆಯಿಲ್ಲದೇ ಕಾದಂಬರಿಯ ಸ್ವರೂಪ ಅವ್ಯಗತವಾಗಲಾರದು ಎಂದಿದ್ದಾರೆ"– ಜಿ. ಎಸ್.ಆಮೂರ.[೬]

ಪ್ರತಿಯೊಂದು ಕಾದಂಬರಿಯು ಕಥೆಯನ್ನು ಹೇಳುತ್ತದೆ. ಆದರೆ ಕಥೆಯನ್ನು ಹೇಳುವವರು ಯಾರು, ಅವರಿಗೂ ಕಥೆಗೂ ಇರುವ ಸಂಬಂಧವೇನು ಎಂಬುದು ಮುಖ್ಯ ಪ್ರಶ್ನೆ ಬಹಳಷ್ಟು ಕಾದಂಬರಿಗಳಲ್ಲಿ ಮುಖ್ಯವಾಗಿ ಕಾದಂಬರಿಕಾರನೆ ಸರ್ವಸಾಕ್ಷಿ ಪ್ರಜ್ಞೆಯಿಂದ ಕಥೆಯ ಎಲ್ಲ ಅಂಶಗಳನ್ನು ಎಲ್ಲ ಪಾತ್ರಗಳ ಒಳ–ಹೊರಗನ್ನು ಬಲ್ಲವನಾಗಿ ಕಥೆ ಹೇಳುತ್ತಾನೆ. ಕಾದಂಬರಿಯು ಒಂದು ಆತ್ಮಚರಿತ್ರೆಯ ರೂಪದಲ್ಲಿ ತನ್ನ ಕಥೆಯನ್ನು ತಾನೇ ಹೇಳಿಕೊಳ್ಳುವದು. ಅಥವಾ ಕಥೆ ಹೇಳುವ ಪಾತ್ರ ಕಾದಂಬರಿಯ ಮುಖ್ಯ ಪಾತ್ರವಾಗಿರಬಹುದು ಅಥವಾ ಕಥೆಗೆ ಸಂಬಂದವಿಲ್ಲದ ಹೊರಗಿನ ನಿರೀಕ್ಷಕನಾಗಿರಬಹುದು. ಕಾದಂಬರಿ ಹತ್ತು ಹಲವಾರು ಪಾತ್ರಗಳ ನಿರೂಪಣೆಯ ಸಂಕಲನವಾಗಬಹುದು. ಇಲ್ಲವೆ ಹಲವಾರು ಆತ್ಮಕಥೆಗಳ ಸಂಯೋಜನೆ ಆಗಿರಬಹುದು. ಹಾಗಾಗಿ ಕಾದಂಬರಿ ಹೊಸ ನೈತಿಕ ಮೌಲ್ಯಗಳನ್ನು ಸೃಷ್ಟಿಸುತ್ತದೆ.

ಕಾದಂಬರಿಯ ಬಗ್ಗೆ ವ್ಯಾಖ್ಯಾನಿಸುವುದು ಕಷ್ಟ ಸಾಧ್ಯವಾದುದು. ಜೀವನವನ್ನು ಹೇಗೆ ವ್ಯಾಖ್ಯಾನಿಸಲು ಸಾಧ್ಯವಿಲ್ಲ ಹಾಗೆ ಜೀವನವನ್ನೇ ಕೇಂದ್ರವಾಗುಳ್ಳ ಗದ್ಯಕಥೆಯಾದ ಕಾದಂಬರಿಯ ಬಗೆಗೂ ವ್ಯಾಖ್ಯಾನ ಮಾಡುವುದು ಒಂದು ಬಗೆಯಲ್ಲಿ ಕ್ಲಿಷ್ಟವಾದುದೇ ಆಗಿದೆ. ಕಾದಂಬರಿಯು ಕೂಡಾ ಒಂದು ಕಥೆಯನ್ನು ಪ್ರಧಾನವಾಗಿ ಉಳ್ಳದ್ದಾಗಿರುತ್ತದೆ.

ನವೋದಯ ಪೂರ್ವಘಟ್ಟ ಭಾಷಾಂತರ ರೂಪಾಂತರಗಳಿಂದ ಕೂಡಿ ಹೊಸ ಸಾಹಿತ್ಯದ ಅಭಿರುಚಿಯೊಂದು ಮುಡತೊಡಗಿತು. ಇದಕ್ಕೆ ಕಾರಣ ಸಂಸ್ಕೃತ, ಇಂಗ್ಲಿಷ್, ಅಲ್ಲದೆ ಇತರೇ ಭಾರತೀಯ ಭಾಷಾ ಸಂಪರ್ಕವೂ ಹೆಚ್ಚಾದುದು. ಈ ಅವಸ್ಥೆಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಅನುವಾದ, ಭಾಷಾಂತರ, ತರ್ಜುಮೆ, ರೂಪಾಂತರ

ಎಂಬ ವಿಭಿನ್ನ ಪದಗಳು ಬಳಕೆಯಾದುದನ್ನು ಗಮನಿಸುತ್ತೇವೆ. ಮೂಲತಃ ಇವೆಲ್ಲ ಒಂದೇ ಅರ್ಥ ವ್ಯಾಪ್ತಿಯನ್ನು ಹೊಂದಿದ್ದರೂ ಅವುಗಳಲ್ಲಿಯೇ ವಿಶಿಷ್ಟ ವ್ಯತ್ಯಾಸಗಳಿರುವವದನ್ನು ಗಮನಿಸಬಹುದು. 'ಅನುವಾದ' ಎನ್ನುವ ಶಬ್ದವೊಂದು ರೂಡಿಯಲ್ಲಿದೆ. 'ಅನುವಾದ'ಎಂದರೆ ಮೂಲವನು ಅನುಸರಿಸಿ ಹೇಳುವದು ಎಂದರ್ಥ.

ಮೂಲ ಪಠ್ಯವನ್ನು ಕೇಂದ್ರವಾಗಿಟ್ಟುಕೊಂಡು ನಮ್ಮ ಸನ್ನಿವೇಶಕ್ಕೆ ಸಹಜವಾಗುವಂತೆ ಸನ್ನಿವೇಶಗಳನ್ನು ಕಟ್ಟುವದು ರೂಪಾಂತರವೆನಿಸುತ್ತದೆ. ಉದಾಹರಣೆ ಕುವೆಂಪು ಅವರು ಷೇಕ್ಸಪಿಯರ್‌ನ 'ಹ್ಯಾಮ್ಲೆಟ್' ಮತ್ತು 'ಟೆಂಪೆಸ್ಟ' ನಾಟಕಗಳನಿಟ್ಟುಕೊಂಡು 'ರಕ್ತಾಕ್ಷಿ' , 'ಬಿರುಗಾಳಿ' ರಚಿಸಿದಂತೆ. ಬಿ. ಎಂ. ಶ್ರೀಕಂಠಯ್ಯನವರು ಸೊಪೊಕ್ಲಿಸನ್ 'ಎಜಾಕ್ಸ' ಗ್ರೀಕ ರುದ್ರನಾಟಕವನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದಲ್ಲಿ 'ಅಶ್ವತ್ಥಾಮನ' ನಾಟಕವನ್ನು ರಚಿಸಿದ್ದಾರೆ. ರೂಪಾಂತರ ಮೂಲಪಠ್ಯದ ಕೇಂದ್ರವನ್ನೇ ಹೊಂದಿದ್ದರು ಲೇಖಕನ ಭಾಷಿಕ ಪರಿಸರದಲ್ಲಿ ನಿರ್ಮಿಸುವ ಪ್ರಯತ್ನ ವಿರುವದರಿಂದ ಇದು ಸ್ವತಂತ್ರ ಕೃತಿ ರಚನೆಯ ಹಾಗೆಯೇ ಎಚ್ಚರ ಮತ್ತು ಪರಿಶ್ರಮಗಳನ್ನು ಹೊಂದಿರುತ್ತದೆ. ಏಕೆಂದರೆ ಮೂಲಕೃತಿಗೆ ಸರಿದೂಗಿಸುವ ಪ್ರಯತ್ನ ವಿಶೇಷವಾಗಿ ಇಲ್ಲಿ ಕೆಲಸ ಮಾಡುತ್ತಲೇ ಇರುತ್ತದೆ.

ಬಾರ್ತನ ಎಂಬ ವಿಮರ್ಶಕ ಕಾದಂಬರಿಯ ಮೂರು ಲಕ್ಷಣಗಳನ್ನು ಹೇಳುತ್ತಾನೆ.

೧. ಕಾದಂಬರಿಯಲ್ಲಿ ಸಾಧ್ಯವಾಗು ಬಹುಧ್ವನಿತ್ವದಲ್ಲೇ – ಆಯಾಮತ್ವ

೨. ಸಾಹಿತ್ಯಕ ಪ್ರತಿಮೆಗಳ ಸೃಷ್ಟಿಗೆ ಹೊಸತೊಂದು ಕ್ಷೇತ್ರದ ಕೊಡುಗೆ ಹಾಗೂ ಈ ಕ್ಷೇತ್ರ ವರ್ತಮಾನದೊಂದಿಗೆ ಹೊಂದಿದ ಗರಿಷ್ಠ ಸಂಬಂಧ.

೩. ಸಾಹಿತ್ಯ ಪ್ರತಿಮೆಯ ಕಾಲ ಘಟಕದಲ್ಲಿ ಕ್ರಾಂತಿಕಾರಕ ಪರಿವರ್ತನೆ ಪ್ರತಿಭಟನೆ.[೬] ಭಾಷೆ ವಾಸ್ತವಾಚೆಗಿನ ಬೇರೆ ಬೆಲೆಗಳನ್ನು ಚಿಂತಕರು ಚಿತ್ರಿಸಿದ್ದಾರೆ.

ಬಾರ್ತನ ಪ್ರಕಾರ ಕಾದಂಬರಿಯಲ್ಲಿ ನಿರ್ಣಾಯಕ ಪಾತ್ರವಿರುವದು ವಾಸ್ತವ ಹಾಗೂ ಭಾಷೆಗಳಿಗಿಂತ ಹೆಚ್ಚಾಗಿ ವೃತ್ತಿಗೆ ವೃತ್ತಿಯೊಂದೇ ಸೃಜನಶೀಲತೆ ಹಾಗೂ ಸಮಾಜಗಳನ್ನು ಜೋಡಿಸಬಲ್ಲದು. ಭಾಷೆ ಶೈಲಿಗಳ ವಿಷಯದಲ್ಲಿ ಲೇಕಖನಿಗೆ ಸ್ವಾತಂತ್ರ್ಯವಿಲ್ಲ. ಆದರೇ ವೃತ್ತಿಯ ವಿಷಯದಲ್ಲಿ ಅವನಿಗೆ ಸ್ವಾತಂತ್ರ್ಯವಿದೆ ಎನ್ನುವದು ಅವರ ಪ್ರತಿಪಾದನೆ. ಪ್ರತಿಯೊಂದು ಯುಗದ ಸಮಗ್ರತೆ ಕಾದಂಬರಿಯ ನೆಲೆಯಾಗಿರುತ್ತದೆ.

ಇಂಗ್ಲಿಷ ಸಾಹಿತ್ಯದ ಪ್ರಭಾವ ಬೀರುವ ಮೊದಲೆ ಕಾದಂಬರಿ ಎನ್ನಬಹುದಾದ ಮೂರು ಕೃತಿಗಳು ಕನ್ನಡದಲ್ಲಿ ರಚನೆಯಾಗಿದ್ದವು. ಯಾದವನ – ಕಲಾವತೀ ಪರಿಣಯ (೧೮೧೫) ಮೂಮ್ಮಡಿ ಕೃಷ್ಣರಾಜ ಒಡೆಯರ – ಸೌಗಂಧಿಕ ಪರಿಣಯ

(೧೮೨೧) ಹಾಗೂ ಕೆಂಪು ನಾರಾಯಣನ - ಮುದ್ರಾಮಂಜೂಷ (೧೮೨೩) ಕಲಾವತಿ ಪರಿಣಯವು ಬಳ್ಳಿ ಕಥಾನಕತೆಯಿಂದ ಕೂಡಿದೆ. ಸೌಗಂಧಿಕಾ ಪರಿಣಯವು ಹೊಸಗನ್ನಡ ಭಾಷೆಗೆ ಹತ್ತಿರವಿದೆ. ಮುದ್ರಾಮಂಜೂಷ ಸಂಸ್ಕೃತದ ಮುದ್ರಾರಾಕ್ಷಸ ನಾಟಕದ ಆಧಾರದ ಮೇಲೆ ರಚಿತವಾಗಿದೆ. ಆನಂತರ ಇಂಗ್ಲಿಷನ ಕೆಲವು ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡವು. ಅದೇ ರೀತಿ ಕನ್ನಡ ಕಾದಂಬರಿಗಳು ಇಂಗ್ಲಿಷನಲ್ಲಿ ಅನುವಾದ ಗೊಳ್ಳುತ್ತಿವೆ. ಉದಾ: ಗೋಪಾಲಕೃಷ್ಣ ಪೈರವರ "ಸ್ವಪ್ನ ಸಾರಸ್ವತ" ಕಾದಂಬರಿಯನ್ನು ಇಂಗ್ಲಿಷಗೆ ಶ್ರೀಮತಿ ಸುಮತಿ ಶೆಣೈ ರವರು ಅನುವಾದ ಮಾಡಿದ್ದಾರೆ. ಅಲ್ಲದೆ ಇತರೆ ಭಾಷೆಗಳಿಗು ಅನುವಾದ ಗೊಳ್ಳುತ್ತಿದೆ.

ಕಾದಂಬರಿ ಜನಪ್ರಿಯವಾಗುವ ಸಂದರ್ಭದಲ್ಲೆ ಮೂಲ ಉದ್ದೇಶ ಬೇರೆ ಬೇರೆ ಸ್ವರೂಪಗಳಲ್ಲಿ ವಿಶ್ಲೇಷಣೆಗೆ ಗುರಿಯಾಗ ಬೇಕಾಯಿತು. ಈ ಕಾರಣದಿಂದಲೇ ನಾವಿಂದು ಕಾದಂಬರಿಗಳನ್ನು ಅಭ್ಯಾಸಿಸುವಲ್ಲಿ ಅನೇಕ ವಿಧಗಳಲ್ಲಿ ನಿರ್ವಚಿಸುವ ಅನಿವಾರ್ಯತೆಯಾಗಿತ್ತು. ಕಾದಂಬರಿಯ ಬಂಧವನ್ನು ದೃಷ್ಟಿಯಲ್ಲಿಟ್ಟಕೊಂಡು 'ಎಡ್ವಿನ್ ಮೂರ್' ವರ್ಗೀಕರಣ ಮಾಡಿದ್ದಾರೆ.

೧. ಘಟನಾ ಪ್ರಧಾನ ಕಾದಂಬರಿಗಳು

೨. ಪಾತ್ರ ಪ್ರಧಾನ ಕಾದಂಬರಿಗಳು

೩. ನಾಟಕೀಯ ಕಾದಂಬರಿಗಳು

೪. ಬೃಹತ್ ಕಾದಂಬರಿಗಳು.[೮]

೧. ಘಟನಾ ಪ್ರಧಾನ ಕಾದಂಬರಿಗಳು

ಈ ಕಾದಂಬರಿಗಳಲ್ಲಿ ಪಾತ್ರಗಳಿಗಿಂತ ಘಟನೆಗಳಿಗೆ ಮಹತ್ವದ ಸ್ಥಾನ. ಪಾತ್ರಗಳ ಸಂಯೋಜನೆಗಾಗಿ ಘಟನೆಗಳಿರದೆ ಘಟನೆಗಳಿಗೆ ಪಾತ್ರಗಳು ಇರುವದನ್ನು ಕಾಣುತ್ತೇವೆ. ಒಂದು ಪ್ರಧಾನ ಘಟನೆಯ ಸುತ್ತ ಪಾತ್ರಗಳು ಸುತ್ತುತ್ತಿರುತ್ತವೆ. ಘಟನೆಯ ಮೂಲಕ ಪಾತ್ರ, ಉದ್ದೇಶ ಇತ್ಯಾದಿ ಅಳೆಯುವಷ್ಟು ಪ್ರಾಧಾನ್ಯತೆ ಇದಕ್ಕಿರುತ್ತದೆ.

೨. ಪಾತ್ರ ಪ್ರಧಾನ ಕಾದಂಬರಿಗಳು

ಇಲ್ಲಿ ಪಾತ್ರಗಳಿಗೆ ಮಹತ್ವದ ಸ್ಥಾನ ಘಟನೆಗಳು ನಂತರದ ಸ್ಥಾನ ಪಡೆಯುತ್ತವೆ. ಘಟನೆಗಳು ಗೌಣವೆನಿಸಿ ಪಾತ್ರಗಳೇ ಇಡೀ ಕಥೆಯನ್ನು ನಿಯಂತ್ರಿಸುವಂತೇ ಕಾಣುತ್ತವೆ. ಇಲ್ಲಿ ಘಟನೆಗಳಿಗೆ ಸಮಾನ ಬೆಲೆಯಿದ್ದು ಪಾತ್ರಗಳ ಸೊಗಸಿಗೆ ಹೆಚ್ಚು ಗಮನ ಕೊಡುವ ಹೊಣೆಯನ್ನು ಹೊಂದಿರುತ್ತವೆ. ಇಡೀ ಪರಿಣಾಮದ ತೀವ್ರತೆ ಪಾತ್ರಗಳಲ್ಲಿಯೇ ಘನೀಕರಿಸುವ ಉದ್ದೇಶವನ್ನು ಕೂಡ ಕಾದಂಬರಿಕಾರ ಹೊಂದಿದವನಾಗಿರುತ್ತಾನೆ. ತನ್ನ ಆಶಯಕ್ಕೆ ತಕ್ಕ ಹಾಗೆ ಪಾತ್ರಗಳನ್ನು ಬಳೆಸಿಕೊಳ್ಳುತ್ತ ಇಡೀ ಕಥೆಯನ್ನು ಕಟ್ಟುತ್ತಾನೆ.

೩. ನಾಟಕೀಯ ಕಾದಂಬರಿಗಳು

ಹೆಸರೇ ಹೇಳುವಂತೆ ಪಾತ್ರಗಳ ಸಂಭಾಷಣೆಯ ಕ್ರಮದಿಂದ ನಿರೂಪಿಸಲ್ಪಡುತ್ತವೆ. ನಿರೂಪಕ ಇದ್ದಾಗ್ಯೂ ಸಂಭಾಷಣೆ ಪ್ರಧಾನವಾಗಿ ಸನ್ನಿವೇಶಗಳು ದೃಶ್ಯರೂಪವಾಗಿ ಮಾಡುವಂತೆ ಗಮನಹರಿಸುತ್ತಾನೆ. ಲೇಖನ ವಿವರಗಳಿಗಿಂತ ಪಾತ್ರಗಳು ನಡೆದುಕೊಳ್ಳುವ ರೀತಿಯಿಂದ ಆಡುವ ಮಾತಿನಿಂದ ತಮ್ಮ ಮಹತ್ವವನ್ನು ಪ್ರಕಟಗೊಳಿಸುತ್ತವೆ.

೪. ಬೃಹತ್ ಕಾದಂಬರಿಗಳು

ವಸ್ತು, ಪಾತ್ರಗಳು, ಪಾತ್ರಗಳ ಮಹತ್ವ, ಇವೆಲ್ಲವೂ ಸಂಕೀರ್ಣವಾಗಿರುತ್ತವೆ. ಕಾಲ, ಸ್ಥಳ, ಕ್ರಿಯೆ ಒಂದು ಕಥೆಯಲ್ಲಿ ಅಡಕಗೊಂಡು ನಿರ್ಮಾಣವಾದಾಗ್ಯೂ ಕಾಲಾತೀತವು ಆಗಿರುತ್ತವೆ. ವಾಸ್ತವ ಪ್ರಜ್ಞೆ, ಸಾಮಾಜಿಕ ಎಚ್ಚರವೇ ಇಂತಹ ಕೃತಿಗಳಲ್ಲಿ ಮುಖ್ಯವಾದುದರಿಂದ ಕಾದಂಬರಿಕಾರನ ಜವಾಬ್ದಾರಿ ದೊಡ್ಡದಾಗಿರುತ್ತದೆ. ಹೀಗೆ ಕಾದಂಬರಿ ವರ್ಗೀಕರಿಸಲ್ಪಟ್ಟಿದೆ. 'ಸಾಹಿತ್ಯ ಪ್ರವೇಶ' ಕೃತಿಯಲ್ಲಿ ವಿಲಿಯಂ ಹೆನ್ರಿ ಹಡ್ಸನ್‌ನು ೧.ಶಿಥಿಲ ಸಂವಿಧಾನ ಕಾದಂಬರಿ. ೨.ಸಾವಯವ ಸಂವಿಧಾನ ಕಾದಂಬರಿ ಎಂದು ವರ್ಗೀಕರಿಸಿದ್ದಾನೆ. ಕನ್ನಡ ವಿಶ್ವಕೋಶದಲ್ಲಿ "ವಿಚಿತ್ರ ಕಾದಂಬರಿ, ಸಾಹಸ ಕಾದಂಬರಿ, ನೈಜ ಕಾದಂಬರಿ, ಚಾರಿತ್ರಿಕ ಕಾದಂಬರಿ, ಕಾಲ್ಪನಿಕ ಕಾದಂಬರಿ"[೬] ಎಂದು ವಿಭಾಗಿಸಿದ್ದಾರೆ.

೧೮೭೫ ರಿಂದ ೧೯೩೦ ನಡುವಿನ ಕಾಲವನ್ನು "ಕನ್ನಡ ಕಾದಂಬರಿ ಉದಯ ಕಾಲ" ಎಂದು ಗುರುತಿಸಲಾಗಿದೆ. ಇದಕ್ಕೆ ಮುಖ್ಯ ಪ್ರೇರಣೆ ಇಂಗ್ಲಿಷ ಸಾಹಿತ್ಯದ ಪರಿಚಯ ಹಾಗೂ ದೇಶಿ ಭಾಷೆಗಳಾದ ಬಂಗಾಲಿ ಹಾಗೂ ಮರಾಠಿ ಭಾಷೆಗಳಿಂದ ಹರಿದ ಪ್ರಭಾವ ಈ ಕಾಲದ ಲೇಖಕರೆಲ್ಲ ತಮ್ಮ ಸಂಸ್ಕಾರ ಸಂಸ್ಕೃತಿಯಲ್ಲಿ ಅಪಾರವಾದ ಕಾಳಜಿಯನ್ನು ಮತ್ತು ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಸನಾತನ ಧರ್ಮದ ಮೌಲ್ಯಗಳನ್ನು ನಂಬಿದವರಾಗಿದ್ದರು. ಸಂಸ್ಕೃತಿಕ ಸಂದರ್ಭದಲ್ಲಿಯೇ ಕಾದಂಬರಿಯ ರಚನೆಗೆ ಹೊರಟ ಗುಲ್ವಾಡಿ ವೆಂಕಟರಾಯರು, ಬೋಳಾರು ಬಾಬುರಾಯರು, ಗಳಗನಾಥ, ಪುಟ್ಟಣ್ಣವರು ಈ ಎಲ್ಲ ಕಾದಂಬರಿಕಾರರ ಮನೋಧರ್ಮ ಬೇರೆಬೇರೆಯಾಗಿತ್ತು.

ಶಿವರಾಂ ಕಾರಂತರ ಕಾದಂಬರಿಗಳಲ್ಲಿ ಜೀವಂತ ಸಮಾಜ ಚಿತ್ರಣಮಾಡಲಾಗಿದೆ. ಇವರ ಸಂಯಮ ಶೈಲಿ ಮನರಂಜನೆಯನ್ನು ಬಯಸಿ ಓದುತ್ತಿದ್ದವರಿಗೆ ತೊಡಕಾಗಿ ಕಂಡು ಬಂದಿತು. ಗಟ್ಟಿಯಾದ ಅನುಭವ ದ್ರವ್ಯದ ಶೋಧನೆಯಲ್ಲಿ ತೊಡಗಿದೆ. ನವೋದಯ ಕಾದಂಬರಿಕಾರೆಂದರೆ ಕುವೆಂಪು, ರಾವ ಬಹದ್ದೂರ, ಮಾಸ್ತಿ ಮುಂತಾದವರು ಅವರ ಪರಂಪರೆಯ ಸಾಕಷ್ಟು ಪ್ರಭಾವವನ್ನು

ಬೀರಿತು. ಅದೇ ರೀತಿಯಾಗಿ ವ್ಯಾಸರಾಯ ಬಲ್ಲಾಳ, ಎಸ್. ಎಲ್. ಭೈರಪ್ಪ ಮುಂತಾದವರನ್ನು ಹೆಸರಿಸಬಹುದು.

ಕುವೆಂಪುರವರ ಶ್ರೇಷ್ಠ ಹಗೂ ಬೃಹತಕಾದಂಬರಿಗಳೆಂದರೆ 'ಕಾನೂರ ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದಮಗಳು' ಈ ಎರಡು ಕಾದಂಬರಿಗಳು ಮಹತ್ವದಲ್ಲಿ ಹಾಗೂ ಬೃಹತ್ತಿನಲ್ಲಿ ಕನ್ನಡ ಕಾದಂಬರಿ ಕ್ಷೇತ್ರಗಳ ಗಿರಿಶಿಖರಗಳು. ಕಾನೂರ ಸುಬ್ಬಮ್ಮ ಹೆಗ್ಗಡತಿ (೧೯೩೬) ಕಾದಂಬರಿಯೋ ಮೊದಲೆರಡು ದಶಕಗಳು ಅತಿ ಮೆಚ್ಚುಗೆಯನ್ನು ಪಡೆಯಿತು. ಈಚೆಗೆ ತಿವ್ರವಿಮರ್ಶೆಗೆ ಒಳಗಾಯಿತು. ಕರ್ನಾಟಕದ ತೀರ್ಥಹಳ್ಳಿ ಪ್ರಾಂತ್ಯದ ಹಳ್ಳಿ ಜೀವನದ ಆವರಣದಲ್ಲಿ ಒಂದು ಸೂಕ್ಷ್ಮ ಚೇತನ ಅರಳುವುದನ್ನು ಕಾದಂಬರಿಕಾರರು ಚಿತ್ರಿಸುತ್ತಾರೆ. ೧೯೬೭ ರಲ್ಲಿ ಮಲೆಗಳಲ್ಲಿ ಮದುಮಗಳು ಪ್ರಕಟವಾಯಿತು. ಕಾದಂಬರಿಯ ಹೆಸರಿನಲ್ಲಿಯೇ ಕೇಂದ್ರದ ಸೂಚನೆಯಿದೆ. ಚೆನ್ನಮ್ಮ, ಮುಕುಂದಯ್ಯ, ಗುತ್ತಿ, ತಿಮ್ಮಿ ಇವರ ಕಥೆಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿದೆ. ಕಾನೂರ ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದಮಗಳು ಕಾದಂಬರಿಗೆ ಸಜೀವ ಸಂಬಂಧ ವಿದೆಯನ್ನುವುದನ್ನು ಕಾಣಬಹುದು.

ಪ್ರಗತಿಶೀಲ ಚಳುವಳಿ ಮುಖ್ಯವಾಗಿ ಫಲನೀಡಿದ್ದು ಕಾದಂಬರಿಗೆ. ಸಣ್ಣ ಕಥೆಗಳಲ್ಲಿ ಅನಕೃ ತಮ್ಮ ಸಾಹಿತ್ಯ ರಚನೆಗೆ ಅಶ್ಲೀಲ ಎಂದು ಯಾವ ವಿಷಯವನ್ನು ಹೊರಗಿಡಲಿಲ್ಲ. ಅನಕೃ ಅವರದ್ದೂ ಸಂವಾದಯುಕ್ತ ಆಕರ್ಷಕ ಶೈಲಿ ಸಮಾಜದ ಅನೇಕ ಸಮಸ್ಯೆಗಳನ್ನು ಕಾದಂಬರಿಗೆ ವಸ್ತುವನ್ನಾಗಿ ದುಡಿಸಿಕೊಂಡರು. ಅನಕೃ ಕಾದಂಬರಿಯ ಲೋಕವನ್ನು ವಿಸ್ತರಿಸಿದರಲ್ಲದೇ ಹೊಸ–ಹೊಸ ವಸ್ತುಗಳನ್ನು ಆರಿಸಿ ನಿಸ್ಸಂಕೋಚವಾಗಿ ಬರೆಯುವದನ್ನು ಸಾಧ್ಯಮಾಡಿಕೊಟ್ಟರು. ಇವರು ಬರೆದಿರುವ ಕಾದಂಬರಿಗಳ ಸಂಖ್ಯೆ ೧೧೨ ಒಂದು ಪರಂಪರೆಯನ್ನು ಸೃಷ್ಟಿಸುವಷ್ಟು ಪ್ರಭಾವ ಬಿರಿದವರು. ಪ್ರಗತಿಶೀಲ ಚಳುವಳಿಯ ನಾಯಕರಾಗಿ ಹಲವುವಾದ ವಿವಾದಕ್ಕೆ ಕೇಂದ್ರ ಬಿಂದುವಾಗಿ ಸವಾಲನ್ನು ಸ್ವೀಕರಿಸಿದರು. ಕೃಷ್ಣರಾಯರು ಕಾದಂಬರಿಯ ಎಲ್ಲೆಯನ್ನು ವಿಶಾಲಗೊಳಿಸಿದ್ದಲ್ಲದೆ ಕುಟುಂಬ ಜೀವನ, ಗ್ರಾಮ ಜೀವನ, ನಗರ ಜೀವನ, ಕಾರ್ಮಿಕರ ಜೀವನ, ಅಸ್ಪೃಶ್ಯತೆ, ಕಾಮಜೀವನ ಎಲ್ಲವನ್ನು ಕಾದಂಬರಿಯ ಪರಿಧಿಯಲ್ಲಿ ತರಲು ಯತ್ನಿಸಿದರು. ತ.ರಾ.ಸು, ನಿರಂಜನ, ಅರ್ಚಕ ವೆಂಕಟೇಶ, ನಾಡಿಗೇರ ಕೃಷ್ಣರಾವ, ಕುಮಾರ ವೆಂಕಣ್ಣ, ಬಸವರಾಜ ಕಟ್ಟಿಮನಿ ಮುಂತಾದವರು ಪ್ರಗತಿಶೀಲ ಮಾರ್ಗದಲ್ಲಿ ಬರೆದವರು.

ನಿರಂಜನರ ಚಿರಸ್ಮರಣೆ, ಮೃತ್ಯುಂಜಯ, ಇಂಥ ಕೃತಿಗಳು ಕಟ್ಟಿಮನಿಯವರ ಕೃತಿಗಳಲ್ಲಿ ಮತಮಾನ್ಯಗಳ ಹುಸಿ ವೈರಾಗ್ಯವನ್ನು ಬಯಲಿಗೆ ಹಾಕಲಾಗಿದೆ. ತರಾಸು ಅವರು ಚಿತ್ರದುರ್ಗದ ಇತಿಹಾಸದ ಮೇಲೆ ಮೈಜುಂಗುಟಿಸುವ ಕಾದಂಬರಿಗಳನ್ನು ನೀಡಿದರು. ತರಾಸು ಮತ್ತು ಅನಕೃ ಅವರ ಭಾಷಾಬಳಕೆ ವಿಶಿಷ್ಟವಾದುದು ಮಧ್ಯಮವರ್ಗದ ಆಡುಮಾತು ಕಾದಂಬರಿಗಳಲ್ಲಿ ಸಲಿಸಾಗಿ ಒಳನುಗ್ಗಿಸಿ ಬಹಳ

ಉತ್ಸಾಹದಿಂದ ಬರೆದರು. ಅ.ನ.ಕೃ, ತರಾಸು, ನಿರಂಜರ, ಕಟ್ಟಿಮನಿ ಮುಂತಾದವರೆಲ್ಲ ಕಾದಂಬರಿ ಲೋಕಕ್ಕೆ ರೈತ ಹಾಗೂ ಕಾರ್ಮಿಕ ವರ್ಗವನ್ನು ಬರಮಾಡಿಕೊಂಡರು. ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಹಾಗೂ ಪತ್ತೇದಾರಿ ಮುಂತಾದ ಹಲವು ಬಗೆಯ ಕಾದಂಬರಿಗಳು ಕಾಣಿಸಿಕೊಂಡವು. ಗತ ಇತಿಹಾಸವನ್ನು ಪುರಾಣವನ್ನು ಪುನರ್ ಸೃಷ್ಟಿಸುವ ಮೂಲಕ ಆ ಕಾಲದ ಮಾದರಿಗಳನ್ನು ಶತಮಾನಕ್ಕೆ ಆದರ್ಶಗಳನ್ನಾಗಿ ತೆಗೆದಕೊಳ್ಳಲಾಯಿತು. ಗುಲಾಮ ಗಿರಿಯಲ್ಲಿದ್ದ ಭಾರತವನ್ನು ಬಿಡುಗಡೆ ಮಾಡಬೇಕೆಂಬ ಅದಮ್ಯ ಉತ್ಸಾಹವನ್ನು ತೋರಿಸಲಾಯಿತು.

ನವ್ಯ ಕಾಲಘಟ್ಟದಲ್ಲಿ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಲಂಕೇಶ, ತೇಜಸ್ವಿ, ಯು. ಆರ್. ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ, ಬಿ. ವಿ. ವೈಕುಂಠರಾಜು, ಎಸ್. ಎಲ್. ಭೈರಪ್ಪ ಮುಂತಾದವರು ಅನೇಕ ಕಾದಂಬರಿಗಳನ್ನು ರಚಿಸಿದ್ದಾರೆ. ಯು. ಆರ್. ಅನಂತಮೂರ್ತಿಯವರು ಕುತುಹಲಕರ ಕಾದಂಬರಿ ಗಳೆಂದರೆ ಒಂದು 'ಸಂಸ್ಕಾರ' ಇನ್ನೊಂದು 'ಭಾರತೀಪುರ' 'ಸಂಸ್ಕಾರ' ಕಾದಂಬರಿಯ ಕೇಂದ್ರ ಪಾತ್ರ ಪ್ರಾಣೇಶಚಾರ್ಯರು ಇವರಿಗೆ ಪ್ರತಿಸ್ಪರ್ಧಿ ನಾರಾಣಪ್ಪ ಭಾರತೀಪುರದ ನಾಯಕ ಜಗನ್ನಾಥ ಇಂಗ್ಲೆಂಡಿನಿಂದ ಭಾರತೀಪುರಕ್ಕೆ ಹಿಂದುರುಗಿ ಸಮಗ್ರ ಬದಲಾವಣೆಗೆ ಪ್ರಯತ್ನಿಸುತ್ತಾನೆ. ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಮೊದಲ ದಿವ್ಯ ಕಾದಂಬರಿ ಎಂದು ಗುರ್ತಿಸಲಾಗಿದೆ. ಇದೆ ಕಾಲಘಟ್ಟದಲ್ಲಿ ಎಸ್. ಎಲ್. ಭೈರಪ್ಪರವರ ವಂಶವೃಕ್ಷ, ದೂರಸರಿದರು, ಧರ್ಮಶೀಲ, ಗೃಹಭಂಗ, ದಾಟು, ಮಂದ್ರ ಹೀಗೆ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ.

ಎಲ್. ಎಸ್. ಶೇಷಗಿರಿರಾಯರು ಹೇಳುವಂತೆ ನವೋದಯ ಕಾದಂಬರಿಯ ಸಮಸ್ಯೆಗಳು ಬಹುಮಟ್ಟಿಗೆ ಕೌಟುಂಬಿಕ ಪ್ರಗತಿಶೀಲ ಕಾದಂಬರಿಯ ಸಮಸ್ಯೆಗಳು ಸಾಮಾಜಿಕ ಹಾಗೂ ನವ್ಯ ಕಾದಂಬರಿಯ ಸಮಸ್ಯೆಗಳು ವೈಯಕ್ತಿಕ ಎಂಬ ಮಾತನ್ನು ಸ್ಥೂಲವಾಗಿ ಈ ಪ್ರಕಾರಗಳಿಗೆ ಒಪ್ಪತಕ್ಕದೇ ಆಗಿದೆ. ನವ್ಯ ಸಂದರ್ಭದಲ್ಲಿ ಅನೇಕ ಜನ ಉತ್ತಮ ಕಾದಂಬರಿಕಾರರು ಕಾಣಿಸಿಕೊಂಡರು.

ಮುಂದೆ ಕನ್ನಡ ಸಾಹಿತ್ಯದಲ್ಲಿ ನಡೆದ ಮುಖ್ಯ ಘಟನೆ ಎಂದರೇ ಬಂಡಾಯ ದಲಿತ ಚಳುವಳಿ. ಈ ಸಂದರ್ಭದಲ್ಲಿ ದೇವನೂರ ಮಾದೇವರ 'ಒಡಲಾಳ', 'ಕುಸುಮಬಾಲೆ' ಅರವಿಂದ ಮಾಲಗತ್ತಿಯವರ ಕಾರ್ಯಕೃತಿಗಳು ಬಹು ಮುಖ್ಯವಾದವುಗಳು ಬರಗೂರು, ಕುಂ. ವೀರಭದ್ರಪ್ಪಾ, ಮನಜ, ವಾಲೀಕಾರ ಮುಂತಾದವರು ಕಾದಂಬರಿಗಳನ್ನು ಬರೆದಿದ್ದಾರೆ.

ಈ ಮಧ್ಯೆ ಅನೇಕ ಲೇಖಕಿಯರು ಕಾದಂಬರಿ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ತ್ರೀವೇಣಿರವರು 'ಬೆಕ್ಕಿನ ಕಣ್ಣು', 'ಶರಪಂಜರ', 'ಹಣ್ಣೆಲೆ ಚಿಗುರಿದಾಗ' ಮುಂತಾದ ಕಾದಂಬರಗಳಲ್ಲಿ ಮನಶಾಸ್ತ್ರವನ್ನು ತಮ್ಮ ಕಾದಂಬರಿಗಳಲ್ಲಿ ಗುರಿ ಮಾಡಿಕೊಳ್ಳುತ್ತಾರೆ. ಎಂ. ಕೆ. ಇಂದಿರಾರವರ 'ಗೆಜ್ಜೆ ಪೂಜೆ' ಗಾಡ

ಅನುಭವದಿಂದ ಅನುಕಂಪದ ನೆಲೆಯಿಂದ ವೇಶ್ಯೆಜೀವನವನ್ನು ಚಿತ್ರಿಸಿದರು. ಇನ್ನು ಅನೇಕ ಮಹಿಳಾ ಕಾದಂಬರಿ ಕಾರ್ತಿಯರುಗಳಾದ ಎಚ್. ಎಸ್. ಪಾರ್ವತಿ, ಅನುಪಮ ನಿರಂಜನ, ಸಿ. ಎನ್. ಜಯಲಕ್ಷ್ಮಿ, ವೀಣಾ ಶಾಂತೇಶ್ವರ, ಸಾರಾ ಅಬೂಬಕರ, ಬಿ. ಟಿ. ಲಲಿತಾನಾಯಕ ಮುಂತಾದವರು ಗಂಭೀರ ಕೃತಿಗಳನ್ನು ಕೊಟ್ಟಿದ್ದಾರೆ.

ಕನ್ನಡ ಕಾದಂಬರಿ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ – ಬಂಡಾಯ ಕಾಲಗಳಲ್ಲಿ ಹಲವಾರು ವಿಚಾರಧಾರೆಗಳ ಪ್ರಭಾವದಿಂದ ಹಾಗೂ ಹೊಸ ಹೊಸ ಪ್ರಯೋಗಗಳಿಂದ ಸ್ಥಿತ್ಯಂತರಗಳನ್ನು ಕಂಡರೂ ಅದು ಮುಖ್ಯವಾಗಿ ವಾಸ್ತವವಾದದ ಪರಂಪರೆಯಾಗಿಯೇ ಉಳಿದು ಬಂದುದು ಮಹತ್ವದಾಗಿದೆ. ಕನ್ನಡ ಕಾದಂಬರಿ ಪರಂಪರೆಯಲ್ಲಿ ಎರಡು ಪರಂಪರೆಗಳನ್ನು ಗುರುತಿಸಬಹುದು. ಒಂದು ಅನಕೃ ಪರಂಪರೆ ಇನ್ನೊಂದು ಕಾರಂತ ಪರಂಪರೆ ವಾಸ್ತವವಾದದ ಧನಾಂಶಗಳನ್ನು ಒಳಗೊಂಡರೇ ಅನಕೃ ಪರಂಪರೆ ವಾಸ್ತವವಾದದ ಋಣ ಅಥವಾ ನೆಗೆಟಿವ ಲಕ್ಷಣಗಳನ್ನು ತೋರಿಸುತ್ತದೆ.

ಈಚೆಗೆ ನಮ್ಮಲ್ಲಿ ಸೂಕ್ಷ್ಮ ಬದಲವಣೆಗಳು ಆಗುತ್ತಿವೆ. ಪೂರ್ವನಿಶ್ಚಿತ ನಂಬಿಕೆಗಳು ಜಾತಿಯ ಕಟ್ಟು ಪಾಡುಗಳು ನಿರ್ಬಂಧವಿಧಿ ನಿಷೇಧಗಳು ಮಾಯವಾಗಿ ಪ್ರಪಂಚ ವಿಶಾಲವಾಗಿ ಆಶಾದಾಯಕವಾಗಿ ಕಾಣಿಸುತ್ತಿದೆ. ಕೆಲವರಿಗೆ ಇದು ಅರ್ಥಹೀನವಾಗಿಯೂ ಕಾಣುತ್ತಿರಬಹುದು. ಒಟ್ಟಿನಲ್ಲಿ ಇದು ಮಹತ್ವದ ಬದಲಾವಣೆಯ ಸಂಕ್ರಮಣ ಕಾಲ. ಅತ್ಯಂತ ದೊಡ್ಡ ಕಾದಂಬರಿಗಳು ಹುಟ್ಟಬಲ್ಲ ಕಾಲ ಬೇರೆ ಶಾಸ್ತ್ರ ಅಥವಾ ವಿಷಯಗಳು ಎಷ್ಟು ಬೆಳೆದರು ಸಹ ಶಾಸ್ತ್ರ ಹೇಳಲಾರದ ವಿಶಿಷ್ಟ ಸತ್ಯವನ್ನು ಕಾದಂಬರಿ ಹೇಳಬಲ್ಲದ್ದರಿಂದ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಶಾಸ್ತ್ರ ಸಾಮಾನ್ಯ ತತ್ವಗಳನ್ನು ಹೇಳಿದರು. ಸಾಹಿತ್ಯ ಮಹತ್ವ ಪೂರ್ವವಾದ ವಿಶಿಷ್ಟ ವಿವರಗಳ ಮೂಲಕ ಸತ್ಯವನ್ನು ನಮ್ಮೆದುರಿಗೆ ಇಡುತ್ತದೆ. ಶಾಸ್ತ್ರಗಳು ಹೇಳಲಾಗದ್ದನ್ನು ಸಾಹಿತ್ಯಗಳಿಗೆ ಹೇಳಲು ಸಾಧ್ಯವಾಗುತ್ತದೆ. ಆದ್ದರಿಂದ ಕಾದಂಬರಿ ಎಂದರೇ ಕೇವಲ ವರದಿ ಅಲ್ಲ, ಗೈಡ ಅಲ್ಲ, ಕಾದಂಬರಿಕಾರ ತಾನು ಆದಸಿಕೊಂಡ ಪ್ರಪಂಚದಿಂದ ಹುಡುಕಿ ಮೂಡಿಸಿದ ಜೀವನ ಸೃಷ್ಟಿಯೇ ಆಗಿದೆ ಉದಾಹರಣೆ – ಗೋಪಾಲಕೃಷ್ಣ ಪೈರವರು ೧೬ – ೧೭ ನೇ ಶತಮಾನದ ಗೋವಾ ಪ್ರದೇಶದ ಬ್ರಾಹ್ಮಣರ ಜೀವನ ಕುರಿತು 'ಸ್ವಪ್ನ ಸಾರಸ್ವತ' ಕಾದಂಬರಿ ಬರೆದಿರುವದನ್ನು ನೋಡಬಹುದು. ಹೊಸ ನೈತಿಕ ಪ್ರಜ್ಞೆಯನ್ನು ಸೃಷ್ಟಿಸುವುದೆ ಆಗಿದೆ. ಕಾದಂಬರಿಕಾರ ಸಮಾಜ ಶಾಸ್ತ್ರ, ತಾತ್ವಿಕ ಹಾಗೂ ಮನೋವಿಜ್ಞಾನಿಗಳಿಗಿಂತ ಮುಂದಿದ್ದಾನೆಂದು ಹೇಳಬಹುದು. ತನ್ನ ಕೃತಿಯಲ್ಲಿ ನೈಜವಾಗಿಲ್ಲದ ವಿಚಾರಗಳನ್ನು ಎಂದು ಹೇಳುವದಿಲ್ಲ. ಪ್ರತಿ ಹೊಸ ನೈತಿಕ ಪ್ರೇರಣೆಗಳನ್ನು ಹುಡುಕುವದು ಚಿಂತಕರಿಗಿಂತ ತನ್ನ ಪ್ರತಿಸೃಷ್ಟಿಯಲ್ಲಿ ಕಾದಂಬರಿಕಾರ ಅದಕ್ಕಿಂತಲೂ ಹೆಚ್ಚಿನ ಮೌಲ್ಯಗಳನ್ನು ಪ್ರೇರೇಪಿಸುತ್ತಾನೆ.

ಈ ಕನ್ನಡ ಕಾದಂಬರಿಗಳು ಪಾಶ್ಚಾತ್ಯ ಪ್ರಭಾವದಲ್ಲಿಯೇ ಹುಟ್ಟಿ ಬೆಳೆದಿದೆ ಇನ್ನು ಬೆಳೆಯುತ್ತಿದೆ. ಆದರೂ ತನ್ನ ನಾಡಿನ ಸ್ವಂತಿಕೆಯನ್ನು ಪರಂಪರೆಯನ್ನು ಉಳಿಸಿಕೊಂಡಿದೆ.

ಕೊನೆ ಟಿಪ್ಪಣಿ

೧. ರಂ. ಶ್ರೀ ಮುಗಳಿ, **ಸಾಹಿತ್ಯೋಪಾಸನೆ**, ಪುಟ–೧

೨. ಯು. ಆರ್. ಅನಂತಮೂರ್ತಿ, **ಪ್ರಜ್ಞೆ– ಪರಿಸರ**, ಪುಟ–೨೭

೩. ಜಿ. ಎಸ್. ಆಮೂರ, **ಕನ್ನಡ ಕಥನ ಸಾಹಿತ್ಯ : ಕಾದಂಬರಿ**, ಪುಟ–೫

೪. ಜಿ. ಎಸ್. ಆಮೂರ, **ಕನ್ನಡ ಕಥನ ಸಾಹಿತ್ಯ : ಕಾದಂಬರಿ**, ಪುಟ–೬

೫. ಗಿರಡ್ಡಿ ಗೋವಿಂದ ರಾಜ, **ಸಮಗ್ರ ವಿಮರ್ಶೆ ಸಂಪುಟ**, ಪುಟ–೨೬

೬. ಜಿ. ಎಸ್. ಆಮೂರ, **ಕಾದಂಬರಿ ಸ್ವರೂಪ ಹೊಸ ಚಿಂತನೆ**, ಪುಟ – ೧

೭. ಜಿ. ಎಸ್. ಆಮೂರ, **ಕನ್ನಡ ಕಥನ ಸಾಹಿತ್ಯ: ಕಾದಂಬರಿ**, ಪುಟ – ೮

೮. ಪಿ. ವಿ. ಶಾಸ್ತ್ರಿ, **ಸಾಹಿತ್ಯದ ಪ್ರಕಾರಗಳು**, ಪುಟ – ೬೨

೯. ಎಲ್. ಎಸ್. ಶೇಷಗಿರಿರಾವ್, **ಕನ್ನಡ ವಿಶ್ವಕೋಶ**, ಸಂ.೪ ಪುಟ–೪೬೬

ಅಧ್ಯಾಯ – ೩

ಕನ್ನಡ ಕಾದಂಬರಿ ಪರಂಪರೆ ಮತ್ತು ಸ್ವಪ್ನ ಸಾರಸ್ವತ

ಅಧ್ಯಾಯ – ೩

ಕನ್ನಡ ಕಾದಂಬರಿ ಪರಂಪರೆ ಮತ್ತು ಸ್ವಪ್ನ ಸಾರಸ್ವತ

ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಉದಯ ಕಾಲವೆಂದು ೧೮೭೫ ರಿಂದ ೧೯೩೦ ರವರೆಗೆ ಗುರ್ತಿಸುತ್ತೇವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿಯು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಕಾದಂಬರಿ ಅತ್ಯಂತ ಸ್ವತಂತ್ರವಾದ ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರವಾಗಿದೆ. ಸಾಮಾನ್ಯವಾಗಿ ಜೀವನ ವೃತ್ತಾಂತ ಮತ್ತು ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ವಿಷಯ, ಪಾತ್ರ, ಘಟನೆ, ಪರಿಸರಗಳಿಂದ ವಿಸ್ತರಿಸುವ ರೂಪವನ್ನು ಕಾದಂಬರಿ ಎಂದು ಕರೆಯಲಾಗುತ್ತದೆ. ಕನ್ನಡ ಆರಂಭಕಾಲೀನ ಕಾದಂಬರಿಗಳು ಬಹುಬೇಗ ಸಾಮಾಜಿಕ ವಾಸ್ತವಕ್ಕೆ ಪ್ರತಿಸ್ಪಂದಿಸಿದವು. ಕನ್ನಡದ ಮೊದಲ ಕಾದಂಬರಿ ಎಂದು ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' (೧೮೯೯) ಯನ್ನು ನೋಡುತ್ತೇವೆ. ಇಲ್ಲಿಂದ ಪ್ರಾರಂಭವಾದ ಕನ್ನಡ ಕಾದಂಬರಿಗಳು ಹಲವಾರು ವಿಷಯಗಳನಿಟ್ಟುಕೊಂಡು ಇನ್ನೂ ಬೆಳೆಯುತ್ತಿವೆ.

ಪ್ರಾದೇಶಿಕತೆ ಇತಿಹಾಸವನಿಟ್ಟುಕೊಂಡು ರಚನೆಯಾದ ಕಾದಂಬರಿಗಳು ಸಾಮಾನ್ಯವಾಗಿ ಕನ್ನಡ ಕಾದಂಬರಿ ಪರಂಪರೆಯಲ್ಲಿ ಕಂಡು ಬರುತ್ತದೆ. ಆ ಕಾದಂಬರಿಗಳಲ್ಲಿ 'ಸ್ವಪ್ನ ಸಾರಸ್ವತ'ವೂ ಒಂದು. ಸಾಹಿತ್ಯ ದೃಷ್ಟಿಯಿಂದ ಎಂ. ಎಸ್ ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಹೆಸರನ್ನು ತೆಗೆದು ಕೊಂಡಾಗ ಇದು ನೀತಿ ಬೋಧನೆ ಇದರ ಮುಖ್ಯ ಉದ್ದೇಶ. ಮಾಟ–ಮಂತ್ರ–ತಂತ್ರಗಳು ಪ್ರವೇಶ ಪಡೆದವು ಒಟ್ಟಿನಲ್ಲಿ ವೆಂಕಟಾಚಾರ್ಯ, ಗಳಗನಾಥ, ಪುಟ್ಟಣ್ಣನವರಿಂದ ಕನ್ನಡ ಕಾದಂಬರಿ ಲೋಕದಲ್ಲಿ ಮನರಂಜನೆಯ ಸಾಧನವಾಗಿಯೂ ಬದುಕಿನ ಗಂಭೀರ ಪ್ರಶ್ನೆಗಳನ್ನು ಚಿತ್ರಿಸಲು ತೊಡಗಿದವು. ಈ ಶತಮಾನದ ನಾಲ್ಕನೆಯ ದಶಕದಿಂದ ಕನ್ನಡ ಕಾದಂಬರಿ ಲೋಕ ಹೆಚ್ಚು ಬೆಳೆಯಲು ಆರಂಭವಾಯಿತು. ಶಿವರಾಮ ಕಾರಂತ, ಆನಂದ ಕಂದ, ಗೋಕಾಕ, ಅನಕೃ, ಕುವೆಂಪು, ತರಾಸು, ದೇವುಡು ಮುಂತಾದವರು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ವಿಶಿಷ್ಟ ಕಾಣಿಕೆಯನ್ನು ಕೊಟ್ಟವರು. ಕಾರಂತರ ಕಾದಂಬರಿಗಳಲ್ಲಿ ಅಪಾರ ಜೀವನ ಶ್ರದ್ಧೆ ಎದ್ದು ಕಾಣುತ್ತದೆ. ನವೋದಯ ಘಟ್ಟದಲ್ಲಿ ಭಾವುಕತೆಗೆ ಎಡೆಗೊಡದೆ ಬರೆದ ಲೇಖಕರು. ಇವರ 'ಮರಳಿ ಮಣ್ಣಿಗೆ'ಯಲ್ಲಿ ಮೂರು ತಲೆಮಾರಿನ ಕಥೆಯನ್ನು ಹೇಳಲಾಗಿದೆ. ಹೀಗೆ ಕನ್ನಡ ಕಾದಂಬರಿ ಪರಂಪರೆ ಬೆಳೆಯುತ್ತಾ ಬರುತ್ತಿದೆ. ಮುಂದೆ ಶಾಂತಿನಾಥ ದೇಸಾಯಿ, ಯು. ಆರ್. ಅನಂತಮೂರ್ತಿ, ದೇವನೂರ, ಭೈರಪ್ಪನವರ ಕಾದಂಬರಿಗಳು ಹುಟ್ಟಿಕೊಂಡವು. ಇವೆಲ್ಲವೂ ಪ್ರಾದೇಶಿಕ ಹಿನ್ನೆಲೆಯಲ್ಲಿ ಬೆಳೆದ ಕಾದಂಬರಿಗಳಾಗಿವೆ.

ಗೋಪಾಲಕೃಷ್ಣ ಪೈರವರು ಬರೆದಿರುವ 'ಸ್ವಪ್ನ ಸಾರಸ್ವತ' ಕಾದಂಬರಿಯೋ ಒಂದು ಇತಿಹಾಸವನ್ನು ನೆನಪಿಸುತ್ತಾ ಕಲ್ಪನೆಗಳನ್ನೊಳಗೊಂಡು ಸಾರಸತ್ವ ಕುಟುಂಬದ ಚಿತ್ರಣವನ್ನು ಪರದೆಯ ಮೇಲೆ ತಂದಿರುವುದು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹೆಮ್ಮೆಯ ಕಾದಂಬರಿಯಂತಲೇ ಕರೆಯಬಹುದು. ಕನ್ನಡ ಕಾದಂಬರಿಗಳು ಮುಖ್ಯವಾಗಿ ರಾಷ್ಟ್ರೀಯ ಪ್ರಜ್ಞೆ, ನಿಸರ್ಗ, ನಾಡುನುಡಿ, ಬಡತನ, ಹಸಿವು, ಧರ್ಮ, ಪಾಪ-ಪುಣ್ಯ, ಸಾವು-ನೋವು, ಪ್ರೀತಿ ವಿಶ್ವಾಸ ಒಳಗೊಂಡ ಕಾದಂಬರಿಗಳು ರಚನೆಗೊಂಡಿವೆ. ಆದರೆ ಪೈರವರ ಕಾದಂಬರಿಯೋ ಕನ್ನಡದಲ್ಲಿ ಬೆಳೆದು ಬಂದ ಇತರೆ ಕಾದಂಬರಿಗಳಿಗಿಂತಾ ವಿಭಿನ್ನವಾಗಿ ಕಂಡು ಬಂದಿದೆ.

ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಎಷ್ಟೋ ಅನುಭವಿ ಕಾದಂಬರಿಕಾರರಿಗೂ ಆಗದಂತಹ ಕಾದಂಬರಿ ರಚನೆಯನ್ನು ಅಕಾಡಮಿಕ ವಲಯದಿಂದ ಹೊರಗಿನವರಾದ ಗೋಪಾಲಕೃಷ್ಣ ಪೈರವರು 'ಸ್ವಪ್ನ ಸಾರಸತ್ವ' ಚೊಚ್ಚಲ ಕಾದಂಬರಿಯ ಮೂಲಕ ಮಾಡಿದ್ದಾರೆ. ಇದು ಸಾಹಿತ್ಯ ಕ್ಷೇತ್ರದ ಸಾಧನೆ ಜೊತೆಗೆ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ತೋರುತ್ತಿದೆ. ಕಾದಂಬರಿಯಲ್ಲಿ ಇತಿಹಾಸ ಜೊತೆಗೆ ಕಲ್ಪನೆಯನ್ನು ಸೇರಿಸುವ ಮೂಲಕ ಇತಿಹಾಸವನ್ನು ವರ್ತಮಾನ ಕಾಲದಲ್ಲಿ ನಿಂತು ನೋಡುವಂತೆ ಕಾದಂಬರಿಯ ರಚನೆಯನ್ನು ಮಾಡಿದ್ದಾರೆ.

ಕನ್ನಡ ಕಾದಂಬರಿಗಳನ್ನು ಚಾರಿತ್ರಿಕವಾಗಿಟ್ಟು ನೋಡುವುದಾದರೆ ಎರಡು ಪ್ರಕಾರಗಳಲ್ಲಿ ಕಾಣುತ್ತೇವೆ. ಒಂದು ಸಮುದಾಯ ಕೇಂದ್ರಿತ ಕಾದಂಬರಿಗಳು ಇನ್ನೊಂದು ವ್ಯಕ್ತಿ(ರಾಜ/ರಾಣಿ) ಕೇಂದ್ರಿತ ಕಾದಂಬರಿಗಳನ್ನು ನೋಡುತ್ತೇವೆ. ಈ ಕಾದಂಬರಿಯ ಲಕ್ಷಣಗಳಾಗಿ ಕುಟುಂಬದ ಬಿಕ್ಕಟ್ಟು, ಸಮುದಾಯದ ಬಿಕ್ಕಟ್ಟು, ಊರಿನ ಬಿಕ್ಕಟ್ಟುಗಳನ್ನು ಕಾಣುತ್ತೇವೆ. ಇವೆಲ್ಲ ಲಕ್ಷಣಗಳನ್ನು 'ಸ್ವಪ್ನ ಸಾರಸ್ವತ' ಕಾದಂಬರಿ ಒಳಗೊಂಡಿದೆ.

ಕನ್ನಡ ಕಾದಂಬರಿ ಪರಂಪರೆಯ ಹಿನ್ನೆಲೆಯಲ್ಲಿ ಕೆಲವೂ ಕಾದಂಬರಿಯ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ. ಅವುಗಳಿಗೂ ಮತ್ತು 'ಸ್ವಪ್ನ ಸಾರಸ್ವತ'ಕ್ಕೂ ಇರುವ ಭಿನ್ನತೆಯನ್ನು ಇಲ್ಲಿ ಗುರ್ತಿಸಬಹುದು.

ಮಾಡಿದ್ದುಣ್ಣೋ ಮಹಾರಾಯ

ಎಂ.ಎಸ್. ಪುಟ್ಟಣ್ಣನವರು ಆಧುನಿಕ ಕನ್ನಡ ಸಾಹಿತ್ಯದ ಆರಂಭಕ ಪ್ರಮುಖ ಬರಹಗಾರರಲ್ಲಿ ಒಬ್ಬರಾಗಿದ್ದಾರೆ (೧೮೫೪-೧೯೩೦). ಇವರು ಬರೆದ ಮಹತ್ವದ ಕಾದಂಬರಿಯಾದ 'ಮಾಡಿದ್ದುಣ್ಣೋ ಮಹಾರಾಯ' (೧೯೧೫) ಆದರ್ಶ ಮತ್ತು ವಾಸ್ತವಗಳ ಅರ್ಥಪೂರ್ಣ ಸಂವಾದವನ್ನು ಸಾಧಿಸುವ ಮೂಲಕ ಪುಟ್ಟಣ್ಣನವರು ಕಾದಂಬರಿ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಈ ಕಾದಂಬರಿಯ ವಸ್ತು ಖಚಿತವಾಗಿ ನೀತಿ ಬೋಧನೆಯಾಗಿದ್ದು ಇತಿಹಾಸವನ್ನು ನೆನಪಿಸುವ ವಿಷಯಗಳು ಇಲ್ಲಿಯ ಕಥಾವಸ್ತುಗಳಾಗಿವೆ. ಕಾದಂಬರಿಯಲ್ಲಿ ಆದರ್ಶದ ಮೂರು ನೆಲೆಗಳನ್ನು

ಕಾಣುತ್ತೇವೆ. ಮೊದಲನೆಯ ನೆಲೆ ಕಾದಂಬರಿಯ ನಾಯಕಿಯಲ್ಲಿ ಸೂಚಿತವಾಗುವ ಪೌರಾಣಿಕ ಸಂದರ್ಭ, ಎರಡನೆ ನೆಲೆಯಾಗಿ ಮುಮ್ಮಡಿ ಕೃಷ್ಣ ರಾಜರಲ್ಲಿ ಸ್ಥಾಪಿತವಾಗಿದೆ. ಕೊನೆಯದಾಗಿ ಪಾಪ-ಪುಣ್ಯ ಹಾಗೂ ಅವುಗಳ ಫಲವನ್ನೊಳಗೊಂಡ ನೈತಿಕ ಕಲ್ಪನೆಯಲ್ಲಿದೆ.

ಮೈಸೂರು ಮಹಾರಾಜರ ಚರಿತ್ರೆಯಲ್ಲಿ ಈ ರಾಜರ ಕಾಲ ಅತ್ಯಂತ ಕಷ್ಟಸಮಯದಲ್ಲಿದ್ದ ಕಾಲ. ಈ ಕಾದಂಬರಿಯಲ್ಲಿ ಮುಖ್ಯವಾಗಿ ವಿದ್ವತ್ತು ಸದ್ಗುಣಗಳಿಂದ ಶೋಭಿಸುವ ಸದಾಶಿವ ದೀಕ್ಷಿತ ಅವನ ಮೂರ್ಖ ಪತ್ನಿ ತಿಮ್ಮಮ್ಮ, ಪಾತಿವ್ರತ್ಯ ಧರ್ಮ ಸಾಕಾರಮೂರ್ತಿ ಸೊಸೆ ಸೀತಮ್ಮ, ಅಪ್ಪಾಜಿ ಮೊದಲಾದ ಪಾತ್ರಗಳನ್ನೊಳಗೊಂಡಿದೆ.

ಈ ಕಾದಂಬರಿಯ ಮುಖ್ಯ ಸೂಚನೆಯೆ ಮಾಡಿದ್ದನ್ನು ಮಾಡಿದವನೇ ಅನುಭವಿಸಬೇಕು. ಅದು ಯಾರಿಗೂ ತಪ್ಪಿದ್ದಲ್ಲ ಇದೆ ರೀತಿ ಇನ್ನೊಂದು ಗಾದೆ 'ಉಪ್ಪು ತಿಂದವನು ನೀರು ಕುಡಿಯಲೇ ಬೇಕು' ಈ ಗಾದೆಗೂ ಮತ್ತು ಮಾಡಿದ್ದುಣ್ಣೋ ಮಹಾರಾಯಕ್ಕೂ ಒಂದು ತರಹದ ನಂಟು ಇದೆ ಎಂಬುದುನ್ನು ಈ ಕಾದಂಬರಿಯಿಂದ ತಿಳಿದುಬರುವ ವಿಷಯ. ಮಾಡಿದ್ದನ್ನು ಮಾಡಿದವನೇ ಅನುಭವಿಸಬೇಕು. ಅದು ಯಾರಿಗೂ ತಪ್ಪಿದ್ದಲ್ಲ ಎಂದು ಹೇಳುವ ಅರ್ಥ ಸತ್ಯ ಮತ್ತು ಅನುಭವದ ಫಲವೆಂಥಲು ನಾವು ಕರೆಯಬಹುದು. ಈ ತತ್ತ್ವವೇ ಕಾದಂಬರಿಯ ಮುಖ್ಯ ವಸ್ತುವಾಗಿದೆ.

ಅತ್ತೆಯ ಕಿರುಕುಳದಿಂದ ದುಷ್ಟರ ನೆರವಿನಲ್ಲಿ ಸಿಕ್ಕು ಬಿದ್ದ ಸೊಸೆ ಸೀತಮ್ಮ ತನಗೆ ಎಷ್ಟು ಕಷ್ಟ ಸಂಕಷ್ಟಗಳು ಬಂದರು ಅವುಗಳಿಂದ ಮನಸ್ಸನ್ನು ವಿಚಲಿಸದೇ ತನ್ನ ಪಾತಿವ್ರತ್ಯವನ್ನು ಹೇಗೆ ಉಳಿಸಿಕೊಂಡು ಬಂದಳು ಎಂಬುದು ಇದರ ಕಥೆಯಾಗಿದೆ. ಈ ಕಾದಂಬರಿಯ ಪೂರ್ವಾರ್ಧದಲ್ಲಿ ಸದಾಶಿವ ದಿಕ್ಷೀತನ ಘನತೆ ಉತ್ತರಾರ್ಧದಲ್ಲಿ ಸೀತಮ್ಮನ ಹಿರಿಮೆ ಬೆಳಗುತ್ತವೆ. ದೀಕ್ಷಿತರಿಗೆ ಸೀತಮ್ಮ ಎರಡನೆಯ ಪತ್ನಿ. ಮೊದಲ ಪತ್ನಿ ಒಂದು ಮಗುವಿಗೆ ಜನ್ಮ ಕೊಟ್ಟು ತೀರಿಕೊಂಡಳು. ನಂತರ ದೀಕ್ಷಿತರು ಸೀತಮ್ಮನನ್ನು ಆ ಮಗುವಿನ ಪಾಲಿನ ಪೋಷಣೆಗೆ ಆಶ್ರಯವಾಗಲಿ ಎಂದು ಮದುವೆಯಾದದ್ದು ಅಲ್ಲಿಂದ ಸಂಸಾರದಲ್ಲಿನ ಕಥೆ ಆರಂಭವಾಗುತ್ತದೆ.

ಕಾದಂಬರಿಯಲ್ಲಿ ಹಲವಾರು ಪವಾಡಗಳಿವೆ ಅವುಗಳಲ್ಲಿ ಮುಖ್ಯವಾಗಿ ಮಾಟ ಮಂತ್ರಗಳ ಪ್ರವೇಶ ಸೀತಮ್ಮ ಸತ್ತು ಹೋದಾಗ ಆ ಹೆಣವನ್ನು ನೆಂಟರಿಷ್ಟರೆಲ್ಲಾ ಸೇರಿ ಸ್ಮಶಾನಕ್ಕೆ ಸಾಗಿಸಿ ಶವ ಸಂಸ್ಕಾರವಾದ ಮೇಲೆ ಚಿತೆಯಲ್ಲಿಟ್ಟು ಬರುತ್ತಾರೆ. ಆ ಚಿತೆಯು ಪೂರ್ಣವಾಗಿ ಹೊತ್ತಿಕೊಳ್ಳುವ ಮೊದಲೇ ಜನ ಹಿಂತಿರುಗುತ್ತಾರೆ. ಅಷ್ಟರಲ್ಲಿ ಮಂತ್ರವಾದಿಯೊಬ್ಬ ಬಂದು ಸೀತಮ್ಮನನ್ನು ಬದುಕಿಸುತ್ತಾನೆ. ಚಿತೆಯಿಂದ ಎದ್ದು ಬಂದ ಸೀತಮ್ಮನನ್ನು ಲೇಖಕ ರಾಮಾಯಣದ ಸೀತೆಯನ್ನು ನೆನಪಿಗೆ ತರುವಲ್ಲಿ ಸೀತಮ್ಮನ ಪಾತ್ರ ಪಡಿಯಚ್ಚು ಹಾಕಿ ಮೂಡಿಸಿದ್ದಾನೆ. ಇಂಥ ಪವಾಡಗಳು ದೇವರ

ಆರಾಧನೆಗಳು ತುಂಬಿದ್ದರೂ ಮಾನವ ಸ್ವಭಾವದಲ್ಲಿ ನೈಜವಾಗಿ ಆಸಕ್ತಿ ಹೊಂದಿರುವ ಕೃತಿ ಇದಾಗಿದೆ. ನಡು ನಡುವೆ ಗ್ರಾಮಗಳಲ್ಲಿರುವ ಪಕ್ಷ ಪ್ರತಿಪಕ್ಷಗಳ ಉಗ್ರವಾದ ಹೋರಾಟ. ಊರಿನಲ್ಲಿ ಲಂಚಕ್ಕಾಗಿ ಸರ್ಕಾರಿ ಲಂಚಕೋರ ಅಧಿಕಾರಿ ಅವನ ಪತ್ನಿ ಹಳ್ಳಿಯ ಉಪಾಧ್ಯಾಯ ನಾರಾಯಣಪ್ಪಯ್ಯ ಕಳ್ಳ ಅಮಾಸೆ. ಈ ಪಾತ್ರಗಳನ್ನು ಸೃಷ್ಟಿಸಿದ ಕಾದಂಬರಿಕಾರು ಮನುಷ್ಯ ಸ್ವಭಾವದಲ್ಲಿನ ವೈವಿಧ್ಯ ವೈಚಿತ್ರಗಳನ್ನು ಆಸಕ್ತಿಯಿಂದ ಬಿಡಿಸಿದ್ದಾರೆ.

ಪುಟ್ಟಣ್ಣನವರು ಒಂದು ಕ್ರಿಯೆ ನಡೆಯುವಂಥ ಆವರಣವನ್ನು ಜೀವಂತವಾಗಿ ಸೃಷ್ಟಿಸುವ ಶಕ್ತಿ ಹೊಂದಿದವರು. ಹಳ್ಳಿ ಹಳ್ಳಿಯ ಪಾಠಶಾಲೆ ಮೈಸೂರಿನ ಮುಮ್ಮಡಿ ಕೃಷ್ಣರಾಜರ ಆಸ್ಥಾನ ಪುಟ್ಟಣ್ಣನವರು ಮು. ಕೃಷ್ಣರಾಜರನ್ನು ಆದರ್ಶ ರಾಜನೆಂದೇ ಕಂಡಿದ್ದಾರೆ. ಸ್ಮಶಾನ ಲಂಚಕೋರ ಅಧಿಕಾರಿಯ ಮನೆ, ಕೂಲಿಮಠದ ಉಪಾಧ್ಯಾಯನ ಕಟುಕತನ ಅವನ ಮುಂದೆ ಮಕ್ಕಳ ನಿಸ್ಸಾಹಯಕತೆ, ಹುಲಿದೊಗಲನ್ನು ಹೊದ್ದುಕೊಂಡು ಕತ್ತೆಯಂತಿದ್ದ ಪೂಜಾರಿ ಸಿದ್ಧನ ವಿಷಯ, ಲಂಪಟತ್ವ, ಸುಡುಗಾಡಿನಲ್ಲಿ ಮಹಾಮಂತ್ರವಾದಿ ಮಾಡಿದ ಅಮಾನುಷ ಕಾರ್ಯ ಇವೇ ಮೊದಲಾದ ಜನಜೀವನದ ಚಿತ್ರಗಳು ಜೀವಂತವಾಗಿವೆ. ಅವರ ಹರಿತವಾದ ಹಾಗೂ ಸ್ಫುಟವಾದ ಶೈಲಿಯು ಓದುಗರೊಡನೆ ಸ್ಪಷ್ಟವಾದ ಸಂವಹನ ಕ್ರಿಯೆಯನ್ನು ಸಾಧಿಸುತ್ತದೆ. ಕಾದಂಬರಿಯಲ್ಲಿ ಅತ್ತೆ ಸೊಸೆಯರ ಕಿರುಕುಳ, ಗ್ರಾಮಗಳ ಕೊಳಚೆ, ಉಪಾಧ್ಯಾಯನ ಕ್ರೌರ್ಯ, ಮಂತ್ರವಾದಿಯ ಪವಾಡ ಇವು ಉತ್ಕರ್ಷ ರೀತಿಯಲ್ಲಿ ಚಿತ್ರಿತವಾಗಿವೆ.

ನೀತಿಯನ್ನು ಕಾಯ್ದುಕೊಂಡು ಬರುವ ಸೀತೆ ಕೊನೆಯಲ್ಲಿ ಜಯಶಾಲಿಯಾದರೆ ಅನೀತಿಗೆ ಅಂಟಿಕೊಂಡು ಕೆಲಸಮಾಡುತ್ತಿದ್ದು ಸಿದ್ದ ಮಾರಮಣಯ್ಯ ಮೊದಲಾದವರು ತಕ್ಕ ಶಿಕ್ಷೆಗೆ ಗುರಿಯಾಗುತ್ತಾರೆ. ಕಳ್ಳನಾಗಿದ್ದ ಅಮಾಸೆ ಪತಿವ್ರತೆಯೊಬ್ಬಳ ಪಾತಿವ್ರತ್ಯವನ್ನು ರಕ್ಷಿಸುವುದರ ಮೂಲಕ ತನ್ನ ಪಾಪವನ್ನು ಕಳೆದುಕೊಳ್ಳುತ್ತಾನೆ. ಸಮಾಜದ ಒಳ ಹಾಗೂ ಹೊರ ಸೂಕ್ಷ್ಮಗಳನ್ನೆಲ್ಲಾ ಪುಟ್ಟಣ್ಣನವರು ಈ ಕಾದಂಬರಿ ಮೂಲಕ ಆಳವಾಗಿ ಶೋಧಿಸಿದ್ದಾರೆ. ಸಮಾಜದ ಅಂತಸ್ತುಗಳನ್ನು ಹೊರಗಳೆದಿದ್ದಾರೆ. ಇಲ್ಲಿಯ ನಾರಾಣಪ್ಪನ ನಕಲಿ ಓದುಗರನ್ನು ನಗೆಯ ಹುಚ್ಚು ಹೊನಲಿನಲ್ಲಿ ಮುಳುಗಿಸುತ್ತದೆ. ಕಾದಂಬರಿಯ ತಂತ್ರ ಬಹುಮಟ್ಟಿಗೆ ನಾಟಕೀಯವಾದದ್ದಾಗಿದೆ. ಪುಟ್ಟಣ್ಣನವರ ಕಾದಂಬರಿಗಳಲ್ಲಿ ವಿಸ್ತಾರವಾದ ಬದುಕು ಇದೆ.

ಈ ಕಾದಂಬರಿಯು ಆಧುನಿಕತೆ ಕುರಿತು ಹೇಳುತ್ತದೆ. ಇಲ್ಲಿ ಮಾಟ-ಮಂತ್ರ ಎಂದು ಹೇಳುತ್ತಾ ಕಾದಂಬರಿಕಾರರು ಆಧುನಿಕತೆಯತ್ತ ಕರೆದುಕೊಂಡು ಹೋಗುತ್ತಾರೆ. ಜೀವನದಲ್ಲಿ ಒಳಿತು ಕೆಡುಕುಗಳ ಘರ್ಷಣೆಯನ್ನು ಗಂಭೀರವಾಗಿ ವಿಶ್ಲೇಷಿಸುವ ಕೃತಿ

'ಮಾಡಿದ್ದುಣ್ಣೊ ಮಹಾರಾಯ' ವೃತ್ತಾಂತ, ವರ್ಣನೆ, ಗಾಂಭೀರ್ಯ, ಹಾಸ್ಯ ಎಲ್ಲಕ್ಕೂ ಹೊಂದಿಕೊಳ್ಳಬಲ್ಲ ಶೈಲಿ ಇವರದಾಗಿದೆ.

ಮರಳಿ ಮಣ್ಣಿಗೆ

ಕನ್ನಡ ಸಾಹಿತ್ಯದಲ್ಲಿ 'ನಡೆದಾಡುವ ವಿಶ್ವಕೋಶ' ಎಂಬ ಪ್ರಖ್ಯಾತಿ ಪಡೆದ ಶಿವರಾಮ ಕಾರಂತರು ಕವಿತೆ, ನಾಟಕ, ಸಣ್ಣಕಥೆ, ಕಾದಂಬರಿ, ಪ್ರವಾಸ ಸಾಹಿತ್ಯ, ಶಿಶುಸಾಹಿತ್ಯ, ಆತ್ಮಕಥೆಗಳು, ವಿಚಾರಸಾಹಿತ್ಯ, ಅನುವಾದ ಸಾಹಿತ್ಯ, ವಿಜ್ಞಾನ, ಇತಿಹಾಸ ಇತ್ಯಾದಿ ಕ್ಷೇತ್ರಗಳಲ್ಲಿ ಕೃಷಿಮಾಡಿದವರು. ೧೯೪೨ ರಲ್ಲಿ ಪ್ರಕಟಗೊಂಡ 'ಮರಳಿ ಮಣ್ಣಿಗೆ' ಕಾದಂಬರಿ ಬಗ್ಗೆ ಕಾರಂತರು 'ನನ್ನ ಊರಿನ ಬಡತನದ ಬಾಳ್ವೆಯೇ ಕಥೆಯನ್ನು ವಸ್ತುವಾಗಿಸಿ ಈ ಬಾಳ್ವೆಯ ಪ್ರಶ್ನೆ ಮೂರು ತಲೆಮಾರುಗಳಲ್ಲಿ ಹೇಗೆ ಪ್ರತ್ಯುತರಗೊಳ್ಳುತ್ತದೆ ಎಂಬುದು ಇದರಲ್ಲಿ ಚಿತ್ರಿಸಲ್ಪಟ್ಟಿದೆ ಎಂದು ಹೇಳಿಕೊಂಡಿದ್ದಾರೆ.

ಈ ಕಾದಂಬರಿಯ ವಸ್ತುವನ್ನು ಮೂರು ಅವಸ್ಥೆಗಳಲ್ಲಿ ನಾವು ಕಾಣುವ ಗ್ರಾಮೀಣ ಸಮಾಜ ಘಟ್ಟಿಯಾಗಿ ಬೇರೂರಿದೆ. ನಿರ್ದಿಷ್ಟವಾಗಿ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಶಾಶ್ವತ ಮೌಲ್ಯಗಳನ್ನು ನಂಬಿದ ಸಮಾಜ, ಪರಂಪರೆ, ಸಂಪ್ರದಾಯ ಈ ಸಮಾಜದ ಜೀವಾಳ. ಇಲ್ಲಿ ಬಾಳುವ ಎಲ್ಲ ವ್ಯಕ್ತಿಗಳೂ ಸರಸೋತಿ, ರಾಮೈತಾಳ, ಪಾರೋತಿ, ಸತ್ಯಭಾಮೆ, ಶೀನ, ನಾರಾಯನಯ್ಯ ಇತ್ಯಾದಿ ತಮ್ಮ ಆವರಣದೊಂದಿಗೆ ಹೊಂದಿಕೊಳ್ಳುವು ದರಲ್ಲಿಯೇ ಧನ್ಯತೆಯನ್ನು ಕಂಡುಕೊಳ್ಳುತ್ತಾರೆ.

ರಾಮಐತಾಳರು ಮೊದಲ ತಲೆಮಾರಿಗೆ ಸೇರಿದವರು. ಇವರ ಜೀವನ ನಡೆಯುವುದು ಹಿರಿಯರಿಂದ ಪರಂಪರೆಯಿಂದ ಬಂದ ಕೃಷಿ ಮತ್ತು ಪೌರೋಹಿತ್ಯಗಳಿಂದ ಎಲ್ಲ ದೃಷ್ಟಿಯಿಂದಲೂ ಇವರದು ಸಾಂಪ್ರದಾಯಿಕ ಗ್ರಾಮೀಣ ಜೀವನ. ಶೀನಮಯ್ಯ ಐತಾಳರ ನೆರೆಮನೆಯವ ಇವನು ವೈದಿಕನಲ್ಲ. ಆದ್ದರಿಂದ ಐತಾಳರಷ್ಟು ಪ್ರತಿಷ್ಠಿತನಲ್ಲ. ಆರ್ಥಿಕವಾಗಿ ಇನ್ನಷ್ಟು ಸುಧಾರಿಸುವುದು ಇಬ್ಬರಿಗೂ ಬೇಕು. ಅವರ ಜೀವನ ಪರಂಪರೆಯಿಂದ ಕೇವಲ ದತ್ತವಾದದ್ದು. ಬದಲಾವಣೆಯ ಬಿಡುಗಡೆಯ ಏರಿಕೆಯ ಸಾಧ್ಯತೆಗಳು ಆ ಜೀವನದ ಚೌಕಟ್ಟಿನಲ್ಲಿ ಸೂಚಿತವಾಗಿಲ್ಲ. ಗಂಡಸರಿಗೆ ಊರ ಪಾರುಪತ್ಯೆವಾದರೂ ಒಂದಿಷ್ಟಿದೆ. ಹೆಂಗಸರ ಜೀವನವೆಂದರೆ ಕಟ್ಟಿದ ಗೂಟ, ಹಾಕಿದ ಕಲ್ಲು. ಪಾರೋತಿ ಸರಸೋತಿಯರ ಜೀವನ ಪರಂಪರೆಯಿಂದ ನಿರ್ದೇಶಿತವಾಗಿದೆ, ನಿರ್ದಿಷ್ಟವಾಗಿದೆ. ಗದ್ದೆ ಬೇಸಾಯದಷ್ಟೆ ಇವರೆಲ್ಲರ ಜೀವನದಲ್ಲಿ ಇದೇ ಏರು ತಗ್ಗುಗಳ ಉತ್ಕರ್ಷಗಳು ಸ್ಥಿರ ಜೀವನದ ಅತ್ಯುತ್ತಮ ಮಾದರಿ ಇಲ್ಲಿ ಗೋಚರವಾಗುತ್ತದೆ. ಈ ಚೌಕಟ್ಟಿನಲ್ಲಿ ಒಳಗೆ ನೋವು ನಲಿವುಗಳ ಇಲ್ಲವೆಂದಲ್ಲ. ಒಂದು ಮದುವೆ ಒಂದು ಮುಂಜಿ ಒಂದು ಗೃಹಪ್ರವೇಶ ಈ ಸಂದರ್ಭಗಳಲ್ಲಿ ಒಂದಿಷ್ಟು ಕಾಣದ ಏಕತಾನದ ಬದುಕು.

ಕೋಡಿಹಳ್ಳಿಯಲ್ಲಿ ಬದುಕುತ್ತಿರುವವರಿಗೆ ಕುಂದಾಪುರ, ಉಡುಪಿ, ಮಂಗಳೂರು, ಮೈಸೂರು, ಬೆಂಗಳೂರು, ಮದ್ರಾಸು, ಮುಂಬಯಿಗಳಲ್ಲಿ ಜೀವನ ಹೇಗೆ ಬದಲಾಗುತ್ತಿದೆ ಎಂಬುದು ಅಸ್ಪಷ್ಟವಾಗಿಯಾದರೂ ಅರಿವಿಗೆ ಬರುತ್ತದೆ. ಅನ್ನದಾನವನ್ನು ಶ್ರೇಷ್ಠದಾನವೆಂದು ನಂಬಿದ ಇವರ ಜನಾಂಗದಲ್ಲೆ ಹಲವಾರು ಪಟ್ಟಣಗಳಲ್ಲಿ ಹೊಟೇಲಗಳನ್ನು ಸ್ಥಾಪಿಸಿ ಹೇರಳವಾಗಿ ಹಣ ಸಂಪಾದಿಸುತ್ತಿದ್ದಾರೆ. ಆ ಮೂಲಕ ಹೆಚ್ಚಿನ ಸುಖ ಸೌಲಭ್ಯಗಳನ್ನೂ ಸಾಮಾಜಿಕ ಪ್ರತಿಷ್ಠೆ ಗೌರವಗಳನ್ನು ಗಳಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಸಂಸ್ಕೃತ ಅಧ್ಯಯನವನ್ನೆ ವಿದ್ಯಾಭ್ಯಾಸವೆಂದು ತಿಳಿದ ಇದೇ ಜನಾಂಗದ ಹಲವರು ಮ್ಲೇಚ್ಚಭಾಷೆ ಇಂಗ್ಲಿಷನ್ನು ಕಲಿತು ಸರ್ಕಾರದ ಮೂಲಕ ವಕೀಲ ವೃತ್ತಿಯ ಮೂಲಕ ತಮ್ಮ ಬದುಕಿನ ಸ್ವರೂಪನ್ನೇ ಬದಲಾಯಿಸಿಕೊಳ್ಳುತ್ತಿದ್ದಾರೆ. ಪ್ರಾರಂಭಿಕ ಗೊಂದಲ, ದ್ವಂದ್ವಗಳನ್ನು ದಾಟಿಕೊಂಡು ಐತಾಳ ಮಯ್ಯ ತಾವು ಆ ದಿಕ್ಕಿನತ್ತ ಹೆಜ್ಜೆ ಇಡುತ್ತಾರೆ. ಐತಾಳರ ಮಗ ಲಚ್ಚ ಇಂಗ್ಲಿಷ ಶಾಲೆ ಸೇರಿದರೆ ಮಯ್ಯರ ಮಗಳು ಒಬ್ಬೊಬ್ಬರಾಗಿ ಹೋಟೆಲ ಮಾಲೀಕರಾಗುವ ಹಂತವನ್ನು ತಲುಪುತ್ತಾರೆ.

'ಋಣವಿಲ್ಲದೇ ಬದುಕಬೇಕೆಂಬ ನಿರಂತರ ಕಷ್ಟದ ದುಡಿಮೆಯಲ್ಲೇ ಸ್ವಾವಲಂಬನೆಯ ಹಠದ ಸ್ವಾತಂತ್ರ್ಯದ ಕಲ್ಪನೆಯಿದೆ. ಈ ಹಠವಿಲ್ಲದಿದ್ದಾಗ ಲಚ್ಚನ ಸ್ವಾತಂತ್ರ್ಯದ ಅಪೇಕ್ಷೆ ಸ್ಥಿರವಾಗಿ ಬಿಡುತ್ತದೆ. ಬೇಸಾಯ ಜೀವನದ ಕ್ರೂರ ವಾಸ್ತವಗಳನ್ನು ಒಪ್ಪಿಕೊಳ್ಳದ ಹಳ್ಳಿ ಜೀವನವೆಂದರೆ ಬೇಸರ ಪಡುವ ಲಚ್ಚ ಲಾಲಸ ಪ್ರವೃತ್ತಿಯುಳ್ಳವನಾಗುತ್ತಾನೆ. ಅವನನ್ನು ಹಾಗಾಗುವಂತೆ ಮಾಡುವುದು ಕಾದಂಬರಿಯ ಉಳಿದ ಪಾತ್ರಗಳಲ್ಲಿ ಮುಖ್ಯವಾಗಿ ತಂದೆ ರಾಮ ಐತಾಳನಲ್ಲೂ ಇರುವ ಕಷ್ಟದ ದುಡಿಮೆಯಿಂದ ಬಿಡುಗಡೆ ಪಡೆಯುವ ಹಂಬಲವೆಂಬುದೂ ಕಾದಂಬರಿಯ ನೈತಿಕ ಪ್ರಜ್ಞೆಗೊಂದು ಸೂಕ್ಷ್ಮವನ್ನು ತರುತ್ತದೆ'.[೧]

ಐತಾಳರ ಮೊಮ್ಮಗ ರಾಮ ಮೂರನೆಯ ತಲೆಮಾರಿಗೆ ಸೇರಿದವನು ಇವನ ಕಾಲಕ್ಕೆ ಆಧುನಿಕರಣದ ಪ್ರಕ್ರಿಯೆ ಒಂದು ನಿರ್ದಿಷ್ಟ ಘಟ್ಟವನ್ನು ಅದಾಗಲೇ ತಲುಪಿದೆ. ಪರಂಪರಾಗತವಾದ ಸಮಾಜವೊಂದು ವಸಾಹತುಶಾಹಿ ಪ್ರದೇಶದಿಂದ ಪಡೆದ ಆಘಾತವನ್ನು ಮೊದಲ ಘಟ್ಟವೆಂದಿಟ್ಟುಕೊಂಡರೆ ಐತಾಳರ ದ್ವಂದ್ವಗಳಿಗೆ ಒಂದು ಸಾಂಸ್ಕೃತಿಕ ಆಯಾಮ ತಾನಾಗಿ ಬಂದು ಬಿಡುತ್ತದೆ. ಇಲ್ಲಿ ಆಯ್ಕೆ ಅವನತಮುಖಿ ಸಮಾಜ ಮತ್ತು ಇನ್ನೂ ಅಸ್ಪಷ್ಟವಾಗಿರುವ ಆಧುನಿಕ ಮೌಲ್ಯ ವ್ಯವಸ್ಥೆಯ ನಡುವೆ ಆಗಬೇಕು. ಲಚ್ಚನ ತಲೆಮಾರಿನ ಜೀವನವನ್ನು ಚಿತ್ರಿಸುವಾಗ ಕಾರಂತರು ಈ ಆಧುನಿಕತೆಯ ಇತ್ಯಾತ್ಮಕ ಹಾಗೂ ಕರಾಳ ಮುಖಗಳತ್ತ ನಮ್ಮ ಗಮನ ಸೆಳೆಯುತ್ತಾರೆ. ಮುಂದಿನ ಘಟ್ಟದಲ್ಲಿ ವಸಾಹತುಶಾಹಿ ತಂದ ಹೊಸ ಮೌಲ್ಯಗಳು ಜೀವನ ಸಾಫಲ್ಯದ ಮೌಲ್ಯಗಳು ಎನಿಸಿಬಿಟ್ಟಿವೆ. ಆದರೆ ಇದರೊಟ್ಟಿಗೆಯೇ ಆಧುನಿಕ ಶಿಕ್ಷಣದೊಂದಿಗೆ ಹುಟ್ಟಿಗೆ ಹೊಸ ಸ್ವ ಅರಿವು ಮತ್ತು ಹೊಸ ರಾಷ್ಟ್ರೀಯ ಪ್ರಜ್ಞೆಯಿಂದ ವಸಾಹತುಶಾಹಿಯೊಂದಿಗೆ ಪ್ರೀತಿ ದ್ವೇಷಗಳ ಸಂಘರ್ಷ ಆರಂಭವಾಗಿ ಬಿಟ್ಟಿದೆ. ರಾಮ

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದು ನಿರುದ್ಯೋಗದ ಬವಣೆಯನ್ನು ಅನುಭವಿಸುವುದು ಮಣ್ಣಿಗೆ ಮರಳುವ ನಿರ್ಧಾರ ಮಾಡುವುದು. ಇವುಗಳು ಕಾದಂಬರಿಯ ಮೂರನೆಯ ಭಾಗದಲ್ಲಿ ಅನಾವರಣಗೊಳ್ಳುತ್ತವೆ. ಆಧುನಿಕ ಶಿಕ್ಷಣ ಸ್ವಾಗತಿಸಿದ ಈ ಕಾದಂಬರಿ ಶಿಕ್ಷಣ ಪಡೆದ ರಾಮೈತಾಳನ ಚಿತ್ರಣ ಮಾಡತ್ತ ಶಿಕ್ಷಣದ ಮಹತ್ವವನ್ನು ತೋರಿಸುತ್ತ ಅಧುನಿಕತೆಗೆ ಹೆಚ್ಚು ಒತ್ತನ್ನು ನೀಡಿದೆ.

ಯಾವುದೇ ಕಾದಂಬರಿಗಳಲ್ಲಿ ಗಂಡು ಹೆಣ್ಣಿನ ಸಂಬಂಧವನ್ನು ಅಧ್ಯಯನ ಮಾಡುವುದಕ್ಕೆ ಹೊರಟಾಗ ಲೇಖಕನ ಜೀವನ ದರ್ಶನಗಳನ್ನು ಅರ್ಥೈಸಿಕೊಳ್ಳಬಹುದು. ಕಾರಂತರು ಈ ಸಂಬಂಧವನ್ನು ಕಾದಂಬರಿಯಲ್ಲಿ ಚಿತ್ರಿಸುವಾಗ ಬಹಳ ಎಚ್ಚರಿಕೆಯಿಂದಲೇ ಚಿತ್ರಿಸಿದ್ದಾರೆ. ಎಲ್ಲಿಯೂ ಬೇರೆ ಯಾವುದೇ ಆಲೋಚನೆಗಳಿಗೆ ಆಸ್ಪದ ಕೊಟ್ಟಿರುವುದನ್ನು ಕಾದಂಬರಿಯ ಆರಂಭದಿಂದ ಕೊನೆಯವರೆಗೂ ಅಧ್ಯಯನ ಮಾಡಿದಾಗ ಈ ವಿಷಯ ತಿಳಿದು ಬರುತ್ತದೆ. ಕಾರಂತರು ಗಂಡು ಹೆಣ್ಣಿನ ಸಂಬಂಧವನ್ನು ಚಿತ್ರಿಸುವಾಗ ಕಾಮವನ್ನು ಆರಾಧಿಸದೇ ದಿಕ್ಕರಿಸದೇ ಸಾಂಪ್ರದಾಯಿಕ ನೆಲೆಯಲ್ಲಿಯೇ ಬಂಧಿಸಿಡುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಗಂಡಿನ ಆಸೆ ಆಕಾಂಕ್ಷೆಗಳನ್ನು ಪೂರೈಸುವ ಪರಿಕರಗಳೆಂದು ಎಲ್ಲಿಯೂ ಚಿತ್ರಿಸಿಲ್ಲವೆಂದು ವಿಚಾರವನ್ನು ಗ್ರಹಿಸಿಕೊಳ್ಳಬಹುದು.

ಕಾನೂರು ಸುಬ್ಬಮ್ಮ ಹೆಗ್ಗಡತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡದ ವರ್ಡ್ಸ್‌ವರ್ತ ಎಂದೇ ಹೆಸರಾದ ಕೆ.ವಿ. ಪುಟ್ಟಪ್ಪಣನವರು ಇವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿ ೧೯೩೬ ಪ್ರಕಟಗೊಂಡಿದ್ದು ಇದೊಂದು ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಯೊಂದಿಗೆ ಹೊಸಹೊಸ ಆಯೋಗಗಳನ್ನೊಳಗೊಂಡ ಸುಂದರವಾದ ಕಾದಂಬರಿ ಎಂಬ ಹೆಗ್ಗಳ್ಳಿಕೆಗೆ ಪಾತ್ರವಾಗಿದೆ.ಒಂದು ಸಮಾಜದಲ್ಲಿ ವಾಸವಾಗಿರುವ ಹಲವು ಜಾತಿಗಳ, ವರ್ಗಗಳ ಬಗ್ಗೆ ಮಾಹಿತಿ ನೀಡುವ ಪುಟ್ಟ ಪ್ರಪಂಚ. ಈ ಕಾದಂಬರಿ ಎಂಬ ಮಾಯಾಲೋಕದ ಬಾಗಿಲು ತೆರೆಯುತ್ತಿದ್ದಂತೆ ನಮಗೆ ಹೊಸ ಹೊಸ ಆಯಾಮ, ದೃಷ್ಟಿಕೊನ, ಯೋಜನಾ ಲಹರಿ ಅದರಲ್ಲಿ ಸುಪ್ತವಾಗಿ ಅಡಗಿರುವ ಸಂದೇಶ ಯಾರನ್ನು ಹೆಚ್ಚುಗಾರಿಕೆ ಮಾಡದೇ ಯಾರನ್ನು ಕಡೆಗಣಿಸದೆ ಒಂದೊಂದು ಪುಟ್ಟ ಪಾತ್ರಗಳಿಗೂ ನ್ಯಾಯ ಒದಗಿಸಿದ ರೀತಿ ಆ ಪಾತ್ರ ಹುಟ್ಟಿಕೊಳ್ಳುವುದು ಕೊನೆಯಾಗುವುದು. ಇದೆಲ್ಲವೂ ಒಂದು ವಿಸ್ಮಯ ಲೋಕವನ್ನೆ ಸೃಷ್ಟಿಸುತ್ತದೆ.

ಕಾದಂಬರಿ ಪ್ರಾದೇಶಿಕತೆಯನ್ನು ಒಳಗೊಂಡಿರುವುದರಿಂದ ವಾಸ್ತವಿಕತೆ, ಆದರ್ಶ ಕನಸುಗಳ ಸುಂದರ ಸಮ್ಮಿಳನವಾಗಿದೆ. ಇದರಿಂದ ಕಾನೂರು ಹೆಗ್ಗಡತಿ ಶ್ರೇಷ್ಠ ಕಾದಂಬರಿ ಅನಿಸಿಕೊಳ್ಳುತ್ತದೆ. ಇದು ಚಂದ್ರಯ್ಯಗೌಡರು, ಸುಬ್ಬಮ್ಮ, ಹೂವಯ್ಯ, ರಾಮಯ್ಯ, ಸೀತೆ ಈ ಐದು ಪ್ರಮುಖ ವ್ಯಕ್ತಿಗಳ ಸುತ್ತಲೂ ಕಥೆ ಹೆಣೆದುಕೊಂಡಿದೆ.

ಅಲ್ಲದೇ ಇನ್ನೂ ಕೆಲವು ಸಣ್ಣ ಪುಟ್ಟ ಪಾತ್ರಗಳು ಕಾದಂಬರಿಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಮೂಡಿಬಂದಿರುವುದನ್ನು ಕಾಣಬಹುದು.

ಸುಬ್ಬಮ್ಮನ ಹೆಸರು ಕಾದಂಬರಿಗೆ ಕೊಟ್ಟಿರುವುದರಿಂದ ಆಕೆ ಗಂಡ ಚಂದ್ರಯ್ಯಗೌಡನನ್ನು ನಾಯಕನೆಂದು ಹೇಳಲು ಬರುವಂತಿಲ್ಲ. ಕಾದಂಬರಿಯಲ್ಲಿ ಬರುವ ವ್ಯಕ್ತಿಗಳನ್ನೆಲ್ಲ ತನ್ನ ಪ್ರಚಂಡ ವ್ಯಕ್ತಿತ್ವದಿಂದ ಕುಬ್ಜರನ್ನಾಗಿ ಮಾಡುವ ಹೂವಯ್ಯನೆ ಇಲ್ಲಿನ ನಾಯಕ. ಈತನನ್ನು ಪ್ರೀತಿಸುವ ಸೀತೆಯು ಕಾದಂಬರಿಯ ನಾಯಕಿಯಾಗುತ್ತಾಳೆ. ಸೀತೆಯನ್ನು ವರಿಸಿಕೊಳ್ಳಲು ಹೋಗಿ ಕೊರಗಿ ಸಾಯುವ ರಾಮಯ್ಯನ್ನು ಕಾದಂಬರಿಯ ಉಪನಾಯಕನೆಂತಲೂ ನಾವು ಕರೆಯಬಹುದು. ಹೂವಯ್ಯ ಮತ್ತು ರಾಮಯ್ಯ ಎಂಬ ಎರಡು ಪಾತ್ರಗಳ ಮೂಲಕ ಕಾದಂಬರಿಕಾರರು ಮಲೆನಾಡಿನ ವಿಸ್ಮಯಲೋಕವನ್ನು ಪ್ರವೇಶಿಸುತ್ತಾರೆ. ಈ ಪಾತ್ರಗಳು ಮೊದಲೇ ಮಲೆನಾಡಿನಲ್ಲಿ ಹುಟ್ಟಿ ಬೆಳೆದವರು. ತಮ್ಮ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಕಳುಹಿಸುವುದು ವಾಡಿಕೆ. ಅದೇ ರೀತಿ ಹೂವಯ್ಯ ಮತ್ತು ರಾಮಯ್ಯ ಮೈಸೂರಿಗೆ ಹೋಗುತ್ತಾರೆ. ಆದರೆ ಬೇರೆಲ್ಲ ಯುವಕರ ಹಾಗೆ ಇವರಲ್ಲ. ಪದವಿಯೊಂದಿಗೆ ಜ್ಞಾನ ಸಂಪಾದನೆಯ ಆಸಕ್ತಿ ಹೊತ್ತವರು. ಹಾಗಾಗಿ ದೇಶ ವಿದೇಶಗಳ ಲೇಖಕರ ಪುಸ್ತಕಗಳನ್ನೆಲ್ಲ ಓದಿ ತಿಳಿದುಕೊಂಡು ಅದನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳಲು ಪ್ರಯತ್ನಿಸಿದವರು.

ಕಾನೂರು ಹೆಗ್ಗಡತಿ ಕಾದಂಬರಿಯನ್ನು ಮದುವೆಯ ಪರಿಕಲ್ಪನೆಯನ್ನು ಆಧಾರವಾಗಿರಿಸಿಕೊಂಡು ಲೇಖಕರು ಬರೆದಿರುವುದನ್ನು ಕಾಣಬಹುದು. ಮನುಷ್ಯನಿಗೆ ಪ್ರಾಣ ಎನ್ನುವುದು ಎಷ್ಟು ಮುಖ್ಯವೊ ಕಾದಂಬರಿಗೆ ಪಾತ್ರಗಳು ಅಷ್ಟೇ ಮುಖ್ಯವಾಗಿರುತ್ತವೆ. ಪಾತ್ರಗಳು ಸಜೀವವಾಗಿ ಕಂಡಷ್ಟು ಕಾದಂಬರಿ ಯಶಸ್ವಿಯಾಗುತ್ತದೆ. ಚಂದ್ರಯ್ಯಗೌಡರು ಕಾದಂಬರಿಯಲ್ಲಿ ಮುಖ್ಯ ಪಾತ್ರವಾದರೂ ಸಹ ಅವರು ಸಮಾಜದ ದೃಷ್ಟಿಯಲ್ಲಿ ಸ್ಥಾನ ಪಡೆಯದೇ ಹೋಗುತ್ತಾರೆ. ಕಾರಣ ಅವರ ವಿವಾಹ ವೃತಾಂತ ಎಂದೇ ಹೇಳಬಹುದು. ಕಾದಂಬರಿಯಲ್ಲಿ ಇನ್ನೊಂದು ವಿಷಯವೆಂದರೆ ಮಲೆನಾಡು ಶ್ರೀ ವೈಷ್ಣವ ನಾಮಧಾರಿ ಗೌಡ ಸಂಸ್ಕೃತಿಯಲ್ಲಿ ಮದುವೆ ಆಚರಣೆಗಳ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಸಾಮಾಜಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ಸ್ತ್ರೀ ಪಾತ್ರಗಳು ಒಂದೆಡೆಯಾದರೆ ಕಾನೂರು ಮನೆಯ ಯಜಮಾನಿಯಾದ ಸುಬ್ಬಮ್ಮಳ ದಾರುಣ ಅಂತ್ಯ ಇನ್ನೊಂದೆಡೆ ಕಾಣುತ್ತೇವೆ. ಗಾಡಿ ನಿಂಗನ ಮಗ ಪುಟ್ಟನ ಕೊಲೆಯ ವಾರ್ತೆ ಕೇಳಿ ಕಾನೂರಿಗೆ ಹೋಗಿದ್ದ ಗಂಗೆಯನ್ನು ಹೂವಯ್ಯ ಹೊಡೆಯುತ್ತಾನೆ. ಇಲ್ಲಿ ಲೇಖಕರು ಹೂವಯ್ಯನನ್ನು ಅತೀ ಮಾನವನ ರೀತಿಯಲ್ಲಿ ಚಿತ್ರಿಸದೇ ಈತನಲ್ಲಿ ಮಾನವ ಸಹಜ ದೋಷಗಳನ್ನು ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಲೇಖಕರು ಕನ್ನಡ ಸಾಹಿತ್ಯದಲ್ಲಿ ಸುಬ್ಬಮ್ಮನಂಥ ದುರಂತ ನಾಯಕಿ ಇನ್ನೊಬ್ಬಳಿಲ್ಲ ಎಂದು ಅವಳ ಪಾತ್ರವನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ತನ್ನ ತಪ್ಪೇನೂ ಇರಲಿಲ್ಲವಾದರೂ ಅವಳು ಬಾಳಿನುದ್ದಕ್ಕೂ ಸಂಕಷ್ಟಗಳನ್ನೇ ಎದುರಿಸಬೇಕಾಯಿತು. ಸುಖ ಹೇಗಿರುತ್ತದೆ ಎಂಬ ಅರಿವು ಇವಳಿಗೆ ಇರಲಿಲ್ಲ. ಕಾದಂಬರಿಯ ಮೂಲ ಕಥಾವಸ್ತು ಕೌಟುಂಬಿಕ ಬಿಕ್ಕಟ್ಟು ಎಂಬುದು ಮುಖ್ಯವಾಗದು. ಈ ಕಾದಂಬರಿಯಲ್ಲಿ ಬರುವ ಕುಟುಂಬಗಳ ಬಿಕ್ಕಟ್ಟಿಗೆ ಆರ್ಥಿಕ ಅಂಶವೇ ಮೂಲಕಾರಣ ಜೊತೆಗೆ ಸಾಮಾಜಿಕ ವಿಷಯಗಳು ಮುಖ್ಯವಾಗುತ್ತವೆ. ಕಾದಂಬರಿಯನ್ನು ಅರ್ಥ ಮಾಡಿಕೊಳ್ಳುತ್ತ ಹೋಗುವಾಗ ಒಂದು ಶ್ರೀಮಂತ ಕುಟುಂಬದ ಯಜಮಾನನ ಸ್ಥಾನಕ್ಕೆ ಇರುವ ಪೈಪೋಟಿಗಳು ಬಲತ್ಕಾರವಾಗಿ ಯುವ ಜನಾಂಗದ ಆಶೋತ್ತರಗಳನ್ನು ಹತ್ತಿಕ್ಕುವುದು. ಚಂದ್ರೇಗೌಡ ಈತ ತನ್ನ ಅಣ್ಣನ ಮಗನನ್ನು ಮನೆಯಿಂದ ಬೇರೆ ಮಾಡುವಾಗ ಆತ ಆಡುವ ನಾಟಕ ಅದಕ್ಕಾಗಿ ಆತನ ಪೂರ್ವ ತಯಾರಿ ಗಮನಾರ್ಹವಾಗಿದೆ. ಹೂವಯ್ಯ ಅಂದರೆ ಹಣವನ್ನು ಬೇಡ ಎನ್ನುವ ವ್ಯಕ್ತಿ ದೇವರು ಅಥವಾ ದೆವ್ವವಾಗಿರಬೇಕು ಎಂಬುದಕ್ಕೆ ದೇವಯ್ಯನನ್ನು ಉದಾಹರಿಸಬಹುದು. ಆತನಿಗೆ ಹಣದ ಬಗ್ಗೆ ಅಷ್ಟೊಂದು ವ್ಯಾಮೋಹವಿಲ್ಲ. ಚಂದ್ರೇಗೌಡನಿಗೆ ಅವನನ್ನು ಹೋಲಿಸಿದರೆ ಹೂವಯ್ಯ ದೇವರೆ ಸರಿ.

ಕುವೆಂಪುರವರು ಸ್ತ್ರೀಯರ ಬಗ್ಗೆ ಮೃದು ಧೋರಣೆಯನ್ನು ತೋರಿಸಿರುವುದು ಕಾಣುತ್ತದೆ. ಅಂದರೆ ಸ್ತ್ರೀಯನ್ನು ಸುಖ ಸಂತೋಷದಲ್ಲಿ ಇರಲು ಬಿಡದೆ ವ್ಯಕ್ತಿ ಸಾವಿನಲ್ಲೂ ನರಳುತ್ತಾನೆ. ಅವನಿಗೆ ಸುಲಭ ಸಾವು ಲಭ್ಯವಾಗುವುದಿಲ್ಲ. ಇನೊಂದೆಡೆ ಪುರುಷ ಪ್ರಧಾನವಾದ ಸಮಾಜವನ್ನು ಅವರು ಬಿಟ್ಟು ಕೊಟ್ಟಿಲ್ಲ. ಚಂದ್ರಯ್ಯಗೌಡರೂ ಸಾವು ಸಂಭವಿಸಿದಾಗ ಕದಿನಿ ಹಾರಿಸಿ ಗರ್ನಾಲು ಸಿಡಿಸಿ ಅದೊಂದು ವಿರೋಚಿತ ಸಾವು ಸುತ್ತಲಿನ ಹಳ್ಳಿಗೆಲ್ಲ ತಿಳಿಯಲಿ ಎಂದು ಪಟಾಕಿ ಹಾರಿಸುವರು. ಸುಬ್ಬಮ್ಮಳ ಸಾವು ಸಂಭವಿಸಿದಾಗ ಈ ಮೇಲಿನ ರೀತಿಯು ಪುನರಾವರ್ತನೆ ಆಗುವುದಿಲ್ಲ. ಅವಳದು ಅವಮಾನಕರವಾದ ಸಾವು. ಆಕೆ ಅನೈತಿಕತೆಗೆ ಬಲಿಯಾಗಿದ್ದಾಳೆ ಚರಿತ್ರೆ ಹೀನೆಗೆ ಇಂತಹ ಸಾವು ಬರುವುದು ಎಂಬ ಸಂದೇಶ ಸಮಾಜಕ್ಕೆ ನೀಡುತ್ತಾರೆ. ಈ ಕಾದಂಬರಿ ಯಜಮಾನ ಸಂಸ್ಕೃತಿಯನ್ನು ತೋರಿಸುತ್ತಾ ಆಧುನಿಕ ರಾಜಕಾರಣಕ್ಕೆ ಸಂಬಂಧವಿದೆ ಎನ್ನುವಂತೆ ಚಿತ್ರಣಗೊಂಡಿದೆ. ಇಲ್ಲಿ ಶಿಕ್ಷಣ ಮತ್ತು ಸಮಾಜದಲ್ಲಿ ಸ್ಥಾನಕ್ಕಾಗಿ ಪೈಪೋಟಿ ನಡೆದಿರುವುದು ಮುಖ್ಯ ಅಂಶಗಳಾಗಿವೆ ಜೊತೆಗೆ ಸ್ತ್ರೀಯ ಸ್ಥಾನ ಕುರಿತಾದ ವಿಷಯಗಳನ್ನು ಸಹ ಒಳಗೊಂಡಿದೆ.

ಜ್ವಾಲಾಮುಖಿಯ ಮೇಲೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯದ ಆಂದೋಲನ ಅಲ್ಪಾವಧಿಯದಾಗಿದ್ದರೂ ಸಹ ಅದೊಂದು ಪ್ರಭಾವಶಾಲಿ ಘಟ್ಟವಾಗಿದೆ. ಈ ಘಟ್ಟದಲ್ಲಿ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರಾದ ಬಸವರಾಜ ಕಟ್ಟಿಮನಿಯವರು.

ಇವರು ರಾಷ್ಟ್ರೀಯತೆ, ಕಾರ್ಮಿಕ ಹೋರಾಟ, ಸಾಮಾಜಿಕತೆ, ಐತಿಹಾಸಿಕ ಇತ್ಯಾದಿ ವಸ್ತು ಹಿನ್ನೆಲೆಯಲ್ಲಿ ಕಾದಂಬರಿಗಳ ರಚನೆ ಮಾಡಿರುವ ಶ್ರೇಷ್ಠ ಬರಹಗಾರರ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಇವರ ಪ್ರಮುಖ ಕಾದಂಬರಿಗಳಲ್ಲಿ ಒಂದಾದ 'ಜ್ವಾಲಮುಖಿಯ ಮೇಲೆ' ಕಾದಂಬರಿಯೂ ಪ್ರಕಟವಾದದ್ದು ೧೯೫೧ ರಲ್ಲಿ. ಕಾರ್ಮಿಕ ಹೋರಾಟದ ಚಿತ್ರಣವುಳ್ಳ ಒಂದು ಮಹತ್ವದ ಪ್ರಗತಿಶೀಲ ಕಾದಂಬರಿ. ಸ್ವತಂತ್ರ ಭಾರತದ ಮುಕ್ತ ವಾತಾವರಣದಲ್ಲಿ ಭ್ರಷ್ಟತೆಯ ಮೂಲಕವೇ ಬಲಿತ ಬಂಡವಾಳಶಾಹಿಗಳು, ಕಾರ್ಮಿಕರ ಮೇಲೆ ನಡೆಸಿದ ಶೋಷಣೆಯನ್ನು ಹಾಗೂ ಆ ಶೋಷಣೆಗೆ ಕಾರ್ಮಿಕರು ತೋರಿದ ಪ್ರತಿಭಟನೆಯನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುವ ಇದು ವರ್ಗ ಹೋರಾಟದ ಒಂದು ಅಪೂರ್ವ ದಾಖಲೆಯಂತೆ ಕಂಡು ಬಂದಿದೆ.

ಕಟ್ಟಿಮನಿಯವರ ಕಾದಂಬರಿಯಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳೆಲ್ಲವೂಗಳನ್ನು ಮೇಳೈವಿಸಿಕೊಂಡು ಸ್ಪಷ್ಟವಾದ ಸಂಘರ್ಷದ ಹಾದಿಯೊಂದನ್ನು ಕಟ್ಟಿಕೊಡುವ ಈ ಕಾದಂಬರಿ ವರ್ಗ ಸಂಘರ್ಷದ ವಸ್ತುವುಳ್ಳ ಕಾದಂಬರಿ. ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿದೆ. ತಮ್ಮ ಅಲೆಮಾರಿ ಜೀವನದಲ್ಲಿ ದಾವಣಗೆರೆಗೆ ಹೋಗಿದ್ದ ಕಟ್ಟಿಮನಿಯವರು ಅಲ್ಲಿ ತಾವು ಪಟ್ಟಪಾಡು ಅಲ್ಲಿನ ಕಾಟನ್ ಮಿಲ್ಲಿನ ಕಾರ್ಮಿಕರ ಮೇಲೆ ನಡೆಯುತ್ತಿದ್ದ ಶೋಷಣೆ ಇವುಗಳನ್ನು ಪ್ರಮುಖ ಆಧಾರವಾಗಿಟ್ಟುಕೊಂಡು ಈ ಕಾದಂಬರಿ ರಚನೆ ಮಾಡಿದ್ದಾರೆ. ಕಲ್ಪನೆ ಆಧಾರಿತ ಕಾದಂಬರಿಗಳಿಗಿಂತಾ ನೈಜ ಮತ್ತು ಸತ್ಯ ಘಟನೆಗಳನ್ನೊಳಗೊಂಡ ಕಾದಂಬರಿಗಳು ಯಾವ ಕಾಲಕ್ಕೂ ತಮ್ಮ ಶ್ರೇಷ್ಠತೆಯನ್ನು ಕಳೆದುಕೊಳ್ಳಲಾರವು ಎಂಬುದಕ್ಕೆ ಈ ಕಾದಂಬರಿ ಒಂದು ಉತ್ತಮ ಉದಾಹರಣೆಯಾಗಿದೆ.

ಕಾದಂಬರಿಯಲ್ಲಿ ಸೂತ್ರಧಾರಿಯಾಗಿ ಚಂದ್ರಣ್ಣ ಕಾಣಿಸಿಕೊಳ್ಳುತ್ತಾನೆ. ಇವನೊಬ್ಬ ಕ್ರಾಂತಿಕಾರಿ ಪತ್ರಿಕಾಕರ್ತ. ರಾಜಣ್ಣ ಸುಬ್ಬಣ್ಣನೆಂಬ ತರುಣರೊಂದಿಗೆ ಹಾಗೂ ರಂಗಯ್ಯನೆಂಬ ಬಡ ಮುದ್ರಣ ಹೊಂದಿದವನೊಂದಿಗೆ ಸೇರಿ ಕ್ರಾಂತಿ ಎಂಬ ಪತ್ರಿಕೆಯನ್ನು ತೆಗೆಯುತ್ತಾನೆ. ಹಣದ ಕೊರತೆಯಿಂದಾ ಸಮಸ್ಯೆ ಉಂಟಾಗುತ್ತದೆ. ಈ ಸಮಯದಲ್ಲಿ ನೆರವಾಗಲು ಬಂದ ಶಿವಯೋಗಿಶ್ವರ ಮತ್ತು ಸಂಗಪ್ಪ ಶೆಟ್ಟರ ಮಗ ಸದಾಶಿವನ ಮಾತಿಗೆ ಬಲಿಯಾಗಿ ಧರ್ಮಪುರ(ದಾವಣಗೆರೆ)ಯಲ್ಲಿ'ಲಿಮಿಟೆಡ ಕಂಪನಿ' ಸ್ಥಾಪಿಸಲು ಚಂದ್ರಣ್ಣ ಮುಂದಾಗುತ್ತಾನೆ. ಇಲ್ಲಿಂದಲೆ ಆತನ ಜೀವನದ ತೊಂದರೆಗಳು ಉದ್ಭವವಾಗುತ್ತವೆ. ಇತ್ತ ಸಂಗಪ್ಪ ಶೆಟ್ಟರ ಕಾಂಗ್ರೆಸ್ ಮುಖಂಡರಾದರೆ ಜಗತಾರಿ ಪೀಠದ ಜಗದ್ಗುರುಗಳು ಕಮ್ಯುನಿಷ್ಟರು ಸೋಶಿಲಿಸ್ಟರು ಎಲ್ಲರಿಗೂ ಪತ್ರಿಕೆ ಬೇಕೆಂಬುದು ನಿಜ ಆದರೆ ಪ್ರಕಟನೆ ಮಾಡು ವಿಷಯ ಮಾತ್ರ ಅವರ ಆಜ್ಞೆ ಒಳಪಡಿಸಬೇಕಾಯಿತು. ಇವುಗಳ ಮಧ್ಯ ಚಂದ್ರಣ್ಣ ಸಂಕಷ್ಟಕ್ಕೆ ಸಿಲುಕುತ್ತಾನೆ. ಶಿವಯೋಗಿಶ್ವರ ಕಂಪನಿಯ ಹಣ ನೊಂಗಿದ್ದರಿಂದ ಹಾನಿಗಿಡಾಗುತ್ತದೆ. ಶಿವಯೋಗಿಶ್ವರ ಮತ್ತು ಚಂದ್ರಣ್ಣ ಕಾರಿನಲ್ಲಿ ಹೋಗುವಾಗ ಮುದುಕಿಯೊಬ್ಬಳ್ಳು ಕಾರಿನಲ್ಲಿ ಸಿಲುಕುತ್ತಾಳೆ. ಶಿವಯೋಗಿಶ್ವರ

ಮುದುಕಿಯನ್ನೆ ಬೈದರೆ ಚಂದ್ರಣ್ಣ ಅವಳ ಶುಶ್ರೂಷೆ ಮಾಡಿ ಅವರ ಮನೆಗೆ ಹೊಗುತ್ತಾನೆ. ಮುದುಕಿಯ ಮಗ ಸೋಮಣ್ಣ ಹಾಸಿಗೆ ಹಿಡಿದಿದ್ದರೆ ಇತ್ತ ಅವನ ತಂಗಿ ರತ್ನಾ ಮತ್ತು ಚಂದ್ರಣ್ಣನಿಗೆ ಆತ್ಮೀಯತೆ ಬೆಳೆಯುತ್ತದೆ. ಮುಂದೆ ಕಾರ್ಮಿಕ ಕೇರಿಗೆ ಚಂದ್ರಣ್ಣ ಹೊಗುವುದು ರೂಢಿ.

ಕಾರ್ಮಿಕ ಕೇರಿಗೆ ಹೊಗುತ್ತಿರುವುದರಿಂದ ಚಂದ್ರಣ್ಣನಿಗೆ ಕಮ್ಯುನಿಷ್ಟ ಪಕ್ಷದವರ ಪರಿಚಯವಾಗುತ್ತದೆ. ಕಮ್ಯುನಿಷ್ಟರು ಒಂದು ಸಲ ಬಂಡವಾಳಶಾಹಿ ವರ್ಗದವರ ವಿರುದ್ಧ ಹೋರಾಟ ಮಾಡಿದರು. ಅದು ಯಶಸ್ವಿಯಾಗದೇ ಹೊಯಿತು. ಮುಂದೆ ಕಮ್ಯುನಿಷ್ಟ ಪಕ್ಷದಲ್ಲಿ ಚಂದ್ರಣ್ಣ ಸೇರಿಕೊಳ್ಳುತ್ತಾನೆ. ರತ್ನ, ಮಲ್ಲೇಶಿ ಹಾಗೂ ನಾಗಮ್ಮ ಈ ಮೂವರೆ ಕಾರ್ಮಿಕರ ಸಂಘಟನೆ ಮಾಡಿ ಮತ್ತೊಮ್ಮೆ ಚಳುವಳಿ ಆರಂಭಿಸುತ್ತಾರೆ. ಇದು ಸಹ ಯಶಸ್ವಿಯಾಗದ ಹೋರಾಟವಾಗುತ್ತದೆ. ಇತ್ತ ಸದಾಶಿವ ರತ್ನಳನ್ನು ಅಪಹರಿಸಿ ಬಲತ್ಕಾರಕ್ಕೆ ಮುಂದಾಗುತ್ತಾನೆ. ರತ್ನ ಗಾಜಿನ ಗ್ಲಾಸಿನಿಂದ ಅವನನ್ನು ಹೊಡೆದು ತಪ್ಪಿಸಿಕೊಳ್ಳುವುದು ಸತ್ತನೆಂದು ತಿಳಿದು ಚಂದ್ರಣ್ಣನೊಂದಿಗೆ ಊರುಬಿಟ್ಟು ಹೊಗುತ್ತಾಳೆ. ಮುಂದೆ ಬದುಕಿರುವ ವಿಷಯ ತಿಳಿದು ಊರಿಗೆ ಬರುತ್ತಾರೆ. ಅಷ್ಟರಲ್ಲಿ ಚಂದ್ರಣ್ಣ ರತ್ನ ಒಂದಾಗಿರುತ್ತಾರೆ. ಮುಂದೆ ಕಾರ್ಮಿಕ ಸಂಘಟನೆ ಮಾಡಿ ಬಂಡವಾಳಶಾಹಿಗಳೆದುರು ಹೋರಾಡುವ ಸೂಚನೆ ಕೊಟ್ಟು 'ಜ್ವಾಲಾಮುಖಿಯ ಮೇಲೆ' ಸಾಂಕೇತಿಕ ಅಂತ್ಯ ಪಡೆಯುತ್ತದೆ.

ಕಾದಂಬರಿಯ ಮೂಲ ಪ್ರೇರಣೆ ಕಮ್ಯುನಿಜಂ, ಪ್ರಗತಿಶೀಲ ಚಳುವಳಿಗಳೇ ಆಗಿದ್ದರೂ ಅದಕ್ಕೂ ಮುಖ್ಯವಾಗಿ ಪ್ರಾದೇಶಿಕವಾಗಿ ವಾಸ್ತವದಲ್ಲಿ ನಡೆದ ಹೋರಾಟ ಅಥವಾ ಸಂಘರ್ಷವೆ ಅದರ ಕೇಂದ್ರ ಬಿಂದು ಎಂದು ಹೇಳಬಹುದು. ಹೋರಾಟದ ಒಂದು ಭಾಗವಾಗಿ ನಿಂತಿದ್ದ ಕಟ್ಟಿಮನಿಯವರು ತಮ್ಮ ಸ್ವನುಭಾವದ ಆಧಾರದ ಮೇಲೆಯೇ ಅದನ್ನೊಂದು ಗಟ್ಟಿ ಕೃತಿಯಾಗಿ ಮಾಡಿದ್ದಾರೆ. ಕಾರ್ಮಿಕರ ಕೇರಿಯ ದಾರುಣ ಬದುಕಿನ ಚಿತ್ರಣವಂತೂ ಮನ ಕಲುಕುವ ಹಾಗೆ ಮೂಡಿ ಬಂದಿದೆ. ಆಧುನಿಕ ಕಾಲದ ವಸಾಹತುಶಾಹಿ ವರ್ಗದವರ ದಬ್ಬಾಳಿಕೆಯನ್ನು ತೋರಿಸುವ ಈ ಕಾದಂಬರಿ ಬಡತನದಲ್ಲಿ ಬಳಲುತ್ತಿರುವ ಜನರು ಆಧುನಿಕತೆಗೆ ವಾಲದೆ ಇರುವುದು ಮುಖ್ಯಕಾರಣ ಎಂದು ಹೇಳುತ್ತದೆ. ಇಂದಿನ ಕಾಲದಲ್ಲಿ ಬದುಕಬೇಕಾದರೆ ಶಿಕ್ಷಣದ ಅವಶ್ಯಕತೆಯನ್ನು ತಿಳಿಸಲು ಹೊರಟಿದೆ. 'ಜ್ವಾಲಾಮುಖಿಯ ಮೇಲೆ' ಒಂದು ಪಾತ್ರ ಪ್ರಧಾನ ಕಾದಂಬರಿ. ಪಾತ್ರಗಳೇ ಇಲ್ಲಿಯ ಘಟನೆ ಮತ್ತು ಕ್ರಿಯೆಗಳಿಗೆ ಚಾಲಕ ಶಕ್ತಿಯಾಗುವಷ್ಟು ಪ್ರಧಾನ್ಯ ಪಡೆದಿವೆ.

ಮುಕ್ತಿ

ಆಧುನಿಕ ಸಾಹಿತ್ಯದಲ್ಲಿ ನವ್ಯ ಕಾದಂಬರಿಕಾರರಾಗಿ ಕಾಣಿಸಿಕೊಂಡ ಶಾಂತಿನಾಥ ದೇಸಾಯಿಯವರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ಕೊಡುವ ಮೂಲಕ ಜನಪ್ರಿಯತೆ ಗಳಿಸಿದವರು. ೧೯೬೧ ರಲ್ಲಿ ಪ್ರಕಟವಾದ ಇವರ

ಮೊದಲ ಕಾದಂಬರಿ 'ಮುಕ್ತಿ'ಇದು ಗೌರೀಶನ ಆತ್ಮ ಕಥೆಯನ್ನೊಳಗೊಂಡಿದ್ದು ಇತರೆ ಹಿಂದಿ, ಮರಾಠಿ, ತೆಲುಗು, ಉರ್ದು, ಬಂಗಾಳಿ, ಆಸಾಮಿ ಭಾಷೆಗಳಲ್ಲಿ ಭಾಷಾಂತರಗೊಂಡ ವಿಶಿಷ್ಟ ಕಾದಂಬರಿಯಾಗಿದೆ. ಈ ಕಾದಂಬರಿ ಬದುಕಿನಲ್ಲಿ ಬರುವ ಕೆಲವು ವಿಶೇಷತೆಗಳು ಎದುರಿಸುವ ಮತ್ತು ಅವುಗಳಿಂದ ಮುಕ್ತಿ ಪಡೆಯುವ ಬಗೆಗೆ ತಿಳಿಸುವ ಪಾತ್ರಗಳ ಚಿತ್ರಣವನ್ನು ಒಳಗೊಂಡಿದೆ. ನವ್ಯರ ಪ್ರಮುಖ ಲಕ್ಷಣಗಳಾದ ಆತ್ಮಶೋಧನೆ, ಮುಕ್ತ, ಭಾಷೆ, ಕಾಮ, ಸಾವು, ಬದುಕಿನ ಹುಡುಕಾಟ, ಒಂಟಿತನ, ದ್ವಂದ್ವ ಈ ಮುಂತಾದವುಗಳು ಇಲ್ಲಿ ಕಾಣಿಸಿಕೊಂಡಿವೆ.

ಕಾದಂಬರಿಯಲ್ಲಿ 'ಮುಕ್ತಿ' ಎನ್ನುವುದು ಪ್ರಾಣಪಕ್ಷಿ ಹಾರಿದ ಮೇಲೆ ಸಿಗುವಂತಹುದಲ್ಲ ಪ್ರಾಣ ಇದ್ದಾಗಲೇ ಕಾಣುವಂತಹದ್ದು. ಅಧ್ಯಾತ್ಮದ ಹಿನ್ನೆಲೆಯಲ್ಲಿ ಬಳಸಿಕೊಂಡ ಈ ಪದಕ್ಕೆ ದೇಸಾಯಿಯವರು ಹೊಸ ಅರ್ಥ ಹೊರಡಿಸಿ ಬದುಕಿನ ಸ್ಪರ್ಶ ಕೊಟ್ಟಿದ್ದಾರೆ. ಕಾದಂಬರಿಯಲ್ಲಿ ಗೌರೀಶ, ಕಾಮಿನಿ, ರೋಹಿಣಿ, ಶಶಿಕಲಾ, ಮೇರಿ ಬರುವ ಪಾತ್ರಗಳಾಗಿದ್ದು ಇವು ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳಲ್ಲಿ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿವೆ. ಕಾಲಕ್ಕೆ ತಕ್ಕಂತೆ ಮನುಷ್ಯನ ಜೊತೆಗೆ ಸಾಹಿತ್ಯವು ಬದಲಾಗುತ್ತದೆ ಎಂಬುದಕ್ಕೆ ಈ 'ಮುಕ್ತಿ' ಕಾದಂಬರಿ ಉತ್ತಮ ಉದಾಹರಣೆ.

ಒಬ್ಬ ವ್ಯಕ್ತಿ ಜೀವನದಲ್ಲಿ ಬರುವ ಸಮಸ್ಯೆಗಳು ತನ್ನದೆ ಆದ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಇನ್ನೊಬ್ಬರ ಆದರ್ಶದ ಮಾತುಗಳು ಉಪಯೋಗಕ್ಕೆ ಬಾರದೇ ಹೋಗುತ್ತವೆ. ತನ್ನ ಬದುಕಿಗೆ ತಾನೇ ಹೊಣೆಯಾಗಿರುತ್ತಾನೆ. ಅಂಥ ಆದರ್ಶಗಳನ್ನು ಓದಿಕೊಂಡು ಅವುಗಳಿಗೆ ತನ್ನನ್ನೆ ತಾನೆ ಅರ್ಪಿಸಿಕೊಂಡ ಶ್ರೀಕಾಂತ ಒಂದು ಉತ್ಕಟ ಕ್ಷಣದಲ್ಲಿ ತನ್ನ ಬದುಕು ಒಪ್ಪಿಕೊಂಡ ಆದರ್ಶಕ್ಕೂ ಅಗಲವಾದ ಕಂದರ ಬಂದು ನಿಂತಾಗ ತನ್ನ ಬದುಕಿನ ವ್ಯರ್ಥತೆಯನ್ನು ಮನಗಾಣುತ್ತಾನೆ. ಕ್ಷಯರೋಗದಿಂದ ಸಾವು ಸಮೀಪಿಸುತ್ತಿರುವಾಗಲೇ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಮೂಲಕ ತನ್ನ ಜೀವನಕ್ಕೆ ಕೊನೆ ಪರದೆಯನ್ನು ಎಳೆದು ಬಿಡುತ್ತಾನೆ. ಸ್ನೇಹಿತನನ್ನು ಕಳೆದುಕೊಂಡ ದುಃಖ ಗೌರೀಶನಿಗೆ ಒಂದೆಡೆಯಾದರೆ ಕಾಮಿನಿಯ ಪ್ರೀತಿ ಈತನಿಗೆ ಸಿಗಲಾರದೆ ಸೋಲು ಕಂಡಾಗ ತನ್ನ ಸ್ವಂತ ಮೌಲ್ಯಗಳನ್ನು ಆರಿಸಿಕೊಳ್ಳಬೇಕೆಂಬ ಎಚ್ಚರ ಘಂಟೆ ಅವನಲ್ಲಿ ಬಾರಿಸುತ್ತದೆ. ಈ ಭೂತಕಾಲದ ಅನುಭವದಿಂದ ದೂರ ಹೋಗಿ ಮುಂಬಯಿಯಂಥ ಜನಾರಣ್ಯದಲ್ಲಿ ಹೊಸ ಬದುಕಿಗಾಗಿ ಹಂಬಲಿಸುತ್ತಾನೆ. ಮುಂದೆ ಡಾಲಿಯ ಸಂಗಮಾಡಿ ತನ್ನ ಜೀವನಕ್ಕೆ ಹೊಸ ಅರ್ಥವನ್ನು ಕಂಡುಕೊಳ್ಳಲು ಮುಂದಾಗುತ್ತಾನೆ.

ಕಾಮಿನಿಯ ಪ್ರೀತಿ ಸಿಗಲಾರದೆ ಹೊದ ಸಂದರ್ಭದಲ್ಲಿ ಸ್ತ್ರೀಯ ಸಹಾನುಭೂತಿ ಮತ್ತು ಹಂಬಲ ಕಾತರತೆಗೆ ಉತ್ತರ ರೂಪವಾಗಿ ಬಂದವಳೇ ಡಾಲಿ. ಇವಳು ಸಿಕ್ಕಿದ್ದರಿಂದಲೇ ಗೌರೀಶನಿಗೆ ತಾನು ಕಳೆದುಕೊಂಡ ಪ್ರೀತಿ ಮರಳಿ ಪಡೆದಂತಾಯಿತು.

ಇಂತಹ ಪ್ರೀತಿ ಸಂಬಂಧ ಮುಂಬೈ ಅಲ್ಲದೇ ಹಳ್ಳಿಯಲ್ಲಿ ಸಿಗಲು ಸಾಧ್ಯವೇ ಎಂದು ಅಂದುಕೊಳ್ಳುತ್ತಾನೆ. ಇವನ ನಿಜವಾದ ಪ್ರೀತಿ ಡಾಲಿಯ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. "ಇವಳ ವಿಶಿಷ್ಟ ಚೈತನ್ಯೆ ತನ್ನನ್ನು ಶೋಧಿಸಿ ತಂದೀತು"[3] ಎಂದು ಹೇಳುವುದರ ಮುಖಾಂತರ ಪೂರ್ಣ ರೂಪದ ಅಸ್ತಿತ್ವವಾದಿ ಪಾತ್ರವಾಗಿ ಬೆಳೆದು ನಿಲ್ಲುತ್ತಾನೆ. ತನ್ನ ಬದುಕಿನ ಅರ್ಥವನ್ನು ಪಡೆದ ನಂತರ ಡಾಲಿಯನ್ನು ತನ್ನ ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ.

ಮುಕ್ತಿ ಕಾದಂಬರಿಯಲ್ಲಿ ಬರುವ ಪಾತ್ರಗಳು ತಮ್ಮದೇ ಆದ ರೀತಿಯ ಬದುಕನ್ನು ಸೃಷ್ಟಿಸಿಕೊಳ್ಳಲು ಹೋಗಿ ಕೊನೆಗೆ ಸಂಘರ್ಷದ ಹಾದಿಯಲ್ಲಿ ನಡೆದಿದ್ದನ್ನು ಕಾದಂಬರಿ ಎತ್ತಿ ತೋರಿಸಿದೆ. ಇಲ್ಲಿ ಬರುವ ಗೌರೀಶನ ತಂದೆ ತಾಯಿ ಪಾತ್ರವನ್ನೆ ತೆಗೆದುಕೊಂಡಾಗ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಪಟ್ಟಣಕ್ಕೆ ಕಳಿಸುವ ತಂದೆ ತಾಯಿ ಒಂದೆಡೆಯಾದರೆ ಮಗ ತನ್ನ ಉದ್ದೇಶವನ್ನು ಮರೆತು ಪ್ರೀತಿಯಂಬ ಮಾಯದ ಹಿಂದೆ ಹೋಗುವುದು ಇಲ್ಲಿ ಸಂಘರ್ಷಕ್ಕೆ ಎಡೆಮಾಡಿ ಕೊಟ್ಟಿದೆ. ಈ ಕಾರಣದಿಂದಲೇ ಗೌರೀಶ ಹಳ್ಳಿಬಿಟ್ಟು ಮುಂಬೈಗೆ ಸೇರಿಕೊಂಡದ್ದು ಕಾದಂಬರಿಯಲ್ಲಿ ಇತರೆ ಪಾತ್ರದಂತೆ ಕಾಣಿಸಿಕೊಳ್ಳುವ ರೋಹಿಣಿ, ಶಶಿಕಲಾ, ಮೇರಿ ಪಾತ್ರಗಳು ಕಾಲ್ಪನಿಕತೆಯಂತೆ ಕಂಡರು ಕಾದಂಬರಿಯಲ್ಲಿ ಜೀವಂತವಾಗಿ ಉಳಿದುಕೊಂಡಿವೆ. ರೋಹಿಣಿ, ಶ್ರೀಕಾಂತನನ್ನು, ಶಶಿಕಲಾ ಗೌರೀಶನನ್ನು ಪ್ರೀತಿಸಿ ಅದು ಸಿಗದೇ ಹೋದಾಗ ಅವರ ಪಾತ್ರ ಕಾದಂಬರಿಯಲ್ಲಿ ಮೂಖವಾಗಿದೆ. ಇದರ ಮಧ್ಯ ಶ್ರೀಕಾಂತನಿಗೆ ಮೇರಿ ಅನಿವಾರ್ಯವಾಗಿರುವುದು ಬದುಕಿನ ಸತ್ಯವೊಂದರ ಪರಿಚಯವಾದಂತಾಗುತ್ತದೆ.

ಕಾದಂಬರಿಕಾರರು ಗೌರೀಶನ ಕಥೆ ಅವನ ಭೂತಕ್ಕೆ ಮಾತ್ರ ಸೀಮಿತವಾಗಿಲ್ಲ ತಾನು ದೊರಕಿಸುವ ಹೊಸ ಮೌಲ್ಯಗಳ ಬೆಳಕಿನಲ್ಲಿ ತನ್ನ ಭವಿಷ್ಯವನ್ನು ರೂಪಿಸ ಬಯಸುವ ಅವನಿಗೆ ಗತ ಜೀವನವನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಮಹತ್ವದ್ದೊ ಅಷ್ಟೇ ಮಹತ್ವದ್ದು ಡಾಲಿಯೊಡನಿಂದ ತನ್ನ ಸಂಬಂಧದ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವುದು. ಕಾದಂಬರಿಯಲ್ಲಿ ಈ ಕ್ರಿಯೆ ವರ್ತಮಾನದ ಪಾತಳಿಯಲ್ಲಿ ನಡೆಯುತ್ತದೆ. 'ಗೌರೀಶ ಬದುಕಿನ ಹುಡುಕಾಟದಲ್ಲಿ ಅನೇಕ ಪಾತ್ರಗಳೊಂದಿಗೆ ಸ್ಪಂದಿಸುವ ಮುಖಾಂತರ ಕಾದಂಬರಿಯಲ್ಲಿ ತನ್ನನ್ನು ಗುರ್ತಿಸಿಕೊಂಡಿದ್ದಾನೆ. ಗೌರೀಶನ ಆತ್ಮಕಥೆ ನಿಜವಾಗಿಯೂ ಆತ್ಮಕಥೆಯಾಗಿದೆ'.[4] ಮನುಷ್ಯ ಸತ್ತಾಗ ಪಡೆಯುವುದು ಮುಕ್ತಿ ಅಲ್ಲ ಇದ್ದಾಗಲೇ ಏನಾದರು ಸಾಧಿಸಿ ಪಡೆಯುತ್ತಾನಲ್ಲಾ ಅದೇ ಮುಕ್ತಿ. ಈ ಮಾತನ್ನು ಗೌರೀಶ ಶಿಕ್ಷಣ ಪಡೆಯುವುದರ ಮೂಲಕ ಆತಮಾಡಿದ ಸಾಧನೆ ಇಲ್ಲಿ ಮುಕ್ತಿಯಾಗಿದೆ. ಅಂದರೆ ತಾನು ಯಾರು? ಎಂಥವ? ಎಂಬುದನ್ನು ವಸ್ತು ನಿಷ್ಠವಾಗಿ ತಿಳಿಯುವ ಪ್ರಯತ್ನವಾಗಿದೆ.

ಸಂಸ್ಕಾರ

ಯು. ಆರ್. ಅನಂತಮೂರ್ತಿಯವರ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾದ ಸಂಸ್ಕಾರ ಕಾದಂಬರಿ (೧೯೬೫) ಮಲೆನಾಡಿನ ದುರ್ವಾಸಪುರ ಎನ್ನುವ ಅಗ್ರಹಾರದ ಬ್ರಾಹ್ಮಣರ ನಂಬಿಕೆ, ಮೌಢ್ಯ, ಸಂಪ್ರದಾಯಶೀಲತೆಗಳ ಸುತ್ತ ಹೆಣೆದ ಕಥೆಯಾಗಿದೆ. ಈ ಕಾದಂಬರಿಯಲ್ಲಿ ವೇದಾಂತ ಶಿಖಾಮಣಿಯಾದ ಪ್ರಾಣೇಶಾಚಾರ್ಯ ಕೇಂದ್ರ ಬಿಂದುವಾಗಿದ್ದಾರೆ. ಒಂದು ಅಗ್ರಹಾರದ ಮಿತಿಗೆ ಒಳಪಟ್ಟ ಪ್ರಾಣೇಶಾಚಾರ್ಯರು ತಮ್ಮ ಜೀವನದುದ್ದಕ್ಕೂ ಕಷ್ಟ ನಷ್ಟ, ನೋವು ನಲಿವು, ಪಾಪ ಪುಣ್ಯ ಎಲ್ಲವನ್ನು ಅನುಭವಿಸಿ ಕೊನೆಗೆ ಸಾಮಾನ್ಯ ಜೀವನ ನಡೆಸಬೇಕೆಂಬುವಷ್ಟರಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ.

ಮೊದಲನೆ ಹಂತದಲ್ಲಿ ಬ್ರಾಹ್ಮಣತ್ವದ ಪ್ರತೀಕರಾದ ಪ್ರಾಣೇಶಾಚಾರ್ಯರು ಒಂದೆಡೆಯಾದರೆ ಬ್ರಾಹ್ಮಣತ್ವವನ್ನು ತೇಜಿಸಿ ಕೀಳ ಜಾತಿಯವಳೊಂದಿಗೆ ಸಂಬಂಧ ಬೆಳೆಸಿಕೊಂಡು ಸತ್ತು ಬಿದ್ದಿರುವ ನಾರಾಣಪ್ಪ ಇನ್ನೊಂದೆಡೆ. ಕಾದಂಬರಿಯಲ್ಲಿ ನಾರಾಣಪ್ಪ ನಿಜವಾಗಿ ಸತ್ತಿದ್ದರು ಕೂಡಾ ಕಾದಂಬರಿ ವಸ್ತು ವಿಷಯಕ್ಕೆ ಜೀವಂತಿಕೆ ಕೂಡುವಲ್ಲಿ ನಾರಾಣಪ್ಪ ಪಾತ್ರ ಯಶಸ್ವಿಯಾಗಿ ಮೂಡಿ ಬಂದಿದೆ. ಕಾಶಿಪಂಡಿತನಾದ ಪ್ರಾಣೇಶಾಚಾರ್ಯರ ಸಾತ್ವಿಕ ಶಕ್ತಿಗೂ ನಾರಾಣಪ್ಪನ ತಾಮಸ ಶಕ್ತಿಗೂ ಘರ್ಷಣೆ ನಡೆಯುವುದು ಕಾದಂಬರಿಯ ವಸ್ತುವಾಗಿದೆ. ಸತ್ತು ಬಿದ್ದಿರುವ ನಾರಾಣಪ್ಪ ಸಂಸ್ಕಾರದ ಪ್ರಶ್ನೆಯೇ ಕಾದಂಬರಿಯನ್ನು ಮುನ್ನಡಿಸಿಕೊಂಡು ಹೋಗುತ್ತದೆ. ಈ ಸಂಸ್ಕಾರದ ಪ್ರಶ್ನೆಯೇ ಇಡೀ ಅಗ್ರಹಾರವನ್ನು ವ್ಯಾಪಿಸುತ್ತದೆ. ಬ್ರಾಹ್ಮಣತ್ವವನ್ನು ತೊರೆದು ಶುದ್ಧ ತಾಮಸಿಯಾಗಿ ಶೂದ್ರ ಹೆಂಗಸನ್ನು ಕೂಡಿ, ಮುಸಲ್ಮಾನರ ಸಹವಾಸವನ್ನು ಮಾಡಿ ಮೀನು, ಮಾಂಸ ತಿಂದು ಮದ್ಯ ಕುಡಿದು ಸತ್ತ ನಾರಣಪ್ಪನ ಶವ ಸಂಸ್ಕಾರವನ್ನು ಮಡಿವಂತ ಬ್ರಾಹ್ಮಣರು ಮಾಡಬಹುದೇ? ಎಂಬ ಪ್ರಶ್ನೆ ಇಡೀ ಕಾದಂಬರಿಯ ತುಂಬ ಪ್ರತಿಧ್ವನಿಸುತ್ತದೆ.

ನಾರಣಪ್ಪನನ್ನು ದಾರಿಗೆ ತರುವಲ್ಲಿ ವಿಫಲರಾದ ಪ್ರಾಣೇಶಾಚಾರ್ಯರು ವೈದಿಕ ಪರಂಪರೆಯ ಋಷಿಯಂತೆ ಸಾತ್ವಿಕವಾಗಿ ಬಾಳಿದವರು. ಪುರಾಣ, ಪ್ರವಚನ, ಹೆಂಡತಿಯ ಶುಶ್ರೂಷೆಗಳಲ್ಲಿ ಕಾಲಕ್ಷೇಪ ಮಾಡಿದ ಅವರಿಗೆ ಜೀವನವೆಂದರೆ ಬರೀ ವೇದಾಂತದ ಪಾಠಶಾಲೆ ಆದರೆ ನಾರಣಪ್ಪನಿಗೆ ಅದು ಪ್ರಯೋಗ ಭೂಮಿಯಾಗುತ್ತದೆ.

ಈ ರೀತಿ ಜೀವನ ಕಳೆದ ನಾರಣಪ್ಪನ ಶವ ಸಂಸ್ಕಾರಕ್ಕೆ ಅಗ್ರಹಾರದ ಜನರು ಮುಂದೆ ಬರದ ಕಾರಣ ಪ್ರಾಣೇಶಾಚಾರ್ಯರು ಇತನ ಸಂಸ್ಕಾರಕ್ಕೆ ಮುಂದಾಗುತ್ತಾರೆ. ಇದೆನೋ ನಾರಣಪ್ಪನ ಮೇಲಿದ್ದ ಪ್ರೀತಿಯೋ? ಇಲ್ಲಾ ಚಂದ್ರಿಯ ಮೇಲಿದ್ದ ಮೊಹವೋ ಕಾಣೆ? ಮುಂದೆ ನಿಂತು ಸಂಸ್ಕಾರ ಮಾಡಲು ಬಂದ ಪ್ರಾಣೇಶಾಚಾರ್ಯರು ಅಂದೇ ಚಂದ್ರಿಯೊಂದಿಗೆ ಊರು ಬಿಟ್ಟು ಹೋಗಿರುವುದು ಅಗ್ರಹಾರದ ಜನರಿಗೆ ನಂಬಲಾರದ ಸತ್ಯವಾಗುತ್ತದೆ. ಜಾತಿಬಿಟ್ಟು ಕೆಳಜಾತಿಯವಳ

ಸಂಬಂಧ ಮಾಡಿದ ನಾರಣಪ್ಪನನ್ನು ನೋಡುವ ದೃಷ್ಟಿಕೊನ ಒಂದೆಡೆಯಾದರೆ ಬ್ರಾಹ್ಮಣತ್ವವನ್ನು ಬಿಡದೆ ಅಗ್ರಹಾರದ ವೇದಾಂತರಾಗಿದ್ದ ಪ್ರಾಣೇಶಾಚಾರ್ಯರು ಅದೇ ಕೆಳಜಾತಿ ಹೆಣ್ಣಿನೊಂದಿಗೆ ಊರುಬಿಟ್ಟಾಗ ಅವರನ್ನು ನೋಡುವ ದೃಷ್ಟಿಕೊನ ಯಾವುದು ಎಂಬುದನ್ನು ಇಲ್ಲಿ ಹುಟ್ಟುವ ಇನ್ನೊಂದು ಪ್ರಶ್ನೆಯಾಗಿದೆ.

ಕಾದಂಬರಿ ಎರಡನೆ ಹಂತದಲ್ಲಿ ನಿಂತಾಗ ಚಂಚಲ ಮನಸ್ಸಿನಿಂದಾ ಚಂದ್ರಿಯ ಸಮಾಗಮಕ್ಕೆ ಮುಂದಾದ ಪ್ರಾಣೇಶಾಚಾರ್ಯರು ಒಂದು ಕ್ಷಣ ಅವರು ಈ ಲೋಕವನ್ನೆ ಬಿಟ್ಟು ಹೊರ ಜಗತ್ತಿನಲ್ಲಿ ತೇಲಾಡುವ ಅವರ ಆಸೆ ಇತ್ತ ಚಂದ್ರಿ ಗಂಡನನ್ನು ಕಳೆದುಕೊಂಡ ದುಃಖ ಒಂದೆಡೆಯಾದರೆ ಪ್ರಾಣೇಶಾಚಾರ್ಯರಿಂದ ತನ್ನ ಬಯಕೆಯನ್ನು ಇಡೇರಿಸಿ ಕೊಳ್ಳಬಹುದೆಂಬ ಆಸೆ ಇನ್ನೊಂದೆಡೆ ಆದರೆ ಲೇಖಕ ಕಾದಂಬರಿಯಲ್ಲಿ ಈ ಚಂದ್ರಿಯ ಆಸೆಗೆ ತನ್ನಿರ್‌ಯರಚಿದ್ದಾರೆ. ಇದು ಪ್ರಾಣೇಶಾಚಾರ್ಯರ ಶ್ರೇಷ್ಠತೆಯನ್ನು ತೋರಿಸಲು ಲೇಖಕರ ಒಂದು ಹೊಸ ಸೃಷ್ಟಿಯಂತಲೂ ನಾವು ಕರೆಯಬಹುದು.

ಕೊನೆಯ ಭಾಗವಾಗಿ ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರ ಹೋರಾಟ ಮುಂದುವರೆಯುತ್ತದೆ. ಭಯ ಸೋಲಿನ ಅರಿವು ಆತ್ಮವಂಚನೆಯ ಅಳುಕು ಇವೆಲ್ಲವಗಳೊಡನೆ ಸೆಣಸಿ ಬಾಹ್ಯ ಜಗತ್ತಿನ ಸಂಪರ್ಕದಲ್ಲಿ ನಿಜವಾದ ಸಂಸ್ಕಾರ ಎಂಬುವುದು ಅರಿವಾಗುತ್ತದೆ.

ಯಾವೊಂದು ಪಾಪ–ಪುಣ್ಯ, ನ್ಯಾಯ–ಅನ್ಯಾಯಗಳ, ವಿವೇಚನೆಯಿಲ್ಲದೆ ಆತ್ಮಸುಖ ಮುಖ್ಯವೆನ್ನುವುದು ನಾರಣಪ್ಪನ ಸಿದ್ಧಾಂತ. ನಾಸ್ತಿಕನಾದರೂ ಇಹದ ಬದುಕಿನ ಬಗ್ಗೆ ಗೌರವಾದರಗಳುಳ್ಳ ವ್ಯಕ್ತಿ ನಾರಣಪ್ಪನಾದರೆ ಪರರ ಸುಖಕ್ಕಾಗಿ ಇಹದ ಬದುಕೊಂದು ಗುರಿ ಅದನ್ನೊಂದು ನಂಬಿಕೆ, ವೃತ ಎಂದು ನಿಯಮದಂತೆ ಪಾಲಿಸುವ ಪ್ರಾಣೇಶಾಚಾರ್ಯರು ಜಿಡ್ಡುಗಟ್ಟಿದ, ಬದ್ಧತೆಗೊಳಗಾದ ಬಾಳಿನ ಪ್ರತೀಕವಾಗುತ್ತಾರೆ. ನಾರಣಪ್ಪನ ಸಂಸ್ಕಾರದ ಪ್ರಶ್ನೆಗೆ ಧರ್ಮಗ್ರಂಥಗಳಲ್ಲಿ ಪರಿಹಾರ ಕಾಣದೆ ಮಾರುತಿಯ ಪ್ರಸಾದ ಸಿಗದೆ ನಾರಣಪ್ಪ ಸುಖ ಪಡೆದ ಚಂದ್ರಿಯಲ್ಲಿಯೇ ಆಚಾರ್ಯರು ಪಾಲು ಪಡೆಯುವಂತಾದದ್ದು. ನಂತರ ಆ ಸುಖಕ್ಕಾಗಿ ತಹತಹಿಸುವುದು ಬದುಕಿನ ಅನಿವಾರ್ಯತೆನ್ನು ಸೂಚಿಸುತ್ತದೆ. ಚಂದ್ರಿಯನ್ನು ಕೂಡಿದ ನಂತರ ನಿಜವಾಗಿಯೂ ಪ್ರಾಣೇಶಾಚಾರ್ಯರ ವ್ಯಕ್ತಿತ್ವದ ಆರಂಭ. ಅವರ ದ್ವಂದ್ವಗಳು, ಸಂಘರ್ಷಗಳು ಭಾರತೀಯ ಸಂಸ್ಕೃತಿಯಲ್ಲಿ ವಿರುದ್ಧ ಮನಸ್ಸಿನ ಪ್ರಕೃತಿಗಳು ಎದುರಿಸುವ ಸ್ಥಿತಿ. ಪ್ರಾಣೇಶಾಚಾರ್ಯರು ಬದುಕಿನ ನೈಜ ಅನುಭವಕ್ಕೆ ಅಲೆದಾಡುವುದು ಬದುಕನ್ನು ತೆರೆದ ಕಣ್ಣಿನಿಂದ ನೋಡುವುದು, ಪ್ರೇತತ್ವ, ರಾಕ್ಷಸತ್ವ ಕಳೆದು ಅವನೂ ಒಬ್ಬ 'ಮನುಷ್ಯ'ನಾಗುತ್ತಾನೆ.

ಕೇವಲ ಬಂಧನವಾಗಿದ್ದ ಮೃತಸಂಸ್ಕಾರ ಮಾಯವಾಗಿ ಜೀವಂತವಾದ ಹೊಸ ಸಂಸ್ಕಾರ ದೊರೆಯುತ್ತದೆ. ಈ ಕಾದಂಬರಿ ಮನುಷ್ಯ ಜೀವನದಲ್ಲಿ ಏನೆಲ್ಲಾ

ಸಾಧಿಸಿದರು ಆತ ಕೊನೆಗೆ ಪಡೆದುಕೊಳ್ಳುವ ಸಂಸ್ಕಾರ ಮುಖ್ಯವಾಗುತ್ತದೆ ಇಲ್ಲಿ ಬರುವ ಪ್ರಾಣೇಶಾಚಾರ್ಯ ಬ್ರಾಹ್ಮಣರಲ್ಲೇ ಶ್ರೇಷ್ಠ ವ್ಯಕ್ತಿಯಾದರು ಆತನ ನಡವಳಿಕೆಯಿಂದ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತಾನೆ. ಆಧುನಿಕ ಸಮಾಜದಲ್ಲಿ ಶಿಕ್ಷಣ ಜೊತೆಗೆ ಸಂಸ್ಕಾರವು ಯಾವ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಈ ಕಾದಂಬರಿ ತಿಳಿಸುತ್ತದೆ. ಕೊನೆಗೆ ವಾಸ್ತವಿಕ ಸಾಮಾನ್ಯ ಮನುಷ್ಯನಾಗಿ ಬದುಕಬೇಕೆಂದು ನಿರ್ಧರಿಸುವಲ್ಲಿ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಒಡಲಾಳ

ದೇವನೂರ ಮಹಾದೇವರವರು ದಲಿತರ ದಾರುಣ ಬದುಕಿನ ಚಿತ್ರಣವನ್ನು ಕಥೆ, ಕಾದಂಬರಿಗಳ ಮೂಲಕ ಅಭಿವ್ಯಕ್ತಿಸಿದವರು ಇವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಒಂದು ಹೊಸ ಆಯಾಮವನ್ನೆ ಹಾಕಿದ್ದಾರೆ. ಇವರು ಬರೆದಿರುವ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾದ 'ಒಡಲಾಳ'ವನ್ನು ತೆಗೆದುಕೊಂಡಾಗ ಈ ಕಾದಂಬರಿ ಬಡತನ, ಹಸಿವು ಸಂಕೇತವನ್ನು ಇಟ್ಟುಕೊಂಡು ದಲಿತರ ಚಿತ್ರಣವನ್ನು ತೊರಿಸುತ್ತದೆ. ದಲಿತ ದಲಿತೇತರ ಸಂಬಂಧಗಳ ಸಾಂಕೇತಿಕತೆಯನ್ನು ಮೀರಿದ ಗಾಢತೆಯನ್ನು ಹೊಂದಿದೆಯಾದರೂ ಅವು ಪ್ರತ್ಯೇಕತೆಯ ಮಿತಿಗಳನ್ನು ದಾಟುವುದಿಲ್ಲ. ಮಹಾದೇವರು ಒಡಲಾಳದ ಭಾಷಾಪ್ರಯೋಗ, ಕಥನಕ್ರಮಗಳಿಗೆ ಅಪೂರ್ವಶೋಭೆ ಉಂಟಾಗುವ ರೀತಿಯಲ್ಲಿ ಬರೆದಿದ್ದಾರೆ.

ಒಡಲಾಳ ಕಾದಂಬರಿ ದಲಿತ ಪರಿವಾರದ ಎರಡು ಅವಸ್ಥೆಯನ್ನು ತೋರಿಸುತ್ತದೆ. ಈ ಅವಸ್ಥೆಗಳ ಸ್ವರೂಪ ಮತ್ತು ಅಂತರಗಳಲ್ಲಿ ಕಾದಂಬರಿಯ ಉಗಮವಿದೆ. ಈ ಕಥೆ ನಡೆಯುವುದು ಮೂರು ಹಂತಗಳಲ್ಲಿ ಮುದುಕಿ ಸಾಕವ್ವನ ಹುಂಜ ತಪ್ಪಿಸಿಕೊಂಡು ಹೋಗಿದೆ. ಇದು ಆಕೆಗೆ ಸಾವು ಬದುಕಿನ ಪ್ರಶ್ನೆಯಾದರೂ ಬೇರೆಯವರಿಗೆ ಆಕೆ ಹುಡುಕುವುದು ಐಲಾಟದಂತೆ ಕಾಣುತ್ತದೆ. ದೇವರಿಗೆ ಬಿಟ್ಟ ಕೋಳಿ ನಿಜಕ್ಕೂ ಕಳೆದು ಹೋದರೆ ಅದು ಆಕೆಗಾದ ನಷ್ಟದಂತೆಯೇ. ದೇವರ ನಿರ್ಲಕ್ಷ್ಯವನ್ನು ತೋರುತ್ತದೆ. ದೇವರ ಬಗ್ಗೆ ಧೈರ್ಯವಾಗಿ ಮಾತನಾಡಬಲ್ಲ ಆಕೆ ಯಮನನ್ನು ಪ್ರಶ್ನಿಸಿ ಹಿಮ್ಮೆಟ್ಟಿಸಬಲ್ಲ ಆಕೆಗೆ ಈ ಜೀವನವೇ ಎಲ್ಲಾ ಸಾವು, ನರಕಕ್ಕಿಂತ ಕೆಟ್ಟದೆಂದು ಗೊತ್ತು. ಆಕೆಯ ದಿಟ್ಟತನ ಪೊಲೀಸುರು ಕಳ್ಳ ಮಾಲಿಗಾಗಿ ಹುಡುಕಿಕೊಂಡು ಬಂದಾಗ ಮಾಯವಾಗುತ್ತದೆ. ಈ ವಾಸ್ತವದ ಘೋರ ಸತ್ಯದೆದುರು ದೇವರು, ಯಮ ಕೇವಲ ಊಹೆಗಳಂತಾಗುತ್ತಾರೆ.

ಸಾಕವ್ವ ಒಂದು ಹಟ್ಟಿಯ ಯಜಮಾನಿಯಾಗಿ ಕಳೆದುಕೊಂಡ ಹುಂಜವನ್ನು ಕೇರಿಯಲ್ಲಿ ಹುಡುಕುತ್ತಿದ್ದರೆ ಇತ್ತ ಅವಳ ಮಕ್ಕಳು ಏನೂ ಆಗಿಲ್ಲವೆಂಬಂತೆ ಸುಮ್ಮನಿದ್ದಾರೆ. ಇದು ಸಾಕವ್ವನಿಗೆ ದಿಗಿಲುಗೊಳಿಸಿತು. ಇದಕ್ಕೆ ಕಾರಣ ಮಕ್ಕಳ ಬಡತನ, ದಿನ ಕೂಲಿನಾಲಿ ಮಾಡಿ ಬಂದರೆ ಮಾತ್ರ ಸಂಜೆ ಒಲೆ ಉರಿಯುತ್ತದೆ. ಇಲ್ಲದಿದ್ದರೆ ಇಲ್ಲ ಹಾಗಾಗಿ ಬಡತನ ಹಸಿವು ಅವರನ್ನು ಕಂಗೆಡಿಸಿದೆ. ಬಡತನದಿಂದ ಕಾಳಣ್ಣ

ಹಟ್ಟಿಯ ದೊಡ್ಡ ಮಗನಾದರೂ ಯಜಮಾನನಾಗಿಲ್ಲ. ಈ ಬಡತನವನ್ನು ನೀಗಿಕೊಳ್ಳಲು ಕಾಳಣ್ಣ ಯತ್ತಪ್ಪನವರ ಗೋಡಾವನದಲ್ಲಿದ್ದ ಕಳ್ಳೆಕಾಯಿ ಮೂಟೆಯನ್ನು ಕದ್ದು ತಂದ ಮನೆ ಮಂದಿಯೆಲ್ಲ ಕುಳಿತು ತಿಂದು ಮುಗಿಸುತ್ತಾರೆ. ಇಲ್ಲಿ ಕಷ್ಟದಲ್ಲಿ ಭಾಗಿಯಾಗದಿರುವ ಜನ ಆತ ತಂದ ಕಡಲೆಕಾಯಿ ತಿನ್ನಲು ಭಾಗಿಯಾಗುವರು. ಒಂದು ರೀತಿಯ ಹಸಿವೆಯ ಬೇನೆಯಿಂದ ಬೆಂದವರು ಎಂಬುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹಸಿವೆಯ ತೃಪ್ತಿ ಒಂದೆಡೆಯಾದರೆ ಇನ್ನೊಂದೆಡೆ ಕಳ್ಳೆಕಾಯಿ ಕಳ್ಳನನ್ನು ಹುಡುಕುತ್ತಾ ಬರುವ ಪೋಲೀಸರು ಗೌಡರಿಗೆ ಇದು ಕಳ್ಳತನ ಎನಿಸಿದರೂ ಕಾಳಣ್ಣನನಿಗೆ ಇದು ಕಳ್ಳತನ ಎನಿಸದು. ಕಾರಣ ಅವರ ಬಡತನ, ಹಸಿವು ಇಂತಹ ಒಂದು ಮಟ್ಟಕ್ಕೆ ತಂದು ಅವನನ್ನು ನಿಲ್ಲಿಸುತ್ತದೆ.

ಎರಡನೆ ಹಂತದಲ್ಲಿ ಬಡತನದಿಂದಾಗಿ ತಾಯಿ ಸಾಕವ್ವ ಸ್ಥಾನ ಪಡೆದಿಲ್ಲ. ಆಕೆಯ ಹಿರಿಯ ಮಗ ಕಾಳಣ್ಣ ಹಿರಿಯ ಅಧಿಕಾರ ಹೊಂದಿಲ್ಲ. ಸಾಕವ್ವ ತನ್ನ ಮಕ್ಕಳೊಂದಿಗೆ 'ಆಸ್ತಿ'ಯ ಬಗ್ಗೆ ಜಗಳವಾಡುತ್ತಾಳೆ. ಈ ಜಗಳ ಸೊಸೆಯರ ಜಗಳಕ್ಕೆ ದಾರಿಮಾಡಿಕೊಟ್ಟು ಆಕೆಯ ಮಕ್ಕಳು ಹಾಸ್ಯಾಸ್ಪದರಾಗುತ್ತಾರೆ. ಈ ಸಮಯದಲ್ಲಿ ಕಾಳಣ್ಣ ಒಂದು ಚೀಲ ಕಳ್ಳೆಕಾಯಿ ತರುತ್ತಾನೆ. ಅವರೆಲ್ಲರ ಮನಸ್ತಾಪಃ ಕೊನೆಗೊಂಡು ಪ್ರೀತಿ, ಸ್ನೇಹ ಉಕ್ಕತೊಡಗುತ್ತದೆ. ಸಾಕವ್ವನ ಮೊಮ್ಮಗಳು ಪುಟ್ಟಗೌರಿ ಹೋಗಿ ನಾಟಕ ಪ್ರ್ಯಾಕ್ಟಿಸ ನಡೆಸುತ್ತಿರುವ ಗಂಡನನ್ನು ಕರೆತರುತ್ತಾಳೆ. ಕಳ್ಳೆಕಾಯಿ ಕರಗಿಸುವ ಸಂಭ್ರಮದಲ್ಲಿ ಅವರೆಲ್ಲಾ ಸಾಹುಕಾರ ಎತ್ತಪ್ಪನ ಭವ್ಯ ಮನೆ, ಆಸ್ತಿಯ ಬಗ್ಗೆ ಮಾತನಾಡುತ್ತಾರೆ. ಆತನ ಮನೆಯ ಹಬ್ಬ ತಮ್ಮ ಮನೆಯ ಹಬ್ಬವೆಂಬಂತೆ ಮಾತಾಡಿಕೊಂಡು ನಲಿಯುತ್ತಾರೆ.

ದಲಿತರಾಗಿರುವವರು ಹಟ್ಟಿಯ ಬಡತನದ ಬದುಕು ಮತ್ತು ಅವರ ಆಸೆ ಅದರ ಈಡೇರಿಕೆಯ ಭ್ರಮೆ, ಸಾಕವ್ವನ ಅನ್ವೇಷಣೆ ಮತ್ತು ಆಕೆಯ ದೇವರ ಕಥೆ ಇದಕ್ಕಿಂತ ಕುತೂಹಲಕರವಾದದ್ದು. ಮೇಲಿನ ಎಲ್ಲದರ ಪರಿವೆಯೇ ಇಲ್ಲದೆ ಸಾಕವ್ವನ ಕಿರಿಮಗಳು ಪುಟ್ಟಗೌರಿ ನಡುಮನೆಯ ಗೋಡೆಯ ಮೇಲೆ ಕಾಲಿನಿಂದ ಆರಂಭಿಸಿ ಸುಂದರ ನೀಲಿ ನವಿಲು ಬರೆಯುವುದು. ಅದು ಹೇಗಿದೆ ಎಂದು ಕೇಳಿದಾಗ ಸಾಕವ್ವ ಕೊಡುವ ಉತ್ತರ ಈ ಬಡತನ, ಅಸಹಾಯಕತೆ ಸಣ್ಣತನಗಳ ನಡುವೆ ಹರಿಯುವ ಜೀವನ ಸಂತೋಷ ಮತ್ತು ಮುಗ್ಧ ನಂಬಿಕೆಗಳು.

ಮೂರನೆಯ ಹಂತದಲ್ಲಿ 'ಈ ಬದುಕಿನ ತುಯ್ದಾಟದಲ್ಲಿ ಮನಸ್ತಾಪ ಮತ್ತು ಅನ್ಯೋನ್ಯತೆಯಲ್ಲಿ ಯಾವುದು ಸಹಜ, ಯಾವುದು ಕಳ್ಳತನ ಎಂದು ಅರಿಯದ ಪೋಲೀಸರು ಮತ್ತು ಸಾಹುಕಾರ ಎತ್ತಪ್ಪ ಹಟ್ಟಿಗೆ ಕಳ್ಳಿಕಾಯಿ ಮೋಟೆಗಾಗಿ ಹುಡುಕಿಕೊಂಡು ಬರುತ್ತಾರೆ'.[೪]

ದೇವನೂರ ಮಹಾದೇವನವರು ಸಾಕವ್ವನ ಕುಟುಂಬದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇಡೀ ದಲಿತಜನಾಂಗಗಳ ಬಿಕ್ಕಟ್ಟು ಧ್ವನಿತವಾಗಿದೆ ಎಂಬುದನ್ನು

'ಒಡಲಾಳ' ಕಾದಂಬರಿಯ ಮೂಲಕ ತಿಳಿಸಿದ್ದಾರೆ. ಜೀವನವನ್ನು ಜೀವನವನ್ನಾಗಿ ನೋಡಲು ತನಗನ್ನಿಸಿದ್ದನ್ನು ಪುಟ್ಟಗೌರಿಯ ನವಿಲಿನಂತೆ ಕಲೆಯಾಗಿ ರೂಪಿಸಲು ದೇವನೂರರು ವಿಶಿಷ್ಟ ಶೈಲಿ ಬಳಸಿಕೊಂಡಿರುವುದು ತಿಳಿಯುತ್ತದೆ. ಬಡತನ ಎನ್ನುವುದು ಮನುಷ್ಯನನ್ನು ಕೆಟ್ಟಕೆಲಸಕ್ಕಾದರು ಪ್ರೇರೇಪಿಸುತ್ತದೆ ಇಲ್ಲಿ ಅನಕ್ಷರತೆ ಒಂದೆಡೆಯಾದರೆ ಬಡತನ ಇನ್ನೊಂದೆಡೆಯಾಗಿ ನಿಲ್ಲುತ್ತದೆ ಹೀಗೆ ಹಲವು ಸಮಸ್ಯೆಗಳನ್ನು ಕಾದಂಬರಿಕಾರರು ಕಾಳಣ್ಣನ ಪಾತ್ರದ ಮೂಲಕ ಆಧುನಿಕತೆಯನ್ನು ತೋರಿಸಲು ಹೊರಟಿದ್ದಾರೆ.

ಬದುಕು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇತ್ತೀಚಿನ ಕಾದಂಬರಿಕಾರರಾಗಿ ಕಾಣಿಸಿಕೊಂಡ ಗೀತಾ ನಾಗಭೂಷಣರವರು ತಮ್ಮ ಭಾಷಾ ಶೈಲಿ, ವಸ್ತು, ತಂತ್ರಗಾರಿಕೆಯ ವಿಶಿಷ್ಟ ಬರವಣಿಗೆಯಿಂದಾ ತಮ್ಮನ್ನು ಗುರುತಿಸಿಕೊಂಡವರು. ಇವರ 'ಬದುಕು' ಕಾದಂಬರಿ (೨೦೦೧) ಪ್ರಾದೇಶಿಕ ಭಾಷೆ ಒಳಗೊಂಡು ರೂಢಿ ನಂಬಿಕೆ, ಶಾಸ್ತ್ರ ಸಂಪ್ರದಾಯ, ಆಚರಣೆಗಳು, ಸಂಕಟ, ಸಮಸ್ಯೆ, ಸುಖ ದುಃಖ, ರೀತಿ ರಿವಾಜು ಮುಂತಾದ ವಿಷಯಗಳನ್ನು ಒಳಗೊಂಡ ವಿಶಿಷ್ಟತೆಯಿಂದಾ ಕೂಡಿದ ಕಾದಂಬರಿಯಾಗಿದೆ. 'ಬದುಕು' ಕಾದಂಬರಿ ಬರೀ ಬದುಕು ಅಷ್ಟೇ ಆಗಿರದೇ ವಿವಿಧ ರೀತಿಯ ವಿಭಿನ್ನ ಬದುಕುಗಳ ದರ್ಶನವಾಗಿದ್ದು ತುಳಜಾ ಜೋಗಿಣಿಯಾಗಿ ವ್ಯವಸ್ಥೆಯನ್ನು ವಿರೋಧಿಸುವುದು ಕಾಶವ್ವ ಮಾರ್ತಾಂಡನನ್ನು ವಿವಾಹವಾಗಿ ತನ್ನ ಪ್ರಿಯತಮನಾದ ಲಿಂಗರಾಜನೊಂದಿಗೆ ಬಾಳ್ವೆ ಮಾಡುವುದು ಬೆಳ್ಳಿ ತನ್ನ ಗಂಡ ಕಲ್ಯಾಣಿ ಜೈಲು ಸೇರಿದರೂ ದಿಟ್ಟತನದಿಂದ ಬದುಕುವುದು ಪ್ರತಿಭಟನೆಯ ಸ್ವರೂಪವನ್ನು ಪಡೆಯುತ್ತದೆ.

ಮಲ್ಲಪ್ಪನ ಅಳಿಯ ಹಾಲಪ್ಪ ಮತ್ತು ಮಗಳು ಶಾಣಮ್ಮ ಸಹಾಯಕ ಪಾತ್ರಗಳಾಗಿವೆ. ತಮ್ಮ ಮಾವನ ಸಂಸಾರ ಸರಿಯಾಗಿರಲಿ ಎಂದು ಹಾಲಪ್ಪ ತನ್ನ ತವರುಮನೆ ಸುಖವಾಗಿರಲಿ ಎಂದು ಶಾಣಮ್ಮ ಇಡೀ ಕಾದಂಬರಿ ಉದ್ದಕ್ಕೂ ಚಿಂತಿಸುವುದು, ನೆರವು ನೀಡುವುದು ತಮ್ಮ ಮಗಳು ಬೆಳ್ಳಿಗೆ ಕಲ್ಯಾಣಿಗೆ ಕೊಟ್ಟು ಶಿವಳ್ಳಿ ಮನೆಗೆ ಆಧಾರಸ್ತಂಭವಾಗುವುದು ಕಾಣುತ್ತೇವೆ. ಅದೇ ರೀತಿ ಬೆಳ್ಳಿ ಮತ್ತು ಕಾಶಿಯರ ಬದುಕು ವಿಭಿನ್ನ ನೆಲೆಗಳಿಂದಲೇ ಕೂಡಿದೆ. ಬೆಳ್ಳಿ ಇರುವಂತಹ ವ್ಯವಸ್ಥೆಯಲ್ಲಿಯೇ ಜೀವನ ನಡೆಸುವುದು ಮತ್ತು ಆ ಜೀವನ ನಡೆಸುವುದಕ್ಕಾಗಿ ಪ್ರತಿಭಟನೆ ಮಾಡಿದರೆ ಕಾಶಿ ಸಂಪ್ರದಾಯಸ್ಥ ಸಮಾಜ ಹಾಕಿಕೊಟ್ಟ ನಿಯಮಗಳನ್ನು ಮುರಿಯುತ್ತಾಳೆ. ಆದ್ದರಿಂದ ಈ ಎರಡು ವಿಭಿನ್ನ ಜೀವನದ ದರ್ಶನಗಳು ನಮಗೆ ಮುಖ್ಯ ಎನಿಸುತ್ತದೆ.

ನಮ್ಮ ಸಮಾಜ ಕುಟುಂಬ ವಿವಾಹದಂತಹ ಸಂಸ್ಥೆಗಳ ಜೊತೆಗೆ ಧರ್ಮ ಎಂಬುದನ್ನು ಸ್ಥಾಪಿಸದೇ 'ದಯವೇ ಧರ್ಮದ ಮೂಲವಯ್ಯಾ, ದಯೆವಿಲ್ಲದ ಧರ್ಮ ಯಾವುದಯ್ಯಾ' ಎಂಬ ಬಸವಣ್ಣನವರ ಮಾತಿಗೆ ಬದಲಾಗಿ ಧರ್ಮ ಹೆಣ್ಣನ್ನು

ಸ್ವೇಚ್ಛೆಯಾಗಿ ಬಳಸಿಕೊಳ್ಳುವಲ್ಲಿ ಅತ್ಯಂತ ಮುಖ್ಯವಾದ ಸಾಧನವಾಗಿದೆ. ದೇವತೆ ಎಂದು ಹೆಣ್ಣನ್ನು ದೇವತೆಗೆ ಸಮೀಕರಿಸುವ ಈ ಸಮಾಜವು ದೇವರ ಹೆಸರಿನಲ್ಲಿ ಅಮಾನವೀಯವಾಗಿ ಬೆಳೆಸಿಕೊಳ್ಳಲಾಗುತ್ತಿದೆ. ನೀಲವ್ವ ಜೋಗಿಣಿಯಾಗುವುದಿಲ್ಲ ಎಂದು ಹೇಳಿದರೂ ಆಕೆಯನ್ನು ಜೋಗಿಣಿಯನ್ನಾಗಿ ಮಾಡುತ್ತಾರೆ. ಜೋಗಿಣಿ ಎಂದರೆ ಮಾಪುರ ತಾಯಿ ದೇವಿಯ ಸೇವಾಕ್ಕೆ ಪೂರಾ ಮೀಸಲಾದ ಹೆಣ್ಣು ಅವಳು ಸಾಯುವವರೆಗೆ ಮದುವೆಯಾಗುವಂತಿಲ್ಲ.

ಕಾದಂಬರಿಯಲ್ಲಿ ಲಿಂಗಾಧಾರಿತ ಪ್ರಶ್ನೆಗೆ ಬಂದರೆ ಧರ್ಮ ಎಂಬುದು ಸಹ ಪ್ರಧಾನ ಮತ್ತು ಅಧೀನ ನೆಲೆಗಳನ್ನು ಹುಟ್ಟು ಹಾಕುತ್ತದೆ. ಅದು ಲಿಂಗ, ವರ್ಗದ ಹಿನ್ನೆಲೆಗಳಲ್ಲಿಯೇ ಜೋಗತಿಯನ್ನು ರೂಪಿಸುವಂತಹ ಈ ಸಮಾಜ ಮೇಲ್ವರ್ಗದ ಹೆಣ್ಣುಗಳಿಗೆಲ್ಲ ಅಥವಾ ಕೆಳ ಮತ್ತು ಮೇಲ್ವರ್ಗದ ಪುರುಷನಿಗೂ ಅಲ್ಲ, ಕೆಳವರ್ಗದ ಸ್ತ್ರೀಗೆ ಮಾತ್ರವೇ ಆಗಿದ್ದು ಮದುವೆಯಾಗದೇ ಗಂಡು ಹೆಣ್ಣು ಸಂಬಂಧ ಬೆಳೆಸಲು ಪ್ರಧಾನವರ್ಗ ಒಪ್ಪಿಗೆ ನೀಡಿದ ಸಂಸ್ಥೆಗಳಾಗಿವೆ. ಆಚರಣೆ ಸಂಪ್ರದಾಯಗಳ ಮೂಲಕ ಅವುಗಳನ್ನು ಇಂದಿಗೂ ಮೌಲ್ಯಗಳಾಗಿ ಉಳಿಸಿಕೊಂಡು ಬಂದಿದೆ.

ಕಾದಂಬರಿಯನ್ನು ಶೋಷಣೆಯ ನೆಲೆಯಿಂದ ನೋಡುವುದಾದರೆ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಕೆಳವರ್ಗದ ದಾರಿದ್ರ್ಯ, ಮೌಢ್ಯತೆಗಳಿಂದ ಶೋಷಣೆಗೊಳಗಾಗಿದ್ದಾರೆ. ಇಲ್ಲಿ ಮಲ್ಲಪ್ಪನ ಪಾತ್ರವನ್ನು ತೆಗೆದುಕೊಂಡಾಗ ತನ್ನ ಹೆಂಡತಿ ಮಲ್ಲವ್ವ ಇದ್ದರೂ ಸಹ ಬೇರೆ ಹೆಣ್ಣಿನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ. ಇತ್ತ ಮಲ್ಲವ್ವ ತನ್ನ ಸಂಸಾರದಲ್ಲಿ ಬೇರೆ ಹೆಣ್ಣಿಗೆ ಸ್ಥಾನ ಕೊಡುವುದಲ್ಲದೆ ಮಲ್ಲಪ್ಪನಿಂದಾ ದಿನವಿಡಿ ಶೋಷಣೆಗೆ ಗುರಿಯಾಗುತ್ತಿರುವ ಸಂದರ್ಭ ಮುಂದೆ ಮಕ್ಕಳಾದ ಮೇಲೆ ಮಲ್ಲಪ್ಪ ತಟಸ್ಥನಾಗುತ್ತಾನೆ. ಇನ್ನೊಂದು ಪಾತ್ರ ಚಿತ್ರಣ ತೆಗೆದುಕೊಳ್ಳುವುದಾದರೆ ಕಲ್ಯಾಣಿ ಜೈಲಿಗೆ ಹೋದ ಮೇಲೆ ಬೆಳ್ಳಿಯು ಶೋಷಣೆಗೊಳಗಾಗುತ್ತಾಳೆ. ಬೇಲಿಯಿಲ್ಲದ ಹೊಲ ಅಂದ್ರ ಹಾದಿಬೀದಿ ದನಗೊಳಿಗೆ ಮೇಯಲಿಕ್ಕ ಬರ್‍ತಾವ ನೋಡಿ, ಒಂಟಿ ಹೆಂಗಸ ದುಡ್ಡು ಬದುಕಗುಡಂಗಿಲ್ಲ. ಈ ಮಂದಿಗೆ ಒಟ್ಟೆನ್ಯಾಗ ನಾನೇ ಗಟ್ಟಿಯಾಗಿ ನಿಂದರ್‍ಬೇಕು ಎನ್ನುವಲ್ಲಿ ಗಂಡ ಇಲ್ಲದ ಹೆಣ್ಣನ್ನು ಸಮಾಜ ನಡೆಸಿಕೊಳ್ಳುವ ರೀತಿ ಮತ್ತು ಆಕೆಯ ಛಲ ಮೆಚ್ಚುವಂತದೆ. ಲೈಂಗಿಕತೆಯನ್ನೆ ಮುಖ್ಯ ಕೇಂದ್ರವಾಗಿಟ್ಟುಕೊಂಡು ಎಲ್ಲಾ ರೀತಿಯ ಶೋಷಣೆಗಳನ್ನು ಈ ಸಮಾಜ ಮಾಡುತ್ತದೆ. ದೇವರು ಧರ್ಮಗಳ ಹೆಸರಿನಲ್ಲಿ ಮೇಲ್ವರ್ಗದವರು ಹಣ, ಹೆಂಡದಿಂದ ಪೂಜಾರಿಗೆ ಹಿಡಿದುಕೊಂಡು ಕೆಳವರ್ಗದ ಜನರನ್ನು ಶೋಷಣೆ ಮಾಡುತ್ತಾರೆ.

ಭಾಷಾ ಪ್ರಬುದ್ಧತೆಯಿಂದ ಕಾದಂಬರಿಗೆ ವಿಶೇಷತೆ ಬಂದಿದೆ. ಜನಪದ ನುಡಿಗಟ್ಟು, ವಾಕ್ಯ, ಗಾದೆ, ಒಗಟು, ಹಾಡು, ಉರ್ದುಭಾಷೆಯ ಪದಪುಂಜಗಳು ಬಳಸುವುದರ ಮೂಲಕ ಈ ಕಾದಂಬರಿಯ ಸತ್ವ, ಶಕ್ತಿ, ಸೊಬಗು ಹೆಚ್ಚಾಗಿದೆ.[೫] ಇದೇ

ರೀತಿ ಶೈಲಿಯ ಪ್ರಬುದ್ಧತೆ ನೋಡುವುದಾದರೆ ಇಡೀ ಕಾದಂಬರಿ ಲಿಂಗರಾಜ ಕಾಶಿಯ ಸಂಬಂಧದಿಂದ ಕೂಡಿದ್ದು ಇದರ ಸುತ್ತಮುತ್ತ ಉಳಿದೆಲ್ಲ ಪಾತ್ರಗಳು ಕೆಲಸ ಮಾಡುವವು. ಅವು ಸಮಯಕ್ಕೆ ತಕ್ಕಂತೆ ಪ್ರತಿಕ್ರಿಯೆ ನೀಡಿವೆ. ಈ ಕಾದಂಬರಿ ಬದುಕಿನಲ್ಲಿ ಪಡೆದುಕೊಳ್ಳಬೇಕಾದ ವಿಷಯ ಕುರಿತು ಹೇಳುತ್ತ ಆಧುನಿಕ ಶಿಕ್ಷಣ, ಸಂಪ್ರದಾಯ, ನೈತಿಕತೆ ಬಗ್ಗೆ ಹೇಳಲು ಹೊರಟಿದೆ.

ಕಾದಂಬರಿಯಲ್ಲಿ ಎಲ್ಲ ಜಾತಿ ಜನಗಳ ರಸಿಕತೆ, ಸೊಕ್ಕು, ಬಳಕೆ, ಸರಸ-ವಿರಸ, ಕೋಪ-ತಾಪ, ಮಧುರ ಸಂಬಂಧ, ಶೋಷಣೆ ಎಲ್ಲ ಕಾದಂಬರಿಯನ್ನು ಓದುತ್ತಾ ಹೋದರೆ ಬಿಚ್ಚಿಕೊಳ್ಳುವ ವಿಷಯಗಳಾಗಿವೆ.[೬] ಕಾಲ ಸಮಯ, ಸಂದರ್ಭ, ಸ್ಥಳಕ್ಕೆ ತಕ್ಕಂತೆ ನಡೆದದ್ದರಿಂದ 'ಬದುಕು' ಕಾದಂಬರಿ ಅರ್ಥಪೂರ್ಣವಾಗಿದೆ.

ಸ್ವಪ್ನ ಸಾರಸ್ವತ

'ಹತ್ತು ಕಟ್ಟುವುದಕ್ಕಿಂತ ಮುತ್ತು ಕಟ್ಟು' ಎಂಬ ಗಾದೆಯಂತೆ ಕನ್ನಡ ಸಾಹಿತ್ಯ ಲೋಕದಲ್ಲಿ ಕಥಾ ಸಾಹಿತ್ಯ, ಕಾದಂಬರಿ, ಅನುವಾದ ಇತ್ಯಾದಿ ಸಾಹಿತ್ಯದಲ್ಲಿ ಕೆಲವೆ ಕೃತಿಗಳನ್ನು ಬರೆದ ಗೋಪಾಲಕೃಷ್ಣ ಪೈರವರು ಅಕಾಡಮಿಕ ವಲಯದಿಂದ ಹೊರಗಿನವರಾದರು ಸಹ ಸಾಹಿತ್ಯದಲ್ಲಿ ಈ ಪರಿಯ ಸಾಧನೆ ಮಾಡುತ್ತಿರುವ ವಾಸ್ತವವು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ತೋರುತ್ತಿದೆ ಎನ್ನಬಹುದು. ಇವರ ಚೊಚ್ಚಲ ಕಾದಂಬರಿಯಾದ 'ಸ್ವಪ್ನ ಸಾರಸ್ವತ' (೨೦೦೯) ಇದು ಪ್ರಕಟಗೊಂಡು ಕೆಲವೆ ವರ್ಷಗಳಾದರೂ ಸಹ ಸತತವಾಗಿ ಐದು ಮುದ್ರೆಯನ್ನು ಕಾಣುವುದರ ಜೊತೆಗೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಇಂತಹ ಕಾದಂಬರಿಗಳು ಸಾಹಿತ್ಯ ಕೃಷಿಗೆ ಒಂದು ರೀತಿಯ ಪೂರಕ ಅಂಶಗಳಾಗಿರುತ್ತವೆ.

'ಸ್ವಪ್ನ ಸಾರಸ್ವತ' ಕಾದಂಬರಿಯ ವಿಷಯ ತೆಗೆದುಕೊಂಡಾಗ ಇದು ನಾನೂರು ವರ್ಷಗಳ ಹಿಂದಿನ ಇತಿಹಾಸವನ್ನು ನೆನಪಿಗೆ ತರುವುದಲ್ಲದೆ ಧರ್ಮ, ಆಚಾರ ವಿಚಾರ, ನಂಬಿಕೆ, ಪ್ರೀತಿ, ಶಾಪ, ಜಿಗುಪ್ಸೆ, ನೋವು, ನಲಿವು ಇತ್ಯಾದಿ ವಿಷಯಗಳ ಒಟ್ಟುಮೊತ್ತವನ್ನು ಈ ಕಾದಂಬರಿ ತನ್ನಲ್ಲಿ ಹಿಡಿದಿಟ್ಟುಕೊಂಡಿದೆ. ಕಾದಂಬರಿಯನ್ನು ನಾಲ್ಕು ಭಾಗವಾಗಿ ಕಾಣುತ್ತೇವೆ. ಮೊದಲ ಎರಡು ಭಾಗಗಳಲ್ಲಿ ಗೋವಾದ ವಿಪ್ಲವದ ದಿನಗಳ ಚಿತ್ರವಿದೆ. ಪೋರ್ಚುಗೀಸರು ಗೋವಾವನ್ನು ಆಕ್ರಮಿಸಿ ನಡೆಸಿದ ದಬ್ಬಾಳಿಕೆಯು ಅಲ್ಲಿಯ ಜನರ ಜೀವನವನ್ನೆ ನಲುಗಿಸಿದ ದುರ್ಭರ ದಿನಗಳ ಕಥನ ವಿವರವಾಗಿ ಮೂಡಿ ಬಂದಿದೆ. ಮೂರು ನಾಲ್ಕು ಭಾಗಗಳಲ್ಲಿ ರಾಮಚಂದ್ರ ಪೈ ಬಿಳ್ಳಂಬೀಡಿನಲ್ಲಿ ಅಭಿವೃದ್ಧಿಗೊಂಡು ತುಂಬಿದ ಮನೆಯ ಯಜಮಾನಿಕೆಯನ್ನು ನಡೆಸುವ ವಿವರಗಳೊಂದಿಗೆ ಆರಂಭಗೊಂಡು ಸಮಾಜವು ಬೇರುಬಿಡುವ ಪ್ರಕ್ರಿಯೆಯನ್ನು ಚಿತ್ರಿಸುತ್ತದೆ. ನಾನೂರು ವರ್ಷಗಳಲ್ಲಿ ಹಾದು ಬಂದ ಸಾರಸ್ವತ ಸಮುದಾಯದ ಅನುಭವಗಳ ಮೂಲಕ ಚರಿತ್ರೆ ಹಾಗೂ ವರ್ತಮಾನ ಜೀವನದ ಪರಸ್ಪರ ಮುಖಾಮುಖಿಗಳನ್ನು ಸಂಬಂಧಗಳನ್ನು ವೈಯಕ್ತಿಕ ಅನುಭವದ ನೆಲೆಗಳಲ್ಲಿ

ಕೌಟುಂಬಿಕ ಸಂದರ್ಭಗಳಲ್ಲಿಟ್ಟು ಪರೀಕ್ಷಿಸುತ್ತದೆ. ಈ ಕಾದಂಬರಿ ಗೋವಾದಲ್ಲಿ ಸಂತೃಪ್ತವಾಗಿದ್ದ ಸಾರಸ್ವತ ಬ್ರಾಹ್ಮಣ ಕುಟುಂಬಗಳು ಪೋರ್ಚುಗೀಸರ ಆಕ್ರಮಣದಿಂದ ತಮ್ಮ ನಂಬಿಕೆ, ಧರ್ಮ, ಜೀವಗಳನ್ನು ಉಳಿಸಿಕೊಳ್ಳಲು ದಕ್ಷಿಣಾಭಿಮುಖವಾಗಿ ಹೋಗುವುದರಿಂದಲೇ ಈ ಕಾದಂಬರಿಯ ವಸ್ತು ಹುಟ್ಟುತ್ತದೆ. ಮುಂದೆ ವಲಸೆ ಹೋಗಿ ಬೆಳೆದ ಆ ಕುಟುಂಬಗಳ ಎಲ್ಲ ಪಾತ್ರಗಳು ಈ ಕಾದಂಬರಿಯ ವಿಷಯಗಳೆ ಆಗಿವೆ.

ನಾನೂರು ಎಕರೆ ಭೂಮಿಯನ್ನ ಬಳ್ಳಂಬೀಡಿನಲ್ಲಿ ಮಾಣಿಯಾಣಿಗಳಿಂದ ಖರೀದಿ ಮಾಡಿದ ರಾಮಚಂದ್ರ ಪೈ ಇದೇ ಸಮಯದಲ್ಲಿ ತಮ್ಮ ಅಜ್ಜ ಹೇಳುತ್ತಿದ್ದ ಕಥೆಯನ್ನು ನೆನಪಿಸಿಕೊಳ್ಳುತ್ತಾನೆ. ಆ ಕಥೆಯಲ್ಲಿ ಭೂಮಿ ತೆಗೆದುಕೊಳ್ಳುದು ತನ್ನಜ್ಜನ ಆಸೆಯಾಗಿತ್ತು. ಎನ್ನುವುದನ್ನು ರಾಚ್ಚೂ ಪೈ ಮರೆತಿರಲಿಲ್ಲ. ಅಲ್ಲದೇ ಅಂದಿನಕಾಲದ ಪೂರ್ವಜರ ವ್ಯಾಪಾರ, ಜೀವನ ಶೈಲಿಯನ್ನು ಕೇಳುತ್ತಾ ರಾಚ್ಚೂ ಪೈನಲ್ಲೂ ಹೊಸ ಹೊಸ ಭಾವನೆಗಳು ಮೂಡುತ್ತಿದ್ದವು. ಪೋರ್ಚುಗೀಸರ ಆಕ್ರಮಣಕ್ಕೆ ಒಳಗಾದ ಬ್ರಾಹ್ಮಣರು ತಮ್ಮ ಧರ್ಮ, ನಂಬಿಕೆಗೆ ಕಟ್ಟುಬಿದ್ದು ನಾಗ್ಡೊ ಬೇತಾಳನ ಮಾತಿನಂತೆ ಊರುಬಿಟ್ಟು ಬೇರೆಡೆ ಹೋಗಿ ನೆಲೆನಿಂತು ಅಲ್ಲಿ ತಮ್ಮ ಕುಟುಂಬದ ಬೆಳವಣಿಗೆ ಮಾಡಿ ಕೊಂಡದ್ದು. ಈ ಕಾದಂಬರಿಯಲ್ಲಿ ಕವಿಯ ಕಲ್ಪನೆಯ ವಿಶಿಷ್ಟ ರೀತಿಯಲ್ಲಿ ತೊರಿಬಂದದ್ದನ್ನು ಗುರ್ತಿಸಬಹುದು.

ಕಾದಂಬರಿಯೋ 'ವಲಸೆ'ಯಿಂದಾ ಪ್ರಾರಂಭವಾದರೂ ಸಹ ಮುಂದೆ ಮಹಾಭಾರತದಂತೆ ವಿರಾಟ ಸ್ವರೂಪನ್ನು ಪಡೆದುಕೊಳ್ಳುತ್ತದೆ. ಈ ಕಾದಂಬರಿಯಲ್ಲಿ ಬರುವ ಮುಖ್ಯ ಕುಟುಂಬಗಳೆಂದರೆ ಬಳ್ಳಂಬೇಟ್ಟು ಪೈಗಳ ಕುಟುಂಬ, ಅಡುರು ಕಾಮತರ ಕುಟುಂಬ, ಮಾನ್ಯೆಯ ಮಲ್ಯರ ಕುಟುಂಬ, ಕುಂಬಳೆಯ ಕಿಣಿಯರ ಕುಟುಂಬಗಳನ್ನು ಕಾಣುತ್ತೇವೆ. ಮೊದಲು ಗೋವಾ ಪ್ರದೇಶದ ವೆರಣಿಯಿಂದಾ ವಲಸೆ ಹೊರಟ ೪೪ ಕುಟುಂಬಗಳು ವಲಸೆ ಸಂದರ್ಭದಲ್ಲಿ ಕಿಣಿಯರ ಕುಟುಂಬಗಳು ಬಂದು ಸೇರಿದ್ದರಿಂದಾ ೪೮ ಕುಟುಂಬಗಳು ವಲಸೆಯ ದಾರಿಯನ್ನು ಹಿಡಿಯುತ್ತವೆ. ಈ ಕುಟುಂಬಗಳು ಕುಂದಾಪುರ, ಮುಡಬಿದರೆ, ಉಡುಪಿ, ಕಟಪಾಳ, ಪಡುಬಿದರೆ, ಗಂಗೊಳ್ಳಿ, ಮಂಜೇಶ್ವರ, ಕುಂಬಳೆ, ಕಾಸರಗೂಡು, ನೀಲೆಶ್ವರ, ಗೋಕರ್ಣ, ಮಂಗಳೂರು, ಬಾರಕೂರ, ಕಾರವಾರ, ಅಂಕೋಲಾ, ಕುಮಟಾ, ಪೋಳೆ, ಹೊನ್ನಾವರ, ಮಂಗಲಪಾಡು, ಉಳ್ಳಾಲ, ಆಡೂರು, ಪೆರಡಾಲ, ವಾಮಂಜೂರು, ಕೊಚ್ಚಿ ಹೀಗೆ ಎಲ್ಲ ಊರುಗಳ ಮಾರ್ಗವಾಗಿ ಬರುವಾಗ ಅಲ್ಲಲ್ಲಿ ಕೆಲವು ಕುಟುಂಬಗಳು ನೆಲೆ ನಿಂತರೂ ಕೊನೆಗೆ ವಿಟ್ಟು ಪೈ ಕುಟುಂಬ ಬಿಳ್ಳಂಬೀಡಿಗೆ ಹೋಗಿ ನೆಲೆನಿಲ್ಲುತ್ತದೆ. ಹೀಗೆ 'ವಲಸೆ' ಬಂದ ಕುಟುಂಬಗಳು ವಲಸೆಬರಲು ಕಾರಣ ಮತ್ತು ಬರುವ ಸಂದರ್ಭದಲ್ಲಾದ ಅನುಭವಗಳೆಲ್ಲವೂ ಕಾದಂಬರಿಯ ಮುಖ್ಯ ವಿಷಯವೆಂತಲೆ ಹೇಳಬಹುದು.

ಇಲ್ಲಿ ಶಾಪಗಳು ಮತ್ತು ನಾಗ್ಡೂ ಬೇತಾಳನ ಪಾತ್ರಗಳು ಕಾದಂಬರಿಯ ಪಾತ್ರಗಳಿಗೆ ಜೀವತುಂಬಿ ಮುನ್ನಡಿಸಿ ಕೊಂಡು ಹೊರಟಿವೆ. ವಿಟ್ಠು ಪೈನ ಕುಟುಂಬಕ್ಕೆ ತಟ್ಟಿದ ನಾಗಶಾಪವು ಕುಟುಂಬಗಳಿಂದಾ ಕುಟುಂಬಗಳಿಗೆ ಬಳ್ಳಿಯಂತೆ ಹಬ್ಬುತ್ತಾ ಹೋಗುವ ಸ್ಥಿತಿ ಇದು ಪೂರ್ವಜರಿಂದಾ ಬಂದ ಶಾಪವಾಗಿದೆ. ವಿಟ್ಠು ಪೈ ಧಡ್ಡನ ವಿಷಯದಲ್ಲಿ ಮಾಡಿದ ಪಾಪ ಪೈಗಳ ಕುಟುಂಬಕ್ಕೆ ಬೆನ್ನತ್ತಿದ ಬೇತಾಳನಂತೆ ಕಾಣುವ ಶಾಪ ವರ್ತಮಾನದಲ್ಲಿ ಪಡೆದಂತಾಗಿದೆ. ಇಲ್ಲಿ ವಿಟ್ಠು ಪೈ ತನ್ನ ಪೂರ್ವಜರ ಶಾಪದೊಂದಿಗೆ ತಾನು ಮಾಡಿಕೊಂಡಿರುವ ಧಡ್ಡನ ಶಾಪವನ್ನು ತನ್ನ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ಕೊಟ್ಟಂತೆ ಕಂಡುಬರುತ್ತದೆ. ಮುಂದೆ ಪೈ ಕುಟುಂಬಗಳ ಜವಾಬ್ದಾರಿ ಹೊತ್ತ ರಾಚ್ಚು ಪೈ ಪೂರ್ವಜರ ಇತಿಹಾಸ ತಿಳಿದರೂ ಸಹ ಕೆಲವು ಸಂದರ್ಭಗಳಲ್ಲಿ ಎಡುವುದು ಉಂಟು. ಯಾಕೆಂದರೆ ಅವನ ಮನಸ್ಸಿನ ಸ್ಥಿತಿ ಆ ಸಮಯದಲ್ಲಿ ಅವನನ್ನು ಮೂಖನಾಗಿಸಿರುವುದು. ಸಾರಸ್ವತ ಕುಟುಂಬಗಳ ಮುಖ್ಯ ಉದ್ದೇಶ ತಮ್ಮ ಆಚಾರ ವಿಚಾರವನ್ನು ಬಿಡದೆ ಅವುಗಳನ್ನು ಮುಂದುವರೆಸಿರುವುದು ಅಲ್ಲದೇ ತಮ್ಮ ಕುಟುಂಬವನ್ನು ವಿಶಾಲವಾಗಿ ಬೆಳೆಸುವುದು. ಭೂಮಿಯ ಸಂಪಾದನೆ ಮಾಡುವುದಾಗಿತ್ತು. ನರಸಪ್ಪಯ್ಯನವರಿಂದಾ ಪ್ರಾರಂಭವಾದ ಪೈ ಕುಟುಂಬ ಸುಬ್ರಾಯ ಪೈ ವರೆಗೆ ಬೆಳೆದು ಬರುವಲ್ಲಿಯ ವಿಷಯದೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ನಿರೂಪಕರು ಒಂದೆಡೆ ಪೋರ್ಚುಗೀಸರು ಸ್ವಾರ್ಥಿ, ಕ್ರೂರಿ ಎಂದು ಹೇಳುತ್ತಾ ಇನ್ನೊಂದೆಡೆ ಅದೇ ಕಾದಂಬರಿ ನಿರೂಪಕರು ಮೃದುತ್ವ ರೂಪದಲ್ಲಿ ಕೋಮಿನೋ ಮತ್ತು ಅಲ್ವೇರಾಳನ್ನು ತೋರಿಸುತ್ತಾರೆ. ಇದೆನು ಪೋರ್ಚುಗೀಸರನ್ನು ಮಾನವೀಯತೆ ಹಿನ್ನೆಲೆಯಲ್ಲಿ ತೋರಿಸಲು ಹೊರಟ್ಟಿದ್ದಾರೋ? ಇಲ್ಲಾ ಕಾದಂಬರಿ ವಸ್ತುವಿಗೆ ವಿಶೇಷತೆ ಬರುವಂತೆ ಮಾಡಿಕೊಂಡ ತಂತ್ರವೋ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಅಸ್ಪಷ್ಟತೆಯೊಂದು ಒಂದು ಕಥೆಯಲ್ಲಿ ಹೇಗೆ ತನ್ನ ಮಾತುಗಳಿಂದ ಸ್ಪಷ್ಟ ಅರ್ಥ ಪಡೆದುಕೊಳ್ಳಬಹುದು ಎಂಬುದನ್ನು ಹುಟುಕುವುದೇ ಇಲ್ಲಿ ಮುಖ್ಯ ಅನಿಸಿಕೊಳ್ಳುತ್ತದೆ. ಗೋಪಾಲಕೃಷ್ಣ ಪೈರವರು ಕಾದಂಬರಿ ಮೂಲಕ ಸಾರಸ್ವತ ಲೋಕವನ್ನು ಒಂದು ಸಮಗ್ರ ಶೋಧನೆಗೆ ಒಳಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಕಾದಂಬರಿ ಪೋರ್ಚುಗೀಸರ ದಬ್ಬಾಳಿಕೆಯ ಚಿತ್ರಣಕ್ಕೆ ಮಾತ್ರ ಮೀಸಲಾಗಲಿಲ್ಲ. ಹತ್ತು ಹಲವು ಮನುಷ್ಯ ಸಂಬಂಧಗಳ ಪರಸ್ಪರ ಮನೋವ್ಯಾಪಾರಗಳ ನವಿರಾದ ಭಾವನೆಗಳು ಹಾಗೂ ಹಳೆ ಮತ್ತು ಹೊಸ ಆವಿಷ್ಕಾರಗಳ ಸಂಘರ್ಷ, ಶೋಷಣೆಗಳು ಸಹ ಬಹು ಮುಖ್ಯವಾಗಿದೆ. ಗೋಪಾಲಕೃಷ್ಣ ಪೈ ಅವರ ಆಸಕ್ತಿ ಬರೇ ವಲಸೆಗೆ ಮಾತ್ರ ಸೀಮಿತವಾದುದ್ದಲ್ಲ ಆ ನಂತರದ ಕಥನ ಮಹಾಭಾರತದಂತೆ ವಿರಾಟ ಸ್ವರೂಪವನ್ನು ಪಡೆಯುತ್ತದೆ. ರಾಮಚಂದ್ರ ಪೈನ ತಾತ ವಿಟ್ಠು ಪೈನ ಕಥನ ಮುಕ್ಕಾಲು ವಾಸ, ವಲಸೆ ಮತ್ತು ಆ ಕ್ರಿಯೆಯಲ್ಲಿನ ಸಂಕೀರ್ಣತೆಯನ್ನು ಹೇಳುತ್ತಾ ಹೋಗುತ್ತದೆ. ಒಂಬತ್ತು ತಲೆಮಾರುಗಳ ಜೀವನಾನುಭವನ್ನು ಶೋಧಿಸಲು ಪ್ರಯತ್ನ ನಡೆಸುವ ಈ ಕಥನದ ಕ್ರಮವು ಬೆರಗು

ಮೂಡಿಸುವಂತದ್ದು. ಈ ಒಂಬತ್ತು ತಲೆಮಾರುಗಳ ಜೀವನ ವಿಧಾನದಲ್ಲಿ ಕಾಲದಿಂದ ಕಾಲಕ್ಕೆ ಯಾವ ರೀತಿಯ ಬದಲಾವಣೆಗಳಾದವು ಎಂಬುದನ್ನು ಸಮರ್ಥವಾಗಿ ಹಿಡಿದಿಟ್ಟಿರುವ ಈ ಕಾದಂಬರಿಯ ಸಮುದಾಯಿಕ ಬದುಕಿನಿಂದ ವಿಘಟನೆಯತ್ತ ಸಾಗುವ ಪರಿಯನ್ನು ಸಹ ದಾಖಲಿಸುತ್ತದೆ.

ಹೀಗೆ ಕನ್ನಡ ಕಾದಂಬರಿ ಪರಂಪರೆಯನ್ನು ನೋಡುತ್ತಾ ಹೋದಂತೆ ಅದರ ವಿಸ್ತರಣೆ ಇನ್ನೂ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಕಾದಂಬರಿಗಳು ಕಾಲದಿಂದ ಕಾಲಕ್ಕೆ ವಸ್ತುಗಳನ್ನು ಬದಲಾವಣೆ ಮಾಡಿಕೊಳ್ಳುತ್ತಾ ಹೋಗುತ್ತವೆ. ಇಲ್ಲಿ ನಾವು ನೋಡಿರುವ ಕಾದಂಬರಿಗಳಿಗೂ ಮತ್ತು ಸ್ವಪ್ನ ಸಾರಸ್ವತ ಕಾದಂಬರಿಗೂ ಭಿನ್ನತೆಯನ್ನು ಕಾಣುತ್ತೇವೆ. ಕನ್ನಡ ಕಾದಂಬರಿಗಳಲ್ಲಿ ಸಾರಸ್ವತ ಕುಟುಂಬಗಳ ಬಗ್ಗೆ, ವಲಸೆ ಹೋಗುವ ಬಗ್ಗೆ, ಬಡತನ, ಇತಿಹಾಸ, ಆಧುನಿಕ ಶಿಕ್ಷಣ, ಜಾತಿ, ರಾಜಕೀಯ ಸಂಘರ್ಷ ಇತ್ಯಾದಿ ವಿಷಯಗಳ ಹಲವು ಕಾದಂಬರಿಗಳು ಬೆಳೆದು ಬಂದಿವೆ. ಆದರೆ ಇವು ಎಲ್ಲಕ್ಕೂ ವಿಭಿನ್ನವಾಗಿ 'ಸ್ವಪ್ನ ಸಾರಸ್ವತ' ಸಾರಸ್ವತ ಸಮುದಾಯವೇ ವಲಸೆ ಹೋಗುವ ವಿಷಯವನ್ನು ಇಟ್ಟುಕೊಂಡು ರಚನೆಯಾಗಿದೆ. ಇತಿಹಾಸವನ್ನು ಇಟ್ಟುಕೊಂಡು ಕಾದಂಬರಿಯಾದ 'ಸ್ವಪ್ನ ಸಾರಸ್ವತ' ಕನ್ನಡ ಕಾದಂಬರಿ ಪರಂಪರೆಯಲ್ಲಿ ಇತಿಹಾಸವನ್ನೆ ಸೃಷ್ಟಿಸಿದೆ ಎಂದು ಹೇಳಿದರೆ ತಪ್ಪಾಗಲಾರದು.

ಕೊನೆ ಟಿಪ್ಪಣಿ

೧. ವಿವಿಧ ಲೇಖಕರು, **ಕಾರಂಬರಿ ಕಣ್ಣಲ್ಲಿ ಕಾರಂತರು,** ಪುಟ – ೨೬

೨. ಶಾಂತಿನಾಥ ದೇಸಾಯಿ, **ಮುಕ್ತಿ,** ಪುಟ – ३೦३

३. ಡಾ. ಜಿ. ಎಸ್. ಆಮೂರ, **ಶಾಂತಿನಾಥ ದೇಸಾಯಿ,** ಪುಟ – ೨೬

೪. ದೇವನೂರು ಮಹಾದೇವ, **ಒಡಲಾಳ,** ಪುಟ – ೧३

೫. ಗೀತಾನಾಗಭೂಷಣ, **ಬದುಕು,** ಪುಟ – ೯

೬. ಡಾ ಆರ್ ಮಣಿಪಾಲ, **ವಿಮರ್ಶೆಯ ಸವಾಲು,** ಪುಟ – ೧೨

ಅಧ್ಯಾಯ – ೪

ಈ ಕಾದಂಬರಿ ಕುರಿತ ಅಧ್ಯಯನಗಳ ತಾತ್ವಿಕ ಚರ್ಚೆ

ಅಧ್ಯಾಯ – ೪

ಈ ಕಾದಂಬರಿ ಕುರಿತ ಅಧ್ಯಯನಗಳ ತಾತ್ವಿಕ ಚರ್ಚೆ

ಗೋಪಾಲಕೃಷ್ಣ ಪೈರವರ ಸ್ವಪ್ನ ಸಾರಸ್ವತ ಕಾದಂಬರಿಗೆ ಮುನ್ನುಡಿ ಬರೆಯುತ್ತಾ ಎಸ್.ಆರ್. ವಿಜಯಶಂಕರವರು ಆಧುನಿಕ ಸಂವೇದನೆಯನ್ನು ಪಡೆದ ಇಂದಿನ ಓದುಗ ಇಂತಹ ಕಾಬಂಬರಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ ಎಂದು ಹೇಳುತ್ತಾರೆ. ಕಾದಂಬರಿಯಲ್ಲಿ ಬರುವ ಪಾತ್ರ ಚಿತ್ರಣಗಳು ಕಲ್ಪನೆಯಲ್ಲಿ ರಚನೆಗೊಂಡರು ಸಹ ಅವು ಕಾದಂಬರಿಗೆ ಜೀವ ತುಂಬುತ್ತಾ ಹೊಗುವುದು ಇಲ್ಲಿ ಮುಖ್ಯ ಅನಿಸುತ್ತದೆ. ಜೀವನ ಹಾಗೂ ಮನುಷ್ಯತ್ವ ಎಂದರೆ ಏನು ಎಂಬುದನ್ನು ಕಾದಂಬರಿ ಪರೀಕ್ಷಿಸಲು ಹೊರಡುತ್ತದೆ ಎನ್ನುತ್ತಾರೆ. ಅಂದರೆ ಕಾದಂಬರಿಯಲ್ಲಿ ಬರುವ ಸಾರಸ್ವತ ಸಮುದಾಯ ಬ್ರಾಹ್ಮಣರು ಆಕ್ರಮನಕ್ಕೆ ಒಳಗಾದರು ಸಹ ಅದನ್ನು ಪ್ರತಿಭಟಿಸದೇ ವಲಸೆ ಹೋಗಲು ಮುಂದಾಗುತ್ತಾರೆ. ಎಂಬುವುದು ಸಾರಸ್ವತರ ನಿರ್ಧಾರವೆಂದು ಹೇಳುವುದಾದರೆ ಇನ್ನೊಂದೆಡೆಯಿಂದಾ ಧರ್ಮ ಉಳಿಸಿಕೊಳ್ಳಲು ಪ್ರಯತ್ನಿಸದೆ ಅಸಾಯಕರಂತೆ ಬೇರೆಡೆ ಹೋಗುವ ಅವರ ಅಂಜುಭೂರಕತನ ಇಲ್ಲಿ ವ್ಯಕ್ತವಾಗುತ್ತದೆ. ಅಲ್ಲದೇ ಕಾದಂಬರಿಯೋ ಶಾಸ್ತ್ರಿಯ ಮನಸ್ಸು ಪ್ರಪಂಚ ಇರಬೇಕಾದ್ದು ಹೇಗೆ ಎಂಬುದನ್ನು ಗ್ರಹಿಸಲು ಪ್ರಯತ್ನಿಸುತ್ತದೆ ಎನ್ನುತ್ತಾರೆ.

ಕಾದಂಬರಿಯಲ್ಲಿ ಅಂದಿನಕಾಲದ ರಾಜಕೀಯ ಸ್ಥಿತ್ಯಂತರವು ಕಾದಂಬರಿಯ ವಸ್ತುವಿಗೆ ಪೂರಕವಾಗಿ ಕಾಣಿಸಿಕೊಳ್ಳುತ್ತದೆ ಎಂದು ಹೇಳುತ್ತಾರೆ. ಚರಿತ್ರೆಯು ನಾವು ಚಕ್ರವರ್ತಿಗಳಿಗೆ ಮಾತ್ರ ಸೀಮಿತವಾಗಿರದೇ ಜನಸಾಮಾನ್ಯರ ಆಡಳಿತಾತ್ಮಕ ಜೀವನವು ಚರಿತ್ರೆಯಲ್ಲಿ ಇರುತ್ತದೆ ಎಂಬುದನ್ನು ಕಾದಂಬರಿ ಮುಖಾಂತರ ಹೇಳುತ್ತಾರೆ. ಬಂಧುತ್ವದ ಭಾವದಲ್ಲಿ ಬಾಂಧವ್ಯ ಬೆಳೆಯುತ್ತದೆ.ಅನ್ನುವಲ್ಲಿ ರಾಮಚಂದ್ರ ಪೈನ ಚಿತ್ರಣವನ್ನು ಇತರೆ ಹಿಂದುಗಳೊಂದಿಗೆ ಇರುವ ಸಂಬಂಧದಲ್ಲಿ ಚಿತ್ರಿಸಲಾದ ರೀತಿಯ ಕುರಿತು ಅಭಿಪ್ರಾಯ ಹೇಳುತ್ತಾರೆ. ಕಥನದ ಮೂಲದಿಂದ ಕೊನೆಯವರೆಗೆ ಎಲ್ಲ ವಿಷಯದ ಕುರಿತು ಹೇಳಿದ ನಂತರ ತಮ್ಮ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸುತ್ತಾರೆ. ಕಾದಂಬರಿಯಲ್ಲಿ ಮಾನವೀಯತೆಗಳು ಅದರ ಮೂಲ ಮೌಲ್ಯಗಳಲ್ಲಿ ಒಂದು ಆಧುನಿಕ ಮನಸ್ಸು ಇರಬೇಕಾದ್ದು ಹೇಗೆ ಎಂಬುದರ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ ಇರುವುದು ಹೇಗೆ ಎಂಬುದನ್ನು ಗ್ರಹಿಸಲು ತೊಡಗುತ್ತದೆ ಎನ್ನುತ್ತಾರೆ. ಇದು ಹೇಗೆ ಇದೆ ಎಂಬ ಪ್ರಶ್ನೆ ಬಂದೊಡನೆ ಅನೇಕ ವಿಚಾರ, ಪ್ರಶ್ನೆ, ನಂಬುಗೆಗಳಿಗೆ ಮುಖಾಮುಖಿಯಾಗುತ್ತದೆ. ನೇರ ಮುಖಾಮುಖಿಯಲ್ಲಿ ಎದುರು ಬದುರಾಗಿ ಪರೀಕ್ಷಿಸುವುದು ಆಧುನಿಕ ಕ್ರಮಗಳಲ್ಲಿ ಒಂದು ಎಂದು ಹೇಳುತ್ತಾರೆ.

ನಿರೂಪಕರು ಕಾದಂಬರಿಯನ್ನು ವಲಸೆ ಎಂಬದರಿಂದಾ ಹುಟ್ಟುಹಾಕಿ ಅದರ ಹಿಂದೆ ಮತಾಂತರ ಎಂಬ ವಿಷಯವನ್ನು ಇಟ್ಟಿದ್ದಾರೆ. ಧರ್ಮವೇ ಇಲ್ಲಿ ಮೂಲವೆಂಬಂತೆ ಚಿತ್ರಿತವಾಗಿದ್ದರು ಕೂಡಾ ಧರ್ಮದ ನೆಲೆಗಟ್ಟುಗಳನ್ನು ಅಥವಾ ನಂಬುಗೆಗಳನ್ನು ಪ್ರಶ್ನಿಸುವುದರಲ್ಲಿ ಏಕೆ ಕಾದಂಬರಿಕಾರರಿಗೆ ಆಸಕ್ತಿ ಇಲ್ಲ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಜೊತೆಗೆ ಕಾದಂಬರಿ ಉದ್ದಕ್ಕೂ ಸಂಬಂಧಗಳು ಬೆಳೆಯುತ್ತಾ ಹೊಗುವ ಚಿತ್ರಣವಿದ್ದರು ಕೂಡಾ ಬಂಧು ಬಾಂಧವ್ಯದ ಪರೀಕ್ಷೆ ಕಾದಂಬರಿಯಲ್ಲಿ ಆಗಿರುವುದು ಕಂಡು ಬಂದಿಲ್ಲ. ಅದಕ್ಕಾಗಿ ಕಾದಂಬರಿಯನ್ನು ಈ ಹಿನ್ನಲೆಯಲ್ಲಿ ಪರೀಕ್ಷೆಗೆ ಒಳಪಡಿಸಬೇಕೆಂದು ಹೇಳುತ್ತಾರೆ. ಇಲ್ಲಿ ಸಂಬಂಧಗಳಿಗೆ ಮಾತ್ರ ಸೀಮಿತತೆಯನ್ನು ಹೊಂದಿಲ್ಲ ಎಂದು ಹೇಳುತ್ತಾಹೊಗುವಾಗ ಪರಿಸರ ಚಿತ್ರಣ ಇಲ್ಲಿ ಮುಖ್ಯ ಅನಿಸುತ್ತದೆ.ಕಾದಂಬರಿ ಕೊನೆ ತಲುಪುತ್ತಾ ಹೊದಂತೆ ತೀವ್ರವಾಗುತ್ತಾ ಮನುಷ್ಯ ಸ್ಥಿತಿಯನ್ನು ಅದರ ಪುರುಷಾರ್ಥಗಳನ್ನು ಪ್ರಪಂಚದ ನಾನಾ ಸಾಧ್ಯತೆಗಳಲ್ಲಿ ಪರೀಕ್ಷಿಸುತ್ತ ಆಪ್ತವಾಗಿರುತ್ತದೆ ಎಂದು ಹೇಳುತ್ತಾರೆ.

ಎಸ್.ಆರ್. ವಿಜಯಶಂಕರವರು ಗೋಪಾಲಕೃಷ್ಣ ಪೈಯವರ ಕಾದಂಬರಿಯಲ್ಲಿನ ಅವರ ಆಲೋಚನೆ ಕುರಿತು ಹೇಳುತ್ತಾ ಪೈಯವರು ಚರಿತ್ರೆಯ ಅನುಭವ ವರ್ತಮಾನ ಬಾಂಧವ್ಯಕ್ಕೆ ಹೇಗೆ ನೆರವಾಗಬೇಕು ಎಂಬುದನ್ನು ಯೋಚಿಸುವರು ಎಂದು ಹೇಳುತ್ತಾರೆ. ಕಾದಂಬರಿಯಲ್ಲಿನ ಇತರೆ ಮುಖ್ಯ ಆಲೋಚನೆ ಎಂದರೇ ಅಸ್ಪಷ್ಟತೆಯಿಂದ ಮಾತು ಒಂದು ಕತೆಯಲ್ಲಿ ಹೇಗೆ ಸ್ಪಷ್ಟ ಅರ್ಥ ಪಡೆದುಕೊಳ್ಳಬಹುದು ಎಂಬುದನ್ನು ಹುಡುಕುವುದೇ ಇಲ್ಲಿ ಕಾದಂಬರಿಕಾರಿರಗೆ ಮುಖ್ಯ ಅನಿಸುತ್ತದೆ ಎನ್ನುತ್ತಾರೆ. ಪೈಯವರು ಸಾರಸ್ವತ ಲೋಕವನ್ನು ಒಂದು ಸಮಗ್ರ ಶೋಧನೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಿದ್ದಾರೆ ಎಂಬುದು ಇಲ್ಲಿ ಮುಖ್ಯ ಎಂದು ವಿಜಯಶಂಕರವರಿಗೆ ಅನಿಸುತ್ತದೆ. ಗೋಪಾಲಕೃಷ್ಣ ಅಡಿಗರನ್ನು ಈ ಸಂದರ್ಭದಲ್ಲಿ ನೆನೆಪಿಗೆ ತರುತ್ತಾ ಪೈಯವರು 'ಸಾವಯವ ಶಿಲ್ಪದ ಸಮಗ್ರೀಕರಣ' ವಿನ್ಯಾಸದಲ್ಲಿ ಉಳಿಯುವಂತೆ ಕಾದಂಬರಿಯ ಸೃಜನ ಸೃಷ್ಟಿಯನ್ನು ಕಾಪಾಡಿಕೊಂಡು ಬಂದಿದ್ದಾರೆ ಎಂದು ಹೇಳುತ್ತಾರೆ. ಎಸ್.ಆರ್. ವಿಜಯಶಂಕರವರ ಕಾದಂಬರಿಯ ಮುನ್ನುಡಿ ಕರಿಯನ್ನು ಕನ್ನಡಿಯಲ್ಲಿ ಹಿಡಿದಂತಾಗಿದೆ ಅಂದರೆ ಕಾದಂಬರಿ ಬೃಹತ್ ಆದರು ಸಹ ಅದರಲ್ಲಿ ಬರುವ ವಸ್ತು ಆಶಯವನ್ನು ಸೂಕ್ಷ್ಮತೆಯನ್ನು ಕಾಣುವಂತೆ ಮಾಡುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಅಲ್ಲದೆ ಕಾದಂಬರಿಯ ಎಲ್ಲ ಮುಖಗಳಿಂದಲು ಪರಿಪೂರ್ಣ ಎಂಬಂತೆ ಚಿತ್ರಣವಾಗಿದೆ ಅಂತಲು ಇವರ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಎಚ್. ದಂಡಪ್ಪನವರು ಸ್ವಪ್ನ ಸಾರಸ್ವತ ಕಾದಂಬರಿ ಕುರಿತು ಬರೆಯುವಾಗ ನಡೆದು ಹೋದ ಘಟನೆಗಳನ್ನು ಕಥನವನ್ನಾಗಿ ಹೇಳುವ ವ್ಯಾಪಾರ ಮನುಷ್ಯನ ನೆನಪಿನಷ್ಟೆ ಪ್ರಾಚೀನವಾದದ್ದು ಎನ್ನುತ್ತಾರೆ. ಸಮುದಾಯಗಳು ತಮ್ಮದೇ ಆದ ಪ್ರತಿಭೆ ಜಾಣ್ಮೆಯಿಂದ ಎಲ್ಲ ಕ್ಷೇತ್ರಗಳಲ್ಲೂ ಪಾಲ್ಗೊಂಡು ಸರ್ವತೋಮುಖ ಅಭಿವೃದ್ಧಿ

ಸಾಧಿಸಬೇಕು ಎನ್ನುತ್ತಾ ಸಮೂಹವು ಸದಸ್ಯರ ಅನ್ಯೋನ್ಯತೆಯನ್ನು ಒಳಗೊಂಡಿರುತ್ತದೆ. ಕಾದಂಬರಿಯೋ ಒಂದು ಸಾರಸ್ವತ ಸಮುದಾಯದ ಚಿತ್ರಣವನ್ನು ಮಾಡಿದೆ ಎಂದು ಹೆಳುತ್ತಾ. ಅಲ್ಲಿ ಸಮುದಾಯಗಳು ಹೇಗಿದ್ದವು ಹೇಗಿರಬೇಕು ಎಂಬುದರ ಬಗ್ಗೆ ಇಲ್ಲಿ ದಂಡಪ್ಪನವರು ಸಮೂಹ ಮತ್ತು ಸಮುದಾಯಗಳ ಕುರಿತು ಮೊದಲಿಗೆ ಹೇಳುತ್ತಾರೆ. ಈ ಕಾದಂಬರಿಯ ಬಹಳ ಮುಖ್ಯವಾದ ಧ್ವನಿಯೆಂದರೆ ಜಾತಿ ವ್ಯವಸ್ಥೆಯ ಸೂಕ್ಷ್ಮಗಳ ಬಗೆಗಿನ ಒಳನೋಟಗಳು ಕಥನದ ರೀತಿ, ನೀತಿ, ಪದ್ಧತಿ, ಜೀವನ ಕ್ರಮಗಳನಲ್ಲದೆ ಸ್ವಾಭಾವಿಕ ನಿಸರ್ಗದ ಹಿನ್ನೆಲೆ ಪರಿಸರಗಳನ್ನು ಮೈಗೂಡಿಸಿಕೊಂಡು ಸರ್ವಕಾಲಿಕವೂ ಸರ್ವಸ್ಥಾನಿಕವೂ ಆಗಿದೆ ಎನ್ನುತ್ತಾರೆ.

ಇಲ್ಲಿ ಹಲವು ಸಮಸ್ಯೆಗಳು ಹುಟ್ಟಿಕೊಂಡಿದ್ದರು ಅವುಗಳಲ್ಲಿ ಜಾತಿ ಎನ್ನುವದು ಪ್ರಮುಖ ಪಾತ್ರವಹಿಸುತ್ತದೆ ಎನ್ನುತ್ತಾರೆ. ಜಾತಿ ಪ್ರತ್ಯೇಕವಾಗಿ ಜಾತಿ ಸಮೂಹಗಳಾಗಿ ಉಳಿಯಬೇಕೆಂಬುದರ ಸಂಕೇತವೇ ಎಂಬ ಪ್ರಶ್ನೆ ಉದ್ಭುವಿಸಬಹುದು.ಆದರೆ ಕಾದಂಬರಿಯ ಧ್ವನಿಯೇ ಬೇರೆ ಎಂಬದು ಕಾದಂಬರಿಯನ್ನು ಸಂಪೂರ್ಣವಾಗಿ ಓದಿ ಮುಗಿಸಿದಾಗ ಮನವರಿಕೆಯಾಗುತ್ತದೆ ಎಂದು ಹೇಳುತ್ತಾರೆ. ಮತಾಂತರ ಎನ್ನುವದು ಹಿಂದಿನಿಂದಲು ನಮ್ಮ ದೇಶದಲ್ಲಿ ಬೆಳೆದು ಬಂದ ಒಂದು ಪದ್ಧತಿ ಎಂದು ಹೇಳುತ್ತೇವೆ. ರಾಜಕೀಯ ಆರ್ಥಿಕ ಸವಲತ್ತುಗಳನ್ನು ಪಡೆದುಕೊಳ್ಳಲು ಆಧುನಿಕ ಕಾಲದಲ್ಲಿ ಜಾತಿ ಜಾತಿಗಳ ಮಧ್ಯ ಪೈಪೋಟಿ ಬೆಳೆಯುತ್ತಿದೆ ಎನ್ನುವುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಕಾದಂಬರಿಯಲ್ಲಿ ಬರುವ ಬ್ರಾಹ್ಮಣ ಸಮುದಾಯ ಧರ್ಮ ಆತ್ಮಗೌರವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸದ್ದರೆ, ಕೆಳವರ್ಗದ ಸಮುದಾಯದವರು ಮತಾಂತರಗೊಂಡು ಹೊಸ ಆಸ್ಮಿತೆಯನ್ನು ಭೂಮಿ, ಶಿಕ್ಷಣ ಮತ್ತು ಹೊಸ ಬದುಕಿನ ಸಾಧ್ಯತೆಗಳನ್ನು ಪಡೆದುಕೊಂಡರು. ಈ ವಿಚಾರಗಳನ್ನು ಸಹ ಕಾದಂಬರಿ ದಾಖಲಿಸುತ್ತದೆ ಎನ್ನುತ್ತಾರೆ. ಇಲ್ಲಿ ಕಾದಂಬರಿ ಕುರಿತು ಹೇಳುವ ದಂಡಪ್ಪನವರು ಮತಾಂತರಗೊಳ್ಳುವುದು ಉತ್ತಮ ಎಂಬ ರೀತಿಯಲ್ಲಿ ಚಿತ್ರಣ ಮಾಡಲು ಹೊರಟಿದ್ದಾರೆ. ಆದರೆ ಸಾರಸ್ವತ ಬ್ರಾಹ್ಮಣರಲ್ಲಿ ಇದು ವಿರೋಧ ಎಂಬಂತೆ ಕಂಡು ಬರುತ್ತದೆ.

ವಸಾಹತು ಕುರಿತು ಹೇಳುತ್ತಾ ಒಂದು ಕಡೆ ಆಧುನಿಕತೆಯ ಸೌಲಭ್ಯಗಳಿಗೆ ಸ್ವಾಗತ ಮತ್ತೊಂದು ಕಡೆ ತಮ್ಮ ಸಂಪ್ರದಾಯ, ಆಚರಣೆ, ಧರ್ಮ ಇವುಗಳ ಉಳಿವಿಗಾಗಿ ಹೋರಾಟ ಇವು ಎರಡು ವಶಹತು ಕಾಲದ ಮುಖ್ಯ ಲಕ್ಷಣ ಎನ್ನುತ್ತಾರೆ. ವಲಸೆ ಬರೆ ವಲಸೆ ಆಗದೆ ರಾಜಕಾರಣದ ಸೂಕ್ಷ್ಮಗಳು ಭೂಮಿಯ ಪ್ರಶ್ನೆ ತನ್ನ ಸಮುದಾಯದಲ್ಲಿ ಕುಟುಂಬದಲ್ಲಿ ಹುಟ್ಟಿಕೊಂಡ ಸ್ವಾರ್ಥ, ಅಸೂಯೆ, ದ್ವೇಷಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಬದುಕನ್ನು ಕಟ್ಟಿಕೊಳ್ಳುವ ಆಶಯವಾಗಿ ಇಲ್ಲಿನ ವಲಸೆಯ ಆಶಯ ಬಂದಿದೆ ಎನ್ನುತ್ತಾರೆ.ಇವರ ದೃಷ್ಟಿಕೊನ ಕಾದಂಬರಿಯಲ್ಲಿರುವ ಸೂಕ್ಷ್ಮತೆಯನ್ನು ಸಹ ಎತ್ತಿತೊರಿಸುವುದಾಗಿದೆ. ವಲಸೆ ಎನ್ನುವುದನ್ನು ಹಲವು ಮುಖದ ಹಿನ್ನೆಲೆಯಲ್ಲಿ ಗುರ್ತಿಸುತ್ತಾರೆ. ರಾಮಾಯಣ, ಮಹಾಭಾರತದಿಂದ ಇಂದಿನ

ತನಕ ಹಲವಾರು ಪ್ರಮಾಣದ ಕಥಾನಕಗಳು ಬಂದಿವೆ. ಗೋಪಾಲಕೃಷ್ಣ ಪೈ ಅವರು ಇಲ್ಲಿನ ಪ್ರಯಾಣವನ್ನು ಕಾದಂಬರಿಯ ಒಂದು ಪ್ರಮುಖ ಆಶಯವನ್ನಾಗಿ ದುಡಿಸಿಕೊಂಡಿದ್ದಾರೆ ಎಂಬುದು ದಂಡಪ್ಪನವರು ಅಭಿಪ್ರಾಯವಾಗಿದೆ. ಆದರೆ ಪ್ರಯಾಣದ ಜೊತೆಗೆ ಒಂದು ಸಾರಸ್ವತ ಸಮುದಾಯವೆ ಬಂದಿರುವುದು ಗೋಪಾಲಕೃಷ್ಣ ಪೈರವರ ವಿಶೇಷತೆಯಾಗಿದೆ. ಈ ಮಾತನ್ನು ಇಲ್ಲಿ ಮರೆಯುವಂತಿಲ್ಲಾ ಯಾಕಂದರೆ ಸಮುದಾವೇ ವಲಸೆ ಹೋಗುವ ಕಾದಂಬರಿ ಹುಟ್ಟಿಕೊಂಡಿರುವುದು ಇದೆ ಮೊದಲು.

ಈ ಕಾದಂಬರಿ ಸಂಯುಕ್ತತೆಯನ್ನು ಬಯಸುವ ವಿಶಾಲ ಹೃದಯವಂತಿಕೆಯನ್ನು ಸೂಚಿಸುತ್ತದೆ. ಅಲ್ಲದೆ ವಲಸಿಗರಲ್ಲಿ ಈ ಮನೋಭಾವನೆ ಇರುತ್ತದೆ ಎನ್ನುತ್ತಾ ಇದರ ಇನ್ನೊಂದು ವಿಶೇಷತೆ ಎಂದರೇ ಒಂದು ದೀರ್ಘ ಪ್ರಮಾಣ ವಿನ್ಯಾಸದಲ್ಲಿಯೇ ರಚನೆಗೊಂಡಿದೆ. ಬದುಕು ಕೂಡಾ ಇಂದು ಪ್ರಯಾಣ ಎಂದು ಹೇಳುವುದು ಈ ಅರ್ಥದಲ್ಲಿಯೇ ಇರಬೇಕು ಎನ್ನುತ್ತಾರೆ. ಆಧುನಿಕ ಪರಿಣಾಮಗಳಲ್ಲಿ ರಾಮಚಂದ್ರ ಪೈ ಎದುರಿಗೆ ಮಕ್ಕಳು ಮೊಮ್ಮಕ್ಕಳು ಕುಟುಂಬದ ಎಲ್ಲಾ ಸದಸ್ಯರು ಸಾವು ಒಂದಾಗಿದೆ ಎಂದು ಹೇಳುತ್ತಾರೆ. ಗತಿತರ್ಕವನ್ನು ಸೂಚಿಸುವ ಇಂತಹ ದರ್ಶನದಲ್ಲಿ ಸಾಹಿತ್ಯ ಕೃತಿಯ ಸೌಂದರ್ಯಾತ್ಮಕ ಹಾಗೂ ಚಾರಿತ್ರಿಕ ಅಂಶಗಳು ಮೇಳವಿಸುತ್ತವೆ. ಈ ದೃಷ್ಟಿಯಿಂದ ಮಲೆಗಲ್ಲಿ ಮದುಮಗಳು, ಕಾನೂನು ಹೆಗ್ಗಡತಿ, ರಾಮಾಯಣ, ಚೆನ್ನಬಸವನಾಯಕ ಮುಂತಾದ ಕೃತಿಗಳು ಕಟ್ಟಿ ಕೊಡುವ ಜೀವನ ದರ್ಶನದಲ್ಲಿಯೇ ಚಾರಿತ್ರಿಕ ಗತಿಯ ಸ್ವರೂಪ ಕೊಡುತ್ತದೆ. ಇದೇ ಸಾಲಿಗೆ ಸ್ವಪ್ನ ಸಾರಸ್ವತ ಕಾದಂಬರಿ ಸೇರುತ್ತದೆ ಎಂದು ಹೇಳುತ್ತಾರೆ. ಇಲ್ಲಿ ಕಾದಂಬರಿಯ ಒಳಹರಿವುಗಳಿಗೆ ಹೆಚ್ಚು ಮಹತ್ವ ನೀಡದೆ ಬರೆದಿರುವುದು ಕಂಡು ಬರುತ್ತದೆ.

ಇನ್ನೊಂದೆಡೆ ಶ್ರೀನಿವಾಸ ವೈದ್ಯರವರು ಸ್ವಪ್ನ ಸಾರಸ್ವತ ಕಾದಂಬರಿಯೂ ಮಹಾಭಾರತದಂತೆ ಕಾಣಿಸಿಕೊಳ್ಳುತ್ತದೆ ಎನ್ನುತ್ತಾರೆ. ಕಾದಂಬರಿಯನ್ನು ಓದಿದ ನಂತರ ಇದರಲ್ಲಿ ಬರುವ ಆಕ್ರಮಣ, ವಲಸೆ, ಮತಾಂತರ, ದಾಯಾದಿಕಲಹ, ಶಾಪಗಳು, ಕಾಲಪುರುಷನ ಆಗಮನ ಎಲ್ಲವು ಕಥೆಯನ್ನು ವಿರಾಟ ಸ್ವರೂಪದತ್ತ ವೈಯುತ್ತವೆ ಎನ್ನುತ್ತ ಮಹಾಭಾರತದಲ್ಲಿ ಬರುವ ದಾಯಾದಿ ಕಲಹಗಳು ಈ ಕಾದಂಬರಿಯಲ್ಲಿ ಮೂಡಿ ಬಂದಿವೆ. ಮಹಾಭಾರತದಲ್ಲಿ ವನವಾಸ ಎಂಬ ವಿಷಯದ ಬದಲಾಗಿ ಕಾದಂಬರಿಯಲ್ಲಿ ವಲಸೆಯಂಬುದನ್ನು ನೋಡುತ್ತೇವೆ. ಕಲ್ಪನೆಯಲ್ಲಿ ರಚನೆಯದರು ಸಹ ಕದಂಬರಿಯೋ ಇತಿಹಾಸದಲ್ಲೆ ಬರುವ ಮಹಾಭಾರತದಂತಹ ಬೃಹತ ಕೃತಿಗಳ ವಸ್ತುವನ್ನು ಇಲ್ಲಿ ನೆನಪಿಗೆ ತರುತ್ತದೆ. ಚರಿತ್ರೆಯ ಆಳವಾದ ಅಧ್ಯಯನವಾಗಿರುವ 'ಸ್ವಪ್ನ ಸಾರಸ್ವತ' ಕಾದಂಬರಿ ಸಮೃದ್ಧ ಕಲ್ಪನೆ ಇತಿಹಾಸದ ಸಮ್ಮಿಶ್ರ ಫಲವಾಗಿದೆ. ಒಂದು ಎಪಿಕ ಪ್ರಮಾಣದ ರುದ್ರ ಭಯಾನಕ ದುರಂತದಲ್ಲಿ ಪರ್ಯಾವಸಾನ ಗೊಳ್ಳುತ್ತಿದ್ದಾಗ ಕೂಡಾ ದೈವದ ಬೆನ್ನು ಹಿಡಿದು ಅಮೂರ್ತ ಭವಿಷ್ಯದಡೆಗೆ ಸಾಗಿದ ಇದೊಂದು

ಸಾರಸ್ವತ ಮಹಾಭಾರತ ಒಂದು ಅದ್ಭುತ ಅನುಭವ ಕೊಡುವ ಕೃತಿಯಾಗಿದೆ ಎಂದು ಶ್ರಿನಿವಾಸ ವೈದ್ಯರು ಹೇಳುತ್ತಾರೆ. ಆದರೆ ಇವರು ಹೇಳಿದಂತೆ ಸ್ವಪ್ನ ಸಾರಸ್ವತ ಕಾದಂಬರಿ ಮಹಾಭಾರತದಂತೆ ಕಂಡು ಬಂದಿದೆ ಎನ್ನುತ್ತಾರಲ್ಲಾ ಅಲ್ಲಿ ಪಾಂಡವರು ಪಗಡಿ ಆಟದ ಕುತಂತ್ರಕ್ಕೆ ಬಲಿಯಾಗಿ ವನವಾಸಕ್ಕೆ ಹೋದರೆ ಇಲ್ಲಿ ಸಾರಸ್ವತರು ಮತಾಂತರ ಹಿನ್ನಲೆಯಲ್ಲಿ ತಮ್ಮ ಆಚರಣೆ ಧರ್ಮವನ್ನು ಉಳಿಸಿಕೊಳ್ಳಲು ವಲಸೆ ಹೊಗುತ್ತಾರೆ. ಮಹಾಭಾರತದಲ್ಲಿ ಕೊನೆಗೆ ಪಾಂಡವರು ನ್ಯಾಯ ಪಡೆದಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಸಮುದಾಯ ಯಾವ ರೀತಿಯ ನ್ಯಾಯ ಪಡೆಯುತ್ತಾರೆ? ಎಂಬ ಪ್ರಶ್ನೆಗೆ ಉತ್ತರಿಸುವುದೇ ಸಾಧ್ಯವಾಗಲಾರದು. ಕಾದಂಬರಿ ಮಹಾಭಾರತದಂತೆ ವಿರಾಟ ಸ್ವರೂಪ ಪಡೆದರು ಸಹ ತನ್ನ ವಿಸ್ತರಣೆಯನ್ನು ಮೀರಿಲ್ಲಾ ಎಂಬುವುದು ಶ್ರೀವಾಸ ವೈದ್ಯರು ಬಹುಶ: ಅರಿಯದೇ ಹೋಗಿರಬಹುದು. ವನವಾಸಕ್ಕೆ ಅಲ್ಲಿ ಆರು ಜನ ಮಾತ್ರ ಹೋದರೆ ಈ ಕಾದಂಬರಿಯಲ್ಲಿ ಸಾರಸ್ವತ ಸಮುದಾಯವೇ ವಲಸೆ ಹೋಗುತ್ತದೆ. ಇಲ್ಲಿಯ ಸಹ ಆಕಾಶ ಭೂಮಿ ಸಂಬಂಧದಂತೆ ಕಂಡು ಬಂದಿದೆ.

ಎಸ್.ದಿವಾಕವರು ಒಂದು ಕಾದಂಬರಿಗೆ ಎಲ್ಲಾ ಲಕ್ಷಣಗಳು ಹೊಂದಿರುವ ಜೊತೆಗೆ ವಿಶಿಷ್ಟ ವಿಷಯವನ್ನು ಹೊಂದುವ ಮೂಲಕ 'ಸ್ವಪ್ನ ಸಾರಸ್ವತ' ಕಾದಂಬರಿ ವಿಭಿನ್ನವಾಗಿ ಕಂಡು ಬಂದಿದೆ ಎನುತ್ತಾರೆ. ಇದು ಸರಸ್ವತ ಬ್ರಾಹ್ಮಣರ ಜೀವನವನ್ನು ಹೇಳುತ್ತಾ ನಾನೂರು ವರ್ಷಗಳ ಹಿಂದೆ ಪೋರ್ಚುಗೀಸರ ಆಕ್ರಮಣ ಮತಾಂತರ, ಸಾವು, ನೋವು ವಲಸೆ ಹೊಗುವದು ಕೃಷಿ, ವ್ಯಾಪಾರ, ಧರ್ಮ, ನಂಬಿಕೆ, ಪ್ರೀತಿ ವಿಶ್ವಾಸ ಇವು ಎಲ್ಲವನ್ನು ಪಾತ್ರಗಳ ಮುಖಾಂತರ ಲೇಖಕರು ಕಾದಂಬರಿ ಪರದೇಯ ಮೇಲೆ ತರುತ್ತಾರೆ. ಇಲ್ಲಿಯೋ ಸಹ ಮುಖ್ಯವಾಗಿ ದಯಾದಿ ಕಲಹ ಕಾಣಿಸಿಕೊಳ್ಳುತ್ತದೆ ಎಂದು ಹೇಳುತ್ತಾರೆ.

ಕಾದಂಬರಿ ಅಸಂಖ್ಯಾತ ಪಾತ್ರಗಳನ್ನು ಅವು ತಮ್ಮದೇ ಸ್ಪಷ್ಟವಾಗಿ ಗೊತ್ತಿರದ ಹೋರಾಟದಲ್ಲಿ ತೋಡಗಿರುವುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ವಿರಾಟ ಕಥನವಾಗಿದೆ. ಇದರ ವಿವರ ಸಮೃದ್ಧಿ ಹಾಗೂ ಧ್ವನಿಶಕ್ತಿ ಸಂಕ್ಷೋಭೆಯ ಕಾಲದ ಸಮುದಾಯವೊಂದನ್ನು ಇಡಿಯಾಗಿ ಕಟ್ಟಿಕೊಡುವಷ್ಟು ಪ್ರಭಾವಶಾಲಿಯಾಗಿ ಕಾದಂಬರಿ ಕಾಣಿಸಿಕೊಳ್ಳುತ್ತದೆ ಎಂಬುದು ಎಸ್.ದಿವಾಕರ ಅವರ ಅಭಿಪ್ರಾಯ. ಇವರು ಹೇಳುವಂತೆ ಕಾದಂಬರಿಯೋ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ವಿರಾಟ ಕಥನ ಎನ್ನುವುದು ಇತಿಹಾಸ ಮತ್ತು ಕಲ್ಪನೆಯನ್ನು ಮರೆಮಾಚಿ ನೈಜತೆ ಎಂಬಂತೆ ಕಾದಂಬರಿ ಮೂಡಿ ಬಂದಿದೆ ಎಂಬುದು ಇಲ್ಲಿ ಪ್ರಶ್ನೆಯಾಗಿ ಹುಟ್ಟಿಕೊಳ್ಳುತ್ತದೆ. ಇದಕ್ಕೆ ವಿರೋಧವಾಗಿ ಹೇಳುವುದಾದರೆ ಕಾದಂಬರಿಯ ರಚನೆಯನ್ನು ನಿರೂಪಕರು ಅಷ್ಟೊಂದು ಜಾಗರುಕತೆಯಿಂದ ಮಾಡಿದ್ದಾರೆ ಎಂದು ಹೇಳಿದರೆ ಪ್ರಶ್ನೆಗೆ ಉತ್ತರ ಸಿಕ್ಕಂತಾಗುತ್ತದೆ.

ಕೆ.ಸತ್ಯನಾರಾಯಣರವರು 'ಸ್ವಪ್ನ ಸಾರಸ್ವತ' ಕಾದಂಬರಿಯನ್ನು ಸಾರಸ್ವತ ಬ್ರಾಹ್ಮಣ ಕನಸು, ಅನುಭವ, ನೋವು ವಿಷಾದಗಳ ನೆಲೆಯಲ್ಲಿ ನೋಡುತ್ತಾರೆ. ಕಾದಂಬರಿಯ ವಸ್ತು ವಲಸೆ ಆದರು ಸಹ ಅದು ಕೇವಲ ಮತಾಂತರ ಹಿನ್ನಲೆಯಲ್ಲಿ ಮಾತ್ರ ಹುಟ್ಟಿಕೊಳ್ಳದೆ. ಅವರ ಉದ್ಯೋಗಕ್ಕಾಗಿ ಅಂದಿನ ಕಾಲದ ಯಂತ್ರಗಳ ಉಗಮವಾಗಿದ್ದು ಈ ಹಿನ್ನೆಲೆಯೇ ಅವರನ್ನು ವಲಸೆ ಹೊಗುವಂತೆ ಪ್ರೇರೇಪಿಸುತಿತ್ತು ಎನ್ನುತ್ತಾರೆ. ಮನುಷ್ಯ ಜೀವನದಲ್ಲಿ ಕಾಣುವ ಎಲ್ಲ ಕಷ್ಟನಷ್ಟ ಸಮಯ ಸಂದರ್ಭಗಳು ಇಲ್ಲಿ ನಿಯಮಬದ್ಧವಾಗಿ ಬಳಕೆಗೊಂಡಿರುವುದನ್ನು ಕಾಣುತ್ತೇವೆ. ವಲಸೆ ಸಂದರ್ಭದ ಎಲ್ಲ ಅನುಭವಗಳು ಇಲ್ಲಿ ಮುಖ್ಯವೆನಿಸಿ ಕೊಳ್ಳುತ್ತವೆ.

ಇವುಗಳ ಮಧ್ಯ ತಮ್ಮ ಪೂರ್ವಜರ ತಲೆಮಾರಿನಿಂದ ತಲೆಮಾರಿಗೆ ಹರಡಿಕೊಂಡಿರುವ ನಾಗಶಾಪ ಜೊತೆಗೆ ಧಡ್ಡನ ಸಾವು ಇನ್ನೊಂದು ಶಾಪವಾಗಿ ಪೈ ಕುಟುಂಬಕ್ಕೆ ಅಂಟಿಕೊಳ್ಳುವದು ದಾಯಾದಿ ಕಲಹಗಳು ಅನೈತಿಕ ಸಂಬಂಧಗಳು ಕಾದಂಬರಿಯಲ್ಲಿ ಹಲವು ಮುಖಗಳಾಗಿ ಕಾಣಿಸಿಕೊಳ್ಳುತ್ತವೆ. ಲೇಖಕರು ಕಾದಂಬರಿಯನ್ನು ಇತಿಹಾಸದ ಜೊತೆಗೆ ತಮ್ಮ ಕಲ್ಪನೆಯನ್ನು ಸೇರಿಸಿ ರಚನೆಮಾಡಿದರು ಕೂಡಾ ಕಾದಂಬರಿಯನ್ನು ಓದುವಾಗ ಅದು ವರ್ತಮಾನ ಕಾಲದಲ್ಲಿದೆ ಎಂಬ ಬಾಸವಾಗುತ್ತದೆ. ಎಂದು ಹೇಳುತ್ತಾ ಸಮಗ್ರತೆಯಿಂದಾ ಕೂಡಿದ ಒಂದು ಬೃಹತ್ ಕಾದಂಬರಿಯಾಗಿ ಮನುಷ್ಯರ ಕನಸು ಅನುಭವ, ನೋವು ವಿಷದಗಳ ಮೂಲಕ ಸಂವೇದನಾಶೀಲವಾಗಿ ಗ್ರಹಿಸುವುದೆ ಈ ಕಥಾ ಇತಿಹಸದ ಅಗ್ಗಳಿಕೆಯಾಗಿದೆ ಅನ್ನುತ್ತಾರೆ. ಕಾದಂಬರಿ ಪರಿಪೂರ್ಣತೆಯಿಂದಾ ಕೂಡಿದೆ ಎಂಬ ಇವರ ಅಭಿಪ್ರಾಯವು ಮಹತ್ವವಾಗಿದೆ. ಇವರು ನಿರೂಪಕರ ಬಾವನೆಗಳ ಮೂಲಕ ಕಾದಂಬರಿಯನ್ನು ಅರ್ಥಮಾಡಿ ಕೊಂಡಿರುವುದು ಇಲ್ಲಿ ಸ್ಪಷ್ಟವಾಗುತ್ತದೆ.

ಎಸ್.ಮನು ಚಕ್ರವರ್ತಿಯವರು ಸ್ವಪ್ನ ಸಾರಸ್ವತ ಕಾದಂಬರಿಯೂ ಇತಿಹಾಸದ ಪ್ರತಿಬಿಂಬವಾಗಿದೆ ಎಂದು ಹೇಳುತ್ತಾರೆ.ಇದು ರಾಶಿರಾಶಿ ಐತಿಹಾಸಿಕ ವಿವರಗಳ ಬಳಕೆಯ ಪ್ರತಿಫಲವಾಗಿ ರಚನೆ ಗೊಂಡಂತ ಕೃತಿಯಾಗಿದೆ. ಇದು ಸಾರಸ್ವತ ಕೊಂಕಣಿ ಸಮಾಜದವರ ಕಥೆಯಾದರು ಸಹ ಒಂದು ಮಹಾಕಾವ್ಯದ ಆಯಾಮದ ಹರಹನ್ನು ಹೊಂದಿದೆ ಎನ್ನುತ್ತಾರೆ. ಒಂದು ಚಾರಿತ್ರಿಕ ಹಿನ್ನಲೆಯ ಕತೆಯಲ್ಲಿ ಹೊಸ ಒಂದು ವಿಚಾರವೂ ತಾನೇ ತಾನಾಗಿ ಮೂಡುವುದರ ಮೇಲೆ ಒತ್ತು ಬೀಳುತ್ತದೆ ಎಂದು ಹೇಳುತ್ತಾರೆ. ಈ ಹೊಸ ಆವಿಷ್ಕಾರವೂ ಸಾಂಕೇತಿಕ ರೂಪಕತೆಯು ಅದ್ಭುತವಾಗಿ ಮೇಳೈಸದೆ. ಅದು ಸಾಂಕೇತಿಕ ರೂಪಕಾಲಂಕಾರಗಳ ಕಾದಂಬರಿಯಾಗಿದೆ. ಇದು ಎಷ್ಟೇ ಕ್ರೌರ್ಯ, ಹಿಂಸೆ, ರಕ್ತಪಾತಗಳ ಬಗ್ಗೆ ಇರುವ ಕೃತಿಯಾದರೂ ಶಕ್ತಿ ಇಲ್ಲದ 'ಅಯ್ಯೋ ಪಾಪ' ದ ಸ್ಥಿಯಲ್ಲಿರುವ ಸಮುದಾಯದ ದುರಂತ ಕಥೆ. ಎಷ್ಟೇ ದುರಂತಗಳ ಚಿತ್ರಣಗಳಿದ್ದರೂ ಬದುಕುವ ಚಲದ ಚೈತನ್ಯದ ಕಥೆ ಎಂದು ಹೇಳುವ ಮನುಚಕ್ರವರ್ತಿಯವರು ಎಲ್ಲ ವಿದ್ವಾಂಸರಿಗಿಂತಾ ಭಿನ್ನವಾಗಿ ಈ ಕಾದಂಬರಿಯನ್ನು ಗ್ರಹಿಸಿದ್ದಾರೆ. ಸಾರಸ್ವತರನ್ನು ಇವರು ಮೃದುತ್ವ ಭಾವನೆಗಳ ಮೂಲಕ ನೋಡುತ್ತಾರೆ.

ಕಾದಂಬರಿ ಮಹಾಭಾರತದಂತೆ ವಿರಾಟ ಸ್ವರೂಪ ಹೊಂದಿದರು ಕೂಡಾ ಎಲ್ಲಿಯೂ ಆಕ್ರೋಶದ ಬಗ್ಗೆ ಮುಕ್ತವಾಗಿಲ್ಲ ಎಲ್ಲವನ್ನು ಸೌಮ್ಯವಾಗಿಯೇ ಚಿತ್ರಿಸಿದ್ದಾರೆ.

ಅನ್ಯಾಯವನ್ನು ಎದುರಿಸಲಾಗದೇ ವಲಸೆ ಹೊಗುವ ಸಾರಸ್ವತ ಬ್ರಾಹ್ಮಣರ ಪರವಾದ ಒಮ್ಮತ ಮನುಚಕ್ರವರ್ತಿಯವರದ್ದಾಗಿದೆ. ಇದು ಅವರು ಕಂಡುಕೊಂಡ ಸತ್ಯವೋ? ಇಲ್ಲಾ ಕಾದಂಬರಿಕಾರರ ಪರಿಣಾಮವೂ ಇದರ ಹಿಂದೆ ಇದೆ ಎಂಬುದು ಇಲ್ಲಿ ಪಶ್ನೆಯಾಗಿ ಕಾಣಿಕೊಳ್ಳುತ್ತದೆ. ಕಾದಂಬರಿಯಲ್ಲಿ ಹಲವು ವಿಷಯಗಳ ಪ್ರಸ್ತಾಪ ಇದ್ದರು ಸಹ ಅವುಗಳಿಗೆ ಹೆಚ್ಚು ಒತ್ತನ್ನು ನೀಡದೆ ಕಾದಂಬರಿ ಸಾಂಕೇತಿಕ ರೂಪಕಾಲಂಕಾರಗಳ ಕಾದಂಬರಿಯಾಗಿದೆ ಎಂದು ಹೇಳುತ್ತಾರೆ. ಕಾದಂಬರಿ ಜೀವನ ಚರಿತ್ರೆಯ ಕಥಾನಕವಾಗದೇ ಪೈಯವರ ವ್ಯಕ್ತಿಗತ ಹುಡುಕಾಟವಾಗಿಯು ಸಮುದಾಯದ ನೋವಿನ ಹುಡುಕಾಟವಾಗಿಯು ಮೂಡಿ ಬಂದಿದೆ. ಇತಿಹಾಸವನ್ನು ಹೇಗೆ ಬರೆಯಬಹುದು ಎಂಬುದಕ್ಕೆ 'ಸ್ವಪ್ನ ಸಾರಸ್ವತ' ಅತ್ಯತ್ತಮ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ.

ಮಹಾಲಿಂಗರವರು ಕಾದಂಬರಿಯಲ್ಲಿ ಬರುವ ನಾಗ್ಡೊ ಬೇತಾಳನ ಕುರಿತು ಹೇಳುತ್ತಾರೆ. ಇವರ ಗ್ರಹಿಕೆ ಭಿನ್ನವಾಗಿ ಕಂಡು ಬರುತ್ತದೆ. ಕಾದಂಬರಿಯ ಉದ್ದಕ್ಕೂ ಬರುವ ಕಾಲಪುರುಷ ಎಂದೆ ಕರೆಸಿಕೊಳ್ಳುವ ನಾಗ್ಡೊ ಬೇತಾಳನ ಪಾತ್ರ ಕಾದಂಬರಿಯ ಜೀವಾಳವಾಗಿದೆ. ಸಾರಸ್ವತ ಸಮುದಾಯಗಳು ಗೋವಾದಿಂದ ವಲಸೆ ಹೊಗುವಾಗ ದಂಡೆ ಯುದ್ಧಕ್ಕೂ ಹುಗಿದ ಹೆಜ್ಜೆ ಗುರುತುಗಳನ್ನು ಹೆಕ್ಕಬೇಕಾದರೆ ಕಡಲ ಅಲೆಗಳನ್ನು ಒಮ್ಮೆ ನಿಲ್ಲಿಸಿ ಹುಡುಕಬೇಕಿತ್ತು. ಈ ಸಾಹಸಕ್ಕೆ ನಿಮ್ಮ ಜೊತೆಗೊಡಿದವ ನಾಗ್ಡೊ ಬೇತಾಳ. ಅವನ ಎದೆ ಬೇಯುವ ಕೆಂಡಗಳನ್ನು ನೇವರಿಸಬಲ್ಲ ಕಾಲವನ್ನೆ ಹರಿದು ಕೌಪೀಲ ಮಾಡಬಲ್ಲ. ಅವನ ಮಾಂತ್ರಿಕ ಸ್ವಪ್ನಗಳಿಂದ ಬಂದ ಈ ಸಾರಸ್ವತ ದಾರಿಹೋಕರು ಮಾನವ ಸಮುದಾಯಗಳ ಮಹಾ ಪಯಣದ ಕತೆಯಾಗಿ ಹೋದರು ಎಂದು ಹೇಳುತ್ತಾರೆ.ಇವರ ಗ್ರಹಿಕೆ ಕಾದಂಬರಿಯನ್ನು ಮುನ್ನಡಿಸಿಕೊಂಡು ಹೋಗುವ ಪಾತ್ರದ ಕಡೆವಾಲಿದೆ. ಅಲ್ಲದೆ ಒಂದು ಅಸ್ಪಷ್ಟತೆಯ ಮಾತು ಕಾದಂಬರಿಯಲ್ಲಿ ಹೇಗೆ ಸ್ಪಷ್ಟವಾಗಿ ಗೋಚರಿಸುತೆದೆ ಎಂದು ಹೇಳುವದು ಇಲ್ಲಿ ಮುಖ್ಯ ಅನಿಸುತ್ತದೆ. ಈ ಪಾತ್ರದ ಮುಖೇನ ಸಾರಸ್ವತ ಧರ್ಮ ನಂಬಿಕೆಗಳು ಜಾಗ್ರತಗೊಳ್ಳುತ್ತಾ ಹೋಗುತ್ತವೆ. ಮಹಾಲಿಂಗನವರು ಕಾದಂಬರಿಯ ಸಮಗ್ರತೆಯನ್ನೆ ತಿಳಿದಿದ್ದರು ಕೂಡಾ ಅದರಲ್ಲಿ ಮುಖ್ಯ ಅನಿಸಿಕೊಳ್ಳುವ ನಾಗ್ಡೂ ಬೇತಾಳನ ಪಾತ್ರದ ಬಗ್ಗೆ ಹೇಳುವುದು ಮುಖ್ಯ ಅಂಶಗಳಲ್ಲಿ ಒಂದಾಗಿದೆ.

ನರೇಂದ್ರ ಪೈ ಅವರು 'ಸ್ವಪ್ನ ಸಾರಸ್ವತ' ಒಂದು ಮರು ಓದು ಎಂಬ ಲೇಖನದಲ್ಲಿ ಕಾದಂಬರಿಯ ಕುರಿತು ಹೇಳುತ್ತಾರೆ. ನಾನೊಬ್ಬ ಸಾರಸ್ವತ ಬ್ರಾಹ್ಮಣನಾಗಿ ಉಳಿದ ಓದುಗರಿಗಿಂತ ಕೊಂಚವೇ ಭಿನ್ನವಾಗಿ ಈ ಕಾದಂಬರಿಯನ್ನು ದಕ್ಕಿಸಿಕೊಳ್ಳುವ ನೆಲೆಯೋ ನನಗಿದೆ ಎಂದು ಹೇಳುತ್ತಾರೆ. ಕಾದಂಬರಿಯಲ್ಲಿ ಬರುವ ಪದ್ಧತಿಗಳು

ಇಂದಿನ ನೈಜತೆಯಲ್ಲಿ ಹೇಗೆ ಅಡವಾಗಿವೆ ಎಂಬುದು ಹೇಳುತ್ತಾ ನರೇಂದ್ರ ಪೈ ರವರು ಮೊದಲಿಗೆ 'ಧಡ್ಡ'ನ ಕುರಿತಾಗಿ ಹೇಳುತ್ತಾರೆ. ವಧುವರರ ಪಕ್ಕದಲ್ಲಿ ಮಕ್ಕಳನ್ನು ಜೊತೆ ಕೂರಿಸುವ ಕ್ರಮ ಸಾರಸ್ವತದಲ್ಲಿ ಮಾತ್ರ ಇರುವುದಲ್ಲ ಬೇರೆ ಕೆಲವು ಜಾತಿಯವರಲ್ಲಿ ಕ್ರಿಶ್ಚಿಯನ್ನರಲ್ಲಿ ಇದನ್ನು ಕಂಡಿದ್ದೇನೆ ಎನ್ನುತ್ತಾರೆ. ವರನ ಜೊತೆ ಮಾತ್ರವಲ್ಲ ವಧುವಿಗೂ ಅಂಥ ಒಂದು ಜೊತೆ ಕೂರಿಸುವದು ಕೂಡಾ ಇದೆ. ಮತ್ತೆ ಕಾದಂಬರಿಯ 'ಧಡ್ಡ' ನ ಹಿಂದೆ ನಿಜವಾಗಿಯೂ ಇರುವುದು 'ಧಡ' ಆಗಿರಬಹುದೆಂಬ ಗುಮಾನಿ ಇದೆ ಎಂದು ಹೇಳುತ್ತಾರೆ.[೩] ಉಳಿದ ವಿದ್ವಾಂಸರು ಕಾದಂಬರಿಯನ್ನು ಓದಿ ಗ್ರಹಿಸಿ ಕೊಂಡು ಹೇಳಿದರೆ ಈ ನರೇಂದ್ರ ಪೈ ಅವರು ಕಾದಂಬರಿಯಲ್ಲಿ ಬರುವ ಕುಟುಂಬಕ್ಕೆ ಸೇರಿದವರಾಗಿ ನಿರೂಪಕರ ಸಂಬಂಧಿಗಳಾಗಿ ಕಾದಂಬರಿಯ ಓದುಗರಾಗಿ ಗ್ರಹಿಸಿದ್ದಾರೆ. ಈ ಎಲ್ಲ ನೆಲೆಗಳಿಂದ ಕಾದಂಬರಿಯನ್ನು ಗ್ರಹಿಸುತ್ತಾ ಇದರಲ್ಲಿ ಬಳಕೆ ಆದ ಪದ್ಧತಿ ಪಾತ್ರಗಳು ಇಂದಿನ ಆಧುನಿಕತೆಯಲ್ಲಿ ಯಾವ ಸ್ಥಾನ ಪಡೆದು ಕೊಂಡಿವೆ ಎನ್ನುವದನ್ನು ತಿಳಿಸಲು ಹೊರಟಿದ್ದಾರೆ.

ಈ ಕಾದಂಬರಿ ನನಗೆ ಕೊಂಕಣಿ ಸಮುದಾಯದ ರೀತಿನೀತಿ ಮತ್ತು ಒಟ್ಟಾರೆ ಮನೋಭೂಮಿಕೆಯನ್ನು ಸಮಗ್ರತೆಯಲ್ಲಿ ಕಟ್ಟಿಕೊಡುತ್ತಿರುವುದಕ್ಕಾಗಿ ಮುಖ್ಯ ಎನ್ನುತ್ತಾರೆ. ವಲಸೆಯೆಂಬುದು ಪಾರಂಪರಿಕವಾಗಿ ಒಂದು ಸಹಜ ಸ್ಥಿತಿಯನ್ನಾಗಿ ಸ್ವೀಕರಿಸುವ ಒಂದು ಸಮುದಾಯ ಅದು ಯಾವುದೇ ಆಗಿರಲಿ ಅದರ ಮನೋಭೂಮಿಕೆ ಸಶಕ್ತ ವಿವರಗಳಲ್ಲಿ ಕಟ್ಟಿ ಕೊಡುತ್ತಿರುವುದಕ್ಕಾಗಿಯೂ ಮುಖ್ಯ. ಸ್ವಪ್ನ ಸದೃಶವಾದ ವಿವರಗಳ ಮುಖದ ನಾಗ್ಡೊ ಬೇತಾಳನ ಅಸ್ತಿತ್ವವನ್ನು ಯಾರು ಸತ್ಯವೆಂದು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಕಾದಂಬರಿಯಲ್ಲಿ ಬರುವ ಅಂಜನ, ಭವಿಷ್ಯ, ಜಾತಕ, ಮಾಟ, ದೈವಗಳಿಗೆ ಗುಡಿ ಮುಂತಾದವು ಒಂದು ನೆಲೆಯಿಂದ ಶಾಪ, ಪ್ರತಿ ಹಠಮಾರಿತನ, ಆಣೆ ಭಾಷೆಯಂಥ ಸ್ವಯಂಕೃತ ಬಂಧನಗಳು ಇನ್ನೊಂದು ನೆಲೆಯಿಂದ ಮನುಷ್ಯನ ನಡವಳಿಕೆಯನ್ನು ಪ್ರತಿಬಂಧಿಸುವಾಗಲೇ ಇವುಗಳಲ್ಲಿ ಇದ್ದೂ ಇಲ್ಲದಂತಿರುವ ಒಂದು ಸಂಯೋಜನೆ ಚಂದ ಬದುಕಿನ ಒಟ್ಟಂದವನ್ನು ನಮಗೆ ಕಟ್ಟಿಕೊಡುತ್ತದೆ. ಸ್ವಪ್ನದಂತೆ ಕಾಣುವ ಹಲವಾರು ಸಂಗತಿಗಳು ಸತ್ಯದಂತೆಯೊ ಅರ್ಧ ಕಲ್ಪನೆಯಂತೆಯೂ ಕಾಣಿಸುವಾಗಲೇ ಮನುಷ್ಯ ಎಷ್ಟೊ ಸಂಗತಿಗಳಲ್ಲಿ ತನ್ನದೇ ಭ್ರಮೆ ಮತ್ತು ವಿಚಿತ್ರ ಸಂಜ್ಞೆಗಳಿಗೆ ಬದ್ಧನಾಗಿ ಬದುಕುತ್ತಿಲ್ಲ ಎನ್ನುವ ಸತ್ಯದ ಛಾಯೆಯಿದೆ ಎಂದು ಹೇಳುತ್ತಾರೆ. ಮನುಷ್ಯ ಪ್ರಬುದ್ಧತೆಯ ಹೆಸರಿನಲ್ಲಿ ಅನೇಕ ಒಳ್ಳೆಯ ಗುಣಗಳನ್ನು ಕಳೆದುಕೊಳ್ಳುತ್ತಾನೆ. ಅಪರೂಪಕ್ಕೆ ಇಂಥ ದರ್ಶನವನ್ನು ನಮಗೆ ಉತ್ತಮ ಸಾಹಿತ್ಯ ಕೃತಿಗಳು ಉಂಟು ಮಾಡುತ್ತವೆ. ಸ್ವಪ್ನ ಸಾರಸ್ವತ ಅಂಥ ಒಂದು ಕಾದಂಬರಿಯಾಗಿದೆ ಎಂಬ ಅಭಿಪ್ರಾಯನ್ನು ನರೇಂದ್ರ ಪೈ ಹೇಳುತ್ತಾರೆ.

ಇಲ್ಲಿ ನರೇಂದ್ರ ಪೈಯವರು ಹೇಳುವ ರೀತಿಯೇ ವಿಭಿನ್ನ ಎಂಬಂತೆ ಕಂಡು ಬಂದ ಕಾರಣ ಅವರು ಕಾದಂಬರಿಯ ವಸ್ತುವಿಗೂ ಮತ್ತು ವರ್ತಮಾನ ಕಾಲದ

ವಸ್ತುವಿಗೂ ಇರುವ ಸಂಬಂಧವನ್ನು ವಿವರಿಸುತ್ತಾ ಹೊಗುತ್ತಾರೆ. ನಂತರದಲ್ಲಿ ಅವುಗಳ ಕುರಿತಾದ ಫಲಿತಾಂಶವನ್ನು ಹೇಳುತ್ತಾ ಹೋಗಿ ಮುಂದೆ ಅದು ತಳೆಯಬಹುದಾದ ರೂಪವನ್ನು ಇಲ್ಲಿ ವಿವರಿಸಿದ್ದಾರೆ. ಕಾದಂಬರಿಯಲ್ಲಿ ಬಳಕೆಯಾದ ವಿಷಯವು ನೈಜತೆಗೆ ಹೇಗೆ ಹತ್ತಿರವಾಗಿದೆ ಎಂಬುದನ್ನು ಉದಾಹರಣೆ ಸಮೇತ ಹೇಳುತ್ತಾರೆ. ಇವರ ಗ್ರಹಿಕೆಯಿಂದಾ ಕಾದಂಬರಿಯ ಇನ್ನೊಂದು ಮುಖವನ್ನು ನೋಡಿದಂತಾಯಿತು.

ಅಶೋಕ ಹೆಗಡೆಯವರು ಕಾದಂಬರಿ ಕುರಿತು ಹೇಳುತ್ತಾ ಕನ್ನಡ ಸಾರಸ್ವತ ಲೋಕಕ್ಕೊಂದು ಹೊಸ ಬೆಳಕಿನ ಕಿಂಡಿ ಎನ್ನುತ್ತಾರೆ. ಈ ಕಾದಂಬರಿಯೇ ನೆಲ ಬಿಟ್ಟು ನೆಲೆ ಕಂಡುಕೊಂಡು ದಟ್ಟ ಸಾವಿನ ವಾಸನೆಯಲ್ಲೂ ಹುಟ್ಟಿನ ಸಂಭ್ರಮವನ್ನು ಆಚರಿಸಿದವರ ಕಥೆಯಾಗಿ ಹುಟ್ಟು-ಸಾವುಗಳ ಮಧ್ಯಯೂ ಪ್ರೇಮಕ್ಕಾಗಿ ಹಂಬಲಿಸುವ ಕಥೆಯಾಗಿದೆ ಎಂದು ಹೇಳುತ್ತಾರೆ. ಇವರು ಕಾದಂಬರಿಯ ವಸ್ತು ಆಶಯವನ್ನು ಒಂದೇ ಅರ್ಥದಲ್ಲಿ ಹೇಳುವಂತೆ ತಮ್ಮ ಲೇಖನವನ್ನು ರಚನೆ ಮಾಡಿದಂತೆ ಕಾಣುತ್ತದೆ. ಈ ರೀತಿಯ ಅಭಿಪ್ರಾಯವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ಕಾದಂಬರಿಕಾರನ ಪರಿಶ್ರಮಕ್ಕೆ ಒಂದಿಷ್ಟು ಬೆಲೆ ಇಲ್ಲದಂತಾಗುತ್ತದೆ. ಸಾರಸ್ವತ ಸಮುದಾಯಗಳ ಕುರಿತು ಹೇಳುವಾಗ ಅವರ ಅನುಭವಗಳನ್ನು ಬದಿಗೆ ಒತ್ತಿ ಹುಟ್ಟು-ಸಾವು ಎಂದು ಹೇಳಿದರೆ ಅವರ ಜೀವನದ ಎಲ್ಲ ಅನುಭವಗಳು ಕಾಣದೆ ಹೋಗುತ್ತವೆ. ಇಲ್ಲಿ ಅಶೋಕ ಹೆಗಡೆಯವರು ಹೇಳಿರುವುದು ಸತ್ಯವಾದರು ಕೂಡಾ ವಿಷಯ ಪ್ರಸ್ತಾವನೆಯಲ್ಲಿ ಅದು ಸಂಕುಚಿತ ಅರ್ಥವನ್ನು ಪಡೆದು ಕೊಳ್ಳುತ್ತದೆ. ಒಂದು ಜನಾಂಗದ ಮೂಲವನ್ನು ದಾಖಲಿಸುವುದರಲ್ಲಿಯೂ ಪೈಯವರು ಈ ಪ್ರಯತ್ನ ಗಮನಾರ್ಹವಾಗಿದ್ದು ಸ್ವಪ್ನ ಸಾರಸ್ವತ ಕಾದಂಬರಿ ಅಪರೂಪದ್ದಾಗಿದೆ.

ವಿಲಿಯಂರವರು 'ಸ್ವಪ್ನ ಸಾರಸ್ವತ' ಕಾದಂಬರಿಯನ್ನು ಕುರಿತು ಇತರೆ ವಿಮರ್ಶಕರಿಗಿಂತ ಬೇರೆ ರೀತಿಯಲ್ಲಿ ನೋಡುತ್ತಾರೆ. ಈ ಕಾದಂಬರಿಯ ಕಥನವು ಇತಿಹಾಸದ ಪ್ರೇಮಿನಲ್ಲಿ ಸಮುದಾಯವೊಂದರ ಬದುಕಿನ ವ್ಯಾಪಾರವೊಂದರ ಆಗುಹೋಗುಗಳ ಕಡೆಯೇ ಬೆಳಕನ್ನು ಚಲ್ಲಿರುವುದು ವಿಶೇಷ. ಇಡೀ ಕಾದಂಬರಿಯ ನೇಯ್ಗೆಯಲ್ಲಿ ಪೈಗಳಿಗೆ ಅಂದಿನ ಇತಿಹಾಸದ ಕೆಟ್ಟಕನಸುಗಳಿಗಿಂತ ವರ್ತಮಾನದ ಸುಂದರ ಕನಸುಗಳೇ ಮುಖ್ಯವಾಗುತ್ತವೆ ಎಂದು ಹೇಳುತ್ತಾರೆ. ಇಲ್ಲಿ ಇತಿಹಾಸದ ಮಿಶ್ರಣವಾದ ಕಲ್ಪನೆ ಕಾದಂಬರಿಯನ್ನು ವರ್ತಮಾನ ಕಾಲಕ್ಕೆ ತಂದು ನಿಲ್ಲಿಸಿದೆ. ಕಾದಂಬರಿಯಲ್ಲಿ ಆಕ್ರಮಣ, ಮತಾಂತರ, ವಲಸೆ ಎಂಬುದು ಒಂದಕೊಂದು ಸಂಬಂಧವಾಗಿ ಬೆಳೆದು ಬಂದಿದೆ. ಆದರು ಸಹ ರೊಚ್ಚಿಗೆಬ್ಬಿಸಬಹುದಾದ ಸೂಕ್ಷ್ಮ ಸಂದರ್ಭಗಳನ್ನು ಬಹು ಸಮಚಿತ್ತದಿಂದ ಕಥನವನ್ನು ದುಡಿಸಿರುವುದು ಬಹು ಅನನ್ಯ ಈ ದೃಷ್ಟಿಯಿಂದ ಭೈರಪ್ಪನವರ ಕಾದಂಬರಿಯಾದ 'ಆವರಣ' ಮತ್ತು ಪೈರವರ 'ಸ್ವಪ್ನ ಸಾರಸ್ವತ' ಎರಡು ಬೇರೆ ಬೇರೆ ದಿಕ್ಕಿನತ್ತ ಮುಖಮಾಡಿ ನೀಲ್ಲುತ್ತವೆ. ಆವರಣ ಕಾದಂಬರಿಯಲ್ಲಿ ಆಕ್ರಮಣದ ವಿಷಯ ಬಂದಾಗ ಅಲ್ಲಿ ಪ್ರತಿಭಟನೆ ಹುಟ್ಟುತ್ತದೆ.

ಆದರೆ 'ಸ್ವಪ್ನ ಸಾರಸ್ವತದಲ್ಲಿ' ಪ್ರತಿಭಟನೆ ಗುಣವನ್ನೇ ತೋರಿಸಿಲ್ಲಿ ಅದ್ದರಿಂದಲೇ ಓದುಗರಲ್ಲಿ ಸಹ ವಿರೋಧಿಸುವ ಗುಣ ಬರದಂತೆ ರಚನೆ ಮಾಡಿದ್ದಾರೆ.

ಇನ್ನೊಂದು ಮುಖ್ಯ ಅಂಶವೆಂದರೆ ಸುಮಾರು ನಾನೂರು ವರ್ಷಗಳ ಧರ್ಮ ಸಾಮಾಜಿಕ ಬದುಕಿನ ಆತಂಕ ಆಶಯಗಳನ್ನು ಒಂದೆಡೆ ಹಿಟಿದಿಟ್ಟಿರುವುದು ಈ ಕೃತಿಯ ಹೆಗ್ಗಳಿಕೆ ಅಂತಲೇ ಕರೆಯಬಹುದು. ಗೋವಾ ಪ್ರದೇಶದಲ್ಲಿ ನಡೆಯುವ ಮತಾಂತರ ಆಕ್ರಮಣ ಎಂಬುವದು 'ಇನ್‌ಕ್ವಿಸಿಷನ್' (ಧಾರ್ಮಿಕ ವಿಚಾರಣೆ) ಪದ್ಧತಿಯಂತೆ ಕಂಡು ಬಂದರು ಸಹ ಇಲ್ಲಿ ಭಯಂಕರ ಸ್ಥಿತಿ, ಸಿಟ್ಟು, ದ್ವೇಷ, ಭಯ ಭೀತಿಗಳು ಈ ಕಾದಂಬರಿಯ ಅಂಗಳದಲ್ಲಿ ಇದ್ದರು ಯಾರನ್ನು ಯಾವ ರೀತಿಯಲ್ಲೂ ಪ್ರಬೋಧನೆ ಮಾಡಿಲ್ಲವೆನ್ನುವದು ಪೈಯವರ ಮನೋಧರ್ಮವನ್ನು ಬಿಂಬಿಸುತ್ತದೆ. ಕಾದಂಬರಿ ದಬ್ಬಾಳಿಕೆಯ ಚಿತ್ರಣಕ್ಕೆ ಮಾತ್ರ ಮೀಸಲಾಗದೆ ಹತ್ತು ಹಲವು ಮನುಷ್ಯ ಸಂಬಂಧಗಳು, ಪರಸ್ಪರ ಮನೋವ್ಯಾಪಾರಗಳ, ನವಿರಾದ ಭಾವನೆಗಳ ಹಾಗೂ ಹಳೆ ಮತ್ತು ಹೊಸ ಆವಿಷ್ಕಾರಗಳ ಸಂಘರ್ಷ ಶೋಷಣೆಗಳು ಸಹ ಬಹು ಮುಖ್ಯ ಅನಿಸಿಕೊಳ್ಳತ್ತವೆ ಎಂಬ ಅಭಿಪ್ರಾಯನ್ನು ಹೇಳುತ್ತಾರೆ. ಪೈಗಳು ಕಾದಂಬರಿಯ ಯಾವ ಘಟ್ಟದಲ್ಲಿಯು ಒಮ್ಮುಖವಾಗಿ ಯೋಚಿಸುವದಿಲ್ಲ ಎಂಬ ಅಭಿಪ್ರಾಯಕ್ಕೆ ಒಂದು ನಿರ್ಮತ್ಸರ ನಿಲುವಿನಿಂದ ಪೂರ್ವಾಗ್ರಹವಿಲ್ಲದ ಕೃತಿ ಅರಳುತ್ತದೆ. ಹಾಗಂತ ಕತೆ ಹರಿಯುವಾಗ ಚಿಕ್ಕ ಪುಟ್ಟ ಕೊರತೆಗಳು ಇಲ್ಲವಂತಲ್ಲ ಕೆಲವೆಡೆ ಕಥನ ಇನ್ನು ಹದವಾಗಿ ಹರಿಯಬೇಕೆನಿಸುತ್ತದೆ ಎಂಬ ಸಲಹೆಯನ್ನು ನಿಡುತ್ತಾರೆ.

ಪೈಯವರ ವಿಶೇಷತೆ ಎಂದರೆ ಕಾದಂಬರಿಯನ್ನು ಒಂದು ಸಮಚಿತ್ತತೆಯಿಂದ ರಚನೆ ಮಾಡಿರುವುದರಿಂದಾ ಆಕ್ರಮಣ, ಮತಾಂತರ ಸಂದರ್ಭದಲ್ಲಿ ಸಹ ಅದರ ವಿರೋದ್ಧ ದಂಗೆ ಎಳದೆ ಸೌಮ್ಯವಾಗಿ ಅದನ್ನು ಸರಿಪಡಿಸುವ ರೀತಿ 'ವಲಸೆ' ಹೋಗುವ ಹಿನ್ನಲೆ ಎಲ್ಲವೂ ಒಂದು ವಿಶೇಷತೆ ಎಂಬಂತೆ ರಚನೆಗೊಂಡಿದೆ. ಇದರಿಂದಲೆ ಕಾದಂಬರಿಯನ್ನು ಸಂಕಟ ಮತ್ತು ಸಂಭ್ರಮಗಳ ಸಮಚಿತ್ತ ಬೆಳಕನ್ನು ಅನಾವರಣ ಮಾಡುವದೇ ಈ ಕಾದಂಬರಿಯಲ್ಲಿರುವ ಶಕ್ತಿ ಮತ್ತು ಆಸಕ್ತಿ ಎಂಬ ಅಭಿಪ್ರಾಯಕ್ಕೆ ವಿಲಿಯಂ ಅವರು ಬರುತ್ತಾರೆ.

'ಸ್ವಪ್ನ ಸಾರಸ್ವತ' ಕಾದಂಬರಿಯ ಕುರಿತು ಗುರುಪ್ರಸಾದ ಕಾಗಿನೆಲೆಯವರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ. ಕಾದಂಬರಿಯ ವಸ್ತುವೇ ಈ ಕಾಲಘಟ್ಟದ ಪಲ್ಲಟಗಳನ್ನು ಒಂದು ಮಟ್ಟದಲ್ಲಿ ದಾಖಲಿಸುವುದಾಗಿರುವುದರಿಂದ ಸತ್ಯ ವಾಸ್ತವವೆಂದು ಯಾವ ಆಕರ ಗ್ರಂಥಗಳಲ್ಲಿ ನಿರೂಪಿತವಾಗಿರುವ ಚಾರಿತ್ರಿಕ ಘಟನೆಯಿದೆಯೋ ಅದನ್ನು ಉಪೇಕ್ಷಿಸುವುದು ಕಷ್ಟ ಎಂದು ಹೇಳುತ್ತಾರೆ.ಅಲ್ಲದೆ ಒಬ್ಬ ಬರಹಗಾರ ಒಂದು ಚರಿತ್ರೆಯನ್ನು ಕಲ್ಪಿತ ಬರಹಕ್ಕೆ ಅದರಲ್ಲಿಯೂ ಕಾದಂಬರಿಯಂತಹ ಪ್ರಕಾರಕ್ಕೆ ಹೇಗೆ ಉಪಯೋಗಿಸಿ ಕೊಳ್ಳಬಲ್ಲ? ಅದು ನಾನೂರು ವರ್ಷಗಳಿಗೂ ಮೀರಿದ ಒಂದು ಸಮುದಾಯದ ಚರಿತ್ರೆಯನ್ನು ಅಧ್ಯನಯನ ಮಾಡಿ

ಅದನ್ನು ಆಧರಿಸಿ ಕಾದಂಬರಿ ಬರೆದಾಗ ಅದರಿಂದ ನಾವು ಏನನ್ನು ನಿರೀಕ್ಷಿಸಬಹುದು? ಕಾದಂಬರಿಕಾರನ ಸವಾಲುಗಳೇನು? ಬರೇ ಕಾಲಘಟ್ಟದ ಪಲ್ಲಟವನ್ನು ಸೆರೆಹಿಡಿಯುವುದೇ ಇಲ್ಲಿ ಮುಖ್ಯವಾಗುತ್ತದೆಯೋ? ಲೇಖಕ ಚರಿತ್ರೆಗೆ ಎಷ್ಟೇ ನಿಷ್ಠನಾಗಬಲ್ಲ? ಮುತಾಂದ ಪ್ರಶ್ನೆಗಳನ್ನು ಇಲ್ಲಿ ಮುಂದಿಡುತ್ತಾರೆ. ಅಂದರೇ ಕಾದಂಬರಿ ರಚನೆ ಮಾಡಿದ ನಂತರ ಅದರಲ್ಲಿರುವ ವಿಷಯದ ಕುರಿತು ಹೇಳುವದು ಮುಖ್ಯ ಅನಿಸಿಕೊಳ್ಳಲಾರದು.

ಕಾದಂಬರಿಯಲ್ಲಿರುವ ವಿಷಯ ಯಾವುದು ಅದು ಎಲ್ಲಿಂದ ತೆಗೆದುಕೊಳ್ಳಲಾಗಿದೆ. ಇತಿಹಾಸವಾಗಿದ್ದ ಅದರ ವಿಷಯ ಮತ್ತು ಕಾದಂಬರಿಯಲ್ಲಿ ಬಳಕೆಯಾದ ಪ್ರಮಾಣ ಇಲ್ಲಿ ಮುಖ್ಯ ಅನಿಸಿಕೊಳ್ಳುತ್ತದೆ. ಕಾದಂಬರಿಯ ರಚನೆಗೆ ಕಾದಂಬರಿಕಾರನ ಪರಿಶ್ರಮದ ಬಗೆಯನ್ನೇ ತಿಳಿಯುದು ಒಂದು ವಿಶೇಷತೆ ಅನಿಸುತ್ತದೆ. ಅಲ್ಲದೆ ಇದರಿಂದ ಕಾದಂಬರಿಯ ಎಷ್ಟರ ಮಟ್ಟಿಗೆ ವಿಷಯದ ಹದವನ್ನು ಮಾಡಿಕೊಂಡಿದೆ.ಅಂತಲು ತಿಳಿಯಲು ಸಾಧ್ಯವಾಗುತ್ತದೆ. ಇಂತಹ ಕೆಲಸಮಾಡಿರುವ ಗುರುಪ್ರಸಾದ ಕಾಗಿನೆಲೆ ಎಲ್ಲ ವಿದ್ವಾಂಸರುಗಳಿಗಿಂತಾ ಭಿನ್ನವಾಗಿ ನಿಲ್ಲುತ್ತಾರೆ. ಕಾದಂಬರಿಯ ವಸ್ತುವಿಗೆ ಹೊರಗಿನ ಹರಿವು ಯಾವ ಪ್ರಮಾಣದಲ್ಲಿ ಆಗಿದೆ ಎನ್ನುವುದು ಮುಖ್ಯ ಇವುಗಳ ಜೊತೆಗೆ ಕಾದಂಬರಿಯ ವಸ್ತು ಆಶಯ ಕುರಿತು ನಾನೂರು ವರ್ಷಗಳ ಹಿಂದಿನ ಕಥೆ ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿದೆ ಎಂದು ಹೇಳುತ್ತಾ ಅಂದಿನ ಸಮಾಜದಲ್ಲಿ ರೋಗಗಳಾಗಿ ಕಾಣಿಸಿಕೊಳ್ಳುವ ಕಾಲರಾ, ಪ್ಲೇಗ ರೋಗಗಳೊಂದಿಗೆ ನಾಗಶಾಪದ ಕುರಿತು ಹೇಳುತ್ತಾರೆ. ರೋಗಗಳು ಮನುಷ್ಯನನ್ನು ದೈಹಿಕವಾಗಿ ನಾಶ ಮಾದಿದರೆ ನಾಗಶಾಪ ಎಂಬುದು ಮಾನಸಿಕತೆಯನ್ನು ಹೇಗೆ ಆವರಿಸುತ್ತದೆ ಎಂಬುವದು ಇಲ್ಲಿ ಮುಖ್ಯವಾಗಿ ಕಂಡು ಬರುತ್ತದೆ.

ಕಾದಂಬರಿ ಕಾಯಕ ದೈವ,ಧರ್ಮ ಮತ್ತು ನಂಬಿಕೆಗಳು ಜೀವನದ ಮೇಲೆ ಪ್ರಭಾವಿಸುವ ರೀತಿಯನ್ನು ಇಲ್ಲಿ ಪ್ರಸ್ತಾಪಿಸುತ್ತದೆ. ಕಾದಂಬರಿ ಸುತ್ತಣ ಸಮಾಜದಲ್ಲಿಯಾಗುವ ಪಲ್ಲಟಗಳಿಂದ ಪ್ರಭಾವಿತವಾಗಿಲ್ಲದೇ ಇರಲು ಸಾಧ್ಯವೇ ಇಲ್ಲಿ ಎಂದು ಹೇಳುತ್ತಾ, ಶಿವರಾಂ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಉದಾಹರಣೆಗೆ ತೆಗೆದುಕೊಳ್ಳುತ್ತಾರೆ. ಕೆಲವೂಮ್ಮೆ ಕಥೆಗಾರರು ಕಥಾನುಕೂಲಕ್ಕೆ ಪಾತ್ರಗಳನ್ನು ಸೃಷ್ಟಿಸಿದರು ಮತ್ತು ಸಾಯಿಸಿದರು ಎಂದು ಅನಿಸಬಹುದು. ಏಷ್ಟೋ ಪಾತ್ರಗಳ ಅವಶ್ಯಕತೆಯ ಬಗ್ಗಯೇ ಅನುಮಾನ ಬರಬಹುದು ಎಂದು ಹೇಳುತ್ತಾ ಕಾದಂಬರಿಯ ಅಸಂಖ್ಯ ಪಾತ್ರಗಳ ದೈನಿಕರೇಖೆಯನ್ನು ಸೇರಿಸುವ ಚುಕ್ಕಿಗಳಾಗಿ ಮಾತ್ರ ಕಾಣುತ್ತದೆ. ಆ ರೇಖೆಯ ಅಂದ ಚುಕ್ಕಿಗಳಿಂದ ಮಾಸಿಲ್ಲ ಎನ್ನುತ್ತಾರೆ. ಕೊನೆಗೆ ಕಾದಂಬರಿಯ ಸೃಷ್ಟಿ ನಾನೂರು ವರ್ಷಗಳ ದೈನಿಕವನ್ನು ದೈನಿಕವಾಗಿಯೇ ಚಿತ್ರಿಸುವಲ್ಲಿ ಗೋಪಾಲಕೃಷ್ಣ ಪೈರವರು ಯಶಸ್ವಿ ಆಗಿದ್ದಾರೆ.

ಗುರುಪ್ರಸಾದ ಕಾಗಿನೆಲೆಯವರು ಕೇವಲ ಕಾದಂಬರಿ ವಸ್ತುವಿನ ಬಗ್ಗೆ ಮಾತ್ರ ಹೇಳದೆ ಒಬ್ಬ ಕಾದಂಬರಿಕಾರನ ಪರಿಶ್ರಮ ಕಾದಂಬರಿಯಲ್ಲಿ ಹೇಗೆ ಮೂಡಿಬಂದಿದೆ ಎಂತಲು ಹೇಳುತ್ತಾರೆ. ಕಾದಂಬರಿಯಲ್ಲಿ ಕೆಲವು ವಿಷಯಗಳು ವ್ಯಕ್ತವಾಗಿಲ್ಲ ಅವು ಸಹ ಮುಖ್ಯ ಎನಿಸಿಕೊಳ್ಳುತ್ತವೆ ಎಂಬ ಸಲಹೆಯನ್ನು ನೀಡುವದರ ಮುಖಾಂತರ ಕಾದಂಬರಿಯ ವಸ್ತು ಆಶಯಗಳ ಬಗ್ಗೆ ಹೇಳಿದ್ದಾರೆ.

ಹೀಗೆ ಕಾದಂಬರಿಯ ಕುರಿತು ಬಂದಂತಹ ಲೇಖನಗಳನ್ನು ನೋಡಲಾಗಿ ಇಲ್ಲಿ ವಿದ್ವಾಂಸರುಗಳು ಕಾದಂಬರಿಯ ಓದಿನಿಂದ ತಮ್ಮ ಅಭಿಪ್ರಾಯಗಳನ್ನು ಲೇಖನಗಳ ಮೂಲಕ ಹೇಳಿದ್ದಾರೆ. ಕಾದಂಬರಿ ಇತಿಹಾಸ ಕಲ್ಪನೆ ಮಿಶ್ರಿತವಾದ್ದರಿಂದಾ ಈ ಕಾದಂಬರಿಯ ಸಮಚಿತ್ತ ಬೆಳಕಿನ ಕೃತಿ ಎಂದು ಇತಿಹಾಸದ ಪ್ರತಿಬಿಂಬ ಎಂದು ಸಾರಸ್ವತ ಮಹಾಭಾರತ, ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ವಿರಾಟ ಕಥನ, ಸಾವಯವ ಶಿಲ್ಪದ ಸಮಗ್ರೀಕರಣ ಎಂತಲು ವಿಭಿನ್ನವಾಗಿ ಕರೆಯುತ್ತಾರೆ ಇಲ್ಲಿ ವಿದ್ವಾಂಸರಗಳ ದೃಷ್ಟಿ ಕೊನೆ ಬೇರೆ ಬೇರೆಯಾಗಿರುವುದು ಕಂಡುಬಂದಿದೆ. ಈ ಕಾದಂಬರಿ ಅಲ್ಪಕಾಲದಲ್ಲೇ ಕನ್ನಡ ಕಾದಂಬರಿಯ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನದ ಜೊತೆಗೆ ಇತಿಹಾಸವನ್ನೇ ನಿರ್ಮಿಸಿದ ಕಾದಂಬರಿಗಳ ಸಾಲಿನಲ್ಲಿ 'ಸ್ವಪ್ನ ಸಾರಸ್ವತ' ಮೊದಲನೆಯದಾಗಿ ನಿಲ್ಲುತ್ತದೆ.

ಕೊನೆ ಟಿಪ್ಪಣಿ

೧. ಗೋಪಲಕೃಷ್ಣ ಪೈ, **ಸ್ವಪ್ನ ಸಾರಸ್ವತ,** ಮುನ್ನುಡಿ, ೨೦೧೧

೨. ಹೆಚ್.ದಂಡಪ್ಪ, **ಚಾರಿತ್ರಿಕ ಗತಿಬಿಂಬ : ಸ್ವಪ್ನ ಸಾರಸ್ವತ,** ಪುಸ್ತಕಲೋಕ (ಮಾಸಪತ್ರಿಕೆ), ಜುಲೈ ಸೆಪ್ಟೆಂಬರ್ ೨೦೧೦, ಪುಟ – ೨೮

೩. ನರೇಂದ್ರ ಪೈ, **ಸ್ವಪ್ನ ಸಾರಸ್ವತ ಒಂದು ಮರು ಓದು,** ಕೆಂಡಸಂಪಿಗೆ, ೨೪ ಡಿಸೆಂಬರ್ ೨೦೧೧, ಪುಟ – ೧

೪. ವಿಲಿಯಂ, **'ಸ್ವಪ್ನ ಸಾರಸ್ವತ' – ಸಮಚಿತ್ತ ಬೆಳಕಿನ ಕೃತಿ,** ಗಾಂಧಿಬಜಾರ (ಮಾಸಪತ್ರಿಕೆ), ಸೆಪ್ಟೆಂಬರ್ ೨೦೧೦ ಪುಟ – ೭

ಅಧ್ಯಾಯ – ೫

ಕಾದಂಬರಿ ವಸ್ತು ವಿಶ್ಲೇಷಣೆ

ಅಧ್ಯಾಯ – ೫

ಕಾದಂಬರಿ ವಸ್ತು ವಿಶ್ಲೇಷಣೆ

೫.೧ ಗೋವೆ ಪರಿಸರ ಮತ್ತು ಜನಜೀವನ

ಇತಿಹಾಸ ಕುರಿತು ಹೇಳುವ ಒಂದು ಕೃತಿ ಇತಿಹಾಸವನ್ನೆ ನಿರ್ಮಿಸಿದೆ ಎಂದು ಹೇಳುವದು ಗೋಪಾಲಕೃಷ್ಣ ಪೈರವರ ಕಾದಂಬರಿ ಹಿನ್ನಲೆಯಲ್ಲಿ ಸತ್ಯ ಎನಿಸುತ್ತದೆ. ಪೈ ಅವರು ಚರಿತ್ರೆಯ ಹಿನ್ನಲೆಯಲ್ಲಿ ನೂರಾರು ಪಾತ್ರಗಳ ಜೀವನ ಸಂಘರ್ಷವನ್ನು ಅಕ್ಷರಗಳಲ್ಲಿ ಹಿಡಿದಿಟ್ಟು ಆ ಕಥೆಗೆ ಒಂದು ಕಲಾಕೃತಿಯ ಚೌಕಟ್ಟನ್ನು ನೀಡಲು ಯತ್ನಿಸಿ 'ಸ್ವಪ್ನ ಸಾರಸ್ವತ' ಎಂಬ ಅಪರೂಪದ ಕಾದಂಬರಿಯನ್ನು ನೀಡದ್ದಾರೆ. ಸಾರಸ್ವತ ಬ್ರಾಹ್ಮಣರು ನಾನೂರು ವರ್ಷಗಳ ಹಿಂದೆ ಗೋವಾ ಬಿಟ್ಟು ದಕ್ಷಿಣ ರಾಜ್ಯಗಳತ್ತ ವಲಸೆ ಹೋಗುವ ಹಿನ್ನಲೆಯಲ್ಲಿ ಆರಂಭವಾಗುವ ಕಾದಂಬರಿ ಒಟ್ಟು ನಾಲ್ಕು ಭಾಗಗಳಿಂದ ಕೂಡಿದೆ. ೪೦೦ ವರ್ಷಗಳ ಹಿಂದಿನ ಇತಿಹಾಸ ಕುರಿತಾದ ಈ ಕೃತಿ ಮೊದಲ ಎರಡು ಭಾಗಗಳಲ್ಲಿ ಗೋವಾದ ವಿಪ್ಲವದ ದಿನಗಳ ಚಿತ್ರಣವಿದೆ. ಪೋರ್ಚುಗೀಸರು ಗೋವಾವನ್ನು ಆಕ್ರಮಿಸಿ ನಡೆಸಿದ ದಬ್ಬಾಲಿಕೆಯು ಅಲ್ಲಿನ ಜನರ ಜೀವನವನ್ನೆ ನಲುಗಿಸಿದ ದುರ್ಭರ ದಿನಗಳ ಕಥನ ವಿವರವಾಗಿ ಮೂಡಿ ಬಂದಿದೆ. ಅಂದಿನ ಜನಸಾಮಾನ್ಯರು ಅಶಸ್ತ್ರರು ಪೋರ್ಚಗೀಸ್ ಸೈನಿಕರು ಅಮಾಯಕರ ಮೇಲೆ ನಡೆಸುವ ದೌರ್ಜನ್ಯಗಳನ್ನು ಬಿಡಿಸಿಡುವಾಗ ಪೈಯವರ ಲೇಖನಿ ಹರಿತವಾಗಿ ಓಡಾಡಿದೆ ಎಂಬುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಕಾದಂಬರಿಯ ಪ್ರಮುಖ ಪಾತ್ರವಾದ ವಿಟ್ಠು ಪೈ ಜನಿಸುವ ಸಮಯದಲ್ಲಿ ಪೋರ್ಚುಗೀಸರು ಗೋವಾದ ಮೇಲೆ ಎರಗಿದರು. ಗೋವಾಜನರ ಮೇಲೆ ಆಮಿಷ ಮತ್ತು ಪವಾಡಗಳಂತಹ ಚಮತ್ಕಾರಗಳ ಪ್ರದರ್ಶನದಿಂದ ಆರಂಭಗೊಂಡ ಮತಾಂತರವು ನಂತರ ಬಲತ್ಕಾರ ಮತ್ತು ಹಿಂಸೆಯ ಮತಾಂತರ ದತ್ತ ತಿರುಗಿತು. ಸುಮಾರು ಒಂದು ಸಾವಿನ ವರ್ಷಗಳ ಹಿಂದೆ ರೋಮನ್ ಕ್ರೈಸ್ತ ಧಾರ್ಮಿಕ ಸ್ಥಾವರವು ಒಂದು ದುಷ್ಟ ಪದ್ಧತಿಯಾದ 'ಇನ್ ಕ್ವಿಜಿಷನ್' ನನ್ನು ಹುಟ್ಟು ಹಾಕಿತ್ತು. ಈ ಇನ್‌ಕ್ವಿಜಿಷನ ಎಂಬ ಹತ್ಯಾಕಾಂಡದ ವಿವರಗಳನ್ನು ಪೈಯವರು ಕಾದಂಬರಿಯಲ್ಲಿ ಅಳವಡಿಸಿದ್ದರೂ ಆ ವಿವರ ನೀಡುವಾಗ ತುಂಬಾ ಸಂಯಮ ತೋರಿದ್ದಾರೆಂದೇ ಹೇಳಬೇಕು. ಇನ್‌ಕ್ವಿಜಿಷನ ಸಮಯದಲ್ಲಿ ನಡೆದ ಭಯೋತ್ಪಾದನೆಯನ್ನು ಅತಿ ರಂಜಿಸುವ ಅಪಾಯದಿಂದ ದೂರ ಉಳಿದು ಸೂಚ್ಯವಾಗಿ ಅಲ್ಲಲ್ಲಿ ಅದರ ಪ್ರಸ್ತಾಪ ಮಾಡಿ ತೋರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಕಾದಂಬರಿ ಇತಿಹಾಸ ಮತ್ತು ಕಲ್ಪನೆಯ ಸಮಿಶ್ರ ಫಲವಾಗಿದ್ದರು ಸಹ ಕೆಲವು ಸನ್ನಿವೇಶಗಳಲ್ಲಿ ಪಾತ್ರ ಚಿತ್ರಣವು ವರ್ತಮಾನಕ್ಕೆ ಸ್ಪಂಧಿಸುವಂತೆ ಕಂಡು ಬಂದಿರುವುದು ಲೇಖಕರ ವಿಶೇಷತೆಗೆ ಹಿಡಿದ ಕೈಗನ್ನಡಿಯಾಗಿದೆ.

ವಿಟ್ಠು ಪೈ ಮತ್ತು ರಾಮಚಂದ್ರ ಪೈ ಈ ಇಬ್ಬರು ಒಂದು ರೀತಿಯಲ್ಲಿ ನಿರೂಪಕರೂ ಹೌದು, ಪಾತ್ರಧಾರಿಗಳೂ ಹೌದು ಅದರಲ್ಲಿಯೂ ವಿಟ್ಠು ಪೈ ತನ್ನ ಭೂತದ ಘಟನೆಗಳನ್ನು ನಿರ್ಮಿಸಿ ಕಥೆ ಹೇಳುತ್ತಾನೆ. ಒಂದು ರೀತಿಯಲ್ಲಿ ಸಾರಸ್ವತ ಲೋಕದ ನಿರ್ಮಾಪಕ ಕೂಡಾ ಆಗುತ್ತಾನೆ. ತಮ್ಮ ನೆನಪುಗಳ ಹಾಗೂ ಕಾರ್ಯ ಸಾಧನೆಗಳನ್ನು ಸ್ಪಷ್ಟವಾಗಿ ಮತ್ತು ಜೀವಂತವಾಗಿ ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ಮೌಖಿಕವಾಗಿ ಹೇಳುವ ಒಂದು ಸಂಪ್ರದಾಯವಿದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಸ್ವಂತ ಅನುಭವಗಳ ನೆನಪು ಅತಿ ಮುಖ್ಯ ಏಕೆಂದರೆ ಆ ನೆನಪು ಆತನು ಸಮಾಜದಲ್ಲಿ ತನ್ನ ಸಾಮ್ಯ ಮತ್ತು ಚೇತರಣೆಯನ್ನು ಕಂಡುಕೊಳ್ಳಲು ನೆರವಾಗುತ್ತದೆ. ಆ ನೆನಪು ಇಲ್ಲದಾಗ ಆತನು ಅಸಹಾಯಕ ನಾಗುತ್ತಾನೆ. ಯಾವ ಒಂದು ನಿರ್ಧಾರ ಕೈಗೊಳ್ಳಲು ಹಾಗೂ ತನ್ನ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಆತನು ಅಸಮರ್ಥನಾಗುತ್ತಾನೆ. ಇದೇ ರೀತಿಯಲ್ಲಿ ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪೂರ್ವಿಕರ ಸಾಧನೆಗಳು ಮತ್ತು ಅನುಭವಗಳಲ್ಲಿ ಭಾಗಿಯಾಗಿರಲು ಆಸಕ್ತನಾಗಿರುತ್ತಾನೆ.

ಗೋವಾದ(ವೆರಣೆ) ನರಸಪ್ಪಯ್ಯನವರಿಂದ ಶುರುವಾದ ಈ ವಂಶದ ಕಥಾನಕ ರಾಮಚಂದ್ರ ಪೈಯ ಮೊಮ್ಮಗ ವೆಂಕಟೇಶ ಪೈನ ಜನನದವರೆಗೆ ಮತ್ತು ನಾಗ್ಡೂ ಬೇತಾಳ ಅವನನ್ನು ಎತ್ತಿಕೊಂಡು ಕಾಪಾಡುತ್ತಾನೆ. ಎನ್ನುವ ಸದಾಶಯದೊಂದಿಗೆ ಮತ್ತು ಆತನ ಸಂತತಿ ಇಪ್ಪತ್ತೆರಡು ತಲೆಮಾರಿನ ತನಕ ಬದುಕುವ ಜವಾಬ್ದಾರಿಯನ್ನು ದೈವಕ್ಕೆ ಬಿಟ್ಟು ರಾಮಚಂದ್ರ ಪೈ ಸಾಯುವವರೆಗೆ ಈ ಕಥೆ ಬರೆಯಲ್ಪಟ್ಟಿದೆ ಎಂದು ಕಥೆಯನು ಮುಗಿಸಿ ಬಿಟ್ಟರೆ ಕಾದಂಬರಿಕಾರನ ಶ್ರಮಕ್ಕೆ ಬೆಲೆಯಿಲ್ಲ ದಂತಾಗುತ್ತದೆ. ಕಾದಂಬರಿಯಲ್ಲಿ ಬರುವ ಪಾತ್ರ ಸನ್ನಿವೇಶಗಳು ಸೂಕ್ಷ್ಮತೆಯನ್ನು ಹೊಂದಿದೆ ಎಂಬುದು ನಾವು ಮರೆಯುವಂತಿಲ್ಲಾ. ಇಲ್ಲಿ ಕಾಣಿಸಿಕೊಳ್ಳುವ ವಿಟ್ಠು ಪೈ ಪಾತ್ರ ಚಿತ್ರಣ ಕಾದಂಬರಿಯನ್ನು ವಿಶಿಷ್ಟ ಚೌಕಟ್ಟಿನಲ್ಲಿ ಹೆಣೆಯುವಂತೆ ಮಾಡಿದೆ. ಸಾರಸ್ವತ ಬ್ರಾಹ್ಮಣನಾದ ವಿಟ್ಠು ಪೈ ತನ್ನ ಪಾತ್ರಕ್ಕೆ ತಕ್ಕಂತೆ ಮೂಡಿಬಂದು ಮುಂದಿನ ಪಿಳಿಗೆಗೆ ಮಾದರಿ ಎಂಬಂತೆ ಕಂಡು ಬರುತ್ತಾನೆ.

ನಿರೂಪಕರು ಮೂಲದಲ್ಲಿ ವಿಟ್ಠು ಪೈನನ್ನು ವ್ಯಾಪಾರಿ ಅಂತ ತೋರಿಸುತ್ತಾ ಕಾದಂಬರಿಯ ಮೊದಲ ಹೆಜ್ಜೆ ಇಡುತ್ತಾರೆ. ಸಾರಸ್ವತರಿಗೆ ವ್ಯಾಪಾರವೂ ಒಂದು ಕುಲಕಸಬಿನಂತಾ ದರು ಸಹ ವ್ಯಾಪಾರಕ್ಕೆ ಒಗ್ಗದ ವಿಟ್ಠು ಪೈ ಕೃಷಿಕನಾಗುತ್ತಾನೆ. ತನ್ನ ಜೀವನದೂದಕ್ಕೂ ಕಷ್ಟನಷ್ಟ ಕಾಣುತ್ತಾ ಇದ್ದರು ಸಹ ಧರ್ಮದ ಮೇಲೆ ನಂಬಿಕೆ ಮುಖ್ಯವಾಗಿತ್ತು. ಒಬ್ಬ ಮನುಷ್ಯನಿಗೆ ತನ್ನ ಜೀವನದಲ್ಲಿ ಯಾವ ರೀತಿಯ ನೋವು-ನಲಿವುಗಳು ಬರುತ್ತವೆ. ಅದೇ ರೀತಿ ವಿಟ್ಠು ಪೈ ಜೀವನದಲ್ಲಯೂ ಇವೆ ಎಂದು ತೋರಿಸಲು ಹೋಗಿ ಕೆಲವು ಸನ್ನಿವೇಶಗಳಲ್ಲಿ ಲೇಖಕರು ಎಡವಿರುವುದು ಉಂಟು. ಈ ಸಂದರ್ಭದಲ್ಲಿ ವಿಟ್ಠು ಪೈ ಪಾತ್ರ ಲೇಖಕರಿಂದಾ ರಚನೆಯಾಗಿದೆಯೊ ಇಲ್ಲ ಪಾತ್ರವೇ ಲೇಖಕರನ್ನು ಕರೆದುಕೊಂಡು ಹೊರಟಿದೆ ಎಂಬುದನ್ನು ನಿರ್ಧರಿಸುವದು

ಕಷ್ಟಸಾಧ್ಯ. ವಿಟ್ಠು ಪೈ ಸಾರಸ್ವತನಾಗಿ ಧರ್ಮಕ್ಕೆ ನಿಷ್ಠುರನಾಗಿ ಇರಬೇಕಾದ ವ್ಯಕ್ತಿ ಕೊನೆಗೆ ಸಾರಸ್ವತಕ್ಕೆ ಕಳಂಕ ಎಂಬಂತೆ ಕಂಡುಬರುತ್ತಾನೆ.

'ಧಡ್ಡ' ಎಂಬ ಹೆಸರು ಒಬ್ಬ ಬುದ್ಧಿಯಿರದ ವ್ಯಕ್ತಿಯ ಗುಣ ಹೇಳುವಲ್ಲಿ ಸಹ ನಾವು 'ಧಡ್ಡ' ಎಂಬುದನ್ನು ಬಳಕೆ ಮಾಡುತ್ತೇವೆ. ಆದರೆ ಕಾದಂಬರಿಯಲ್ಲಿ ಬರುವ ಧಡ್ಡನ ಪಾತ್ರ ಅದಕ್ಕೆ ವಿರೋಧ ಎಂಬಂತೆ ಕಂಡುಬಂದಿದೆ. ಹುಟ್ಟಿನಿಂದಾ ಮೂಕ, ಕಿವುಡನಾದ ಇತ 'ತುತ್ತು ಅನ್ನ'ಕ್ಕಾಗಿ ತನ್ನ ಜೀವನವನ್ನೇ ಸಾರಸ್ವತರಿಗಾಗಿ ಮುಡುಪಾಗಿಟ್ಟವನು. ಅನ್ನದ ಋಣ ಎನೆಂಬುದು? 'ಧಡ್ಡ' ತೋರಿಸಿಕೊಟ್ಟದ್ದಾನೆ. ಸಾರಸ್ವತರಿಗೆ ತಮ್ಮ ಮ್ಹಾಳಶಿಮಾಯಿಯ ಮೂರ್ತಿಯನ್ನು ಕಾಪಾಡಿಕೊಳ್ಳಲಿಕ್ಕಾಗದೆ ಇರುವಾಗ ಆ ಮೂರ್ತಿಯನ್ನು ಒಬ್ಬನೆ ಎತ್ತಿ ಬಚ್ಚಿಟ್ಟು ಬರುವ 'ಧಡ್ಡ' ಕಾದಂಬರಿ ಪಾತ್ರಗಳಲ್ಲಿ ಜೀವಂತವಾಗಿ ಉಳಿದುಕೊಂಡಿದ್ದಾನೆ. ಕೆಲಸ ಮಾಡುವ ಮೂಲಕ ತನ್ನನ್ನು ಗುರ್ತಿಸಿಕೊಂಡ 'ಧಡ್ಡ' ಉಳಿದ ಸಮಯದಲ್ಲಿ ಮರಿಚಿಕೆಯಂತೆ ಕಂಡುಬರುತ್ತಾನೆ. ಒಂದು ಪ್ರಾಣಿಯನ್ನು ನಾವು ನಿಯತ್ತಿಗೆ ಹೋಲಿಸುತ್ತವೆ. ಆದರೆ ಅದೇ ಬುದ್ಧಿ ಇರುವ ಮನುಷ್ಯ ಪ್ರಾಣಿಯನ್ನು ನಿಯತ್ತಿಗೆ ಹೋಲಿಸುವದಿಲ್ಲ ಇದಕ್ಕೆ ಉದಾಹರಣೆಯಾಗಿ ವಿಟ್ಠು ಪೈ ನನ್ನು ನೋಡಬಹುದು. ತನ್ನ ಪ್ರಾಣ ಉಳಿಸಿಕೊಳ್ಳಲು ಧಡ್ಡನ ಪ್ರಾಣತೆಗೆದುಕೊಳ್ಳುವ ಈ ವ್ಯಕ್ತಿಗಿಂತ ಬೇರೆ ವ್ಯಕ್ತಿ ಬೇಕೆನಿಸಲಾರ. ಕಾದಂಬರಿಯಲ್ಲಿ ವಿಟ್ಠು ಪೈ ಇದ್ದು ಸತ್ತಂತಾದ ಧಡ್ಡ ಸತ್ತು ಇದ್ದಂತಾದ ಈ ಎರಡು ಪಾತ್ರಗಳ ಭಿನ್ನತೆಯನ್ನೇ ಕಾದಂಬರಿಕಾರರು ಸುಂದರವಾಗಿ ಚಿತ್ರಿಸಿದ್ದಾರೆ.

ಲೇಖಕರು ಕಾದಂಬರಿಯಲ್ಲಿ ಪಾತ್ರ ಚಿತ್ರಣದ ಜೊತೆಗೆ ಪರಿಸರ ಕುರಿತಾಗಿ ಹೇಳುವದು ಸ್ವಲ್ಪ ಮಟ್ಟಿಗೆ ಕಡಿಮೆ ಎಂಬಂತೆ ಕಂಡು ಬಂದಿದೆ. ಇತಿಹಾಸ ಮತ್ತು ಕಲ್ಪನೆ ಆಧಾರಿತ ಕಾದಂಬರಿಯಾದ 'ಸ್ವಪ್ನ ಸಾರಸ್ವತ' ಒಂದು ಸಾರಸ್ವತ ಸಮುದಾಯದ ವಲಸೆ ಹೋಗುವ ಜೀವನ ವಿಧಾನ, ವ್ಯಾಪಾರ, ಕೃಷಿ ಬಗ್ಗೆ ಹೇಳಲು ಮುಂದಾದಂತೆ ಕಾಣಲ್ಲಾ ಬದಲಾಗಿ ಕನ್ನಡ ಕಾದಂಬರಿಗಳಲ್ಲಿ ಒಬ್ಬ ವ್ಯಕ್ತಿ ಚಿತ್ರಣವಿದ್ದರು ಸಹ ಅಲ್ಲಿ ಪರಿಸರ ಕುರಿತಾದ ವಿವರಣೆ ಇರುತ್ತದೆ. ಉದಾಹರಣೆ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು'ಸುಬ್ಬಮ್ಮ ಹೆಗ್ಗಡತಿ ಯನ್ನು ನೋಡಬಹುದು ಇವುಗಳಿಗಿಂತ ಪೈ ತಮ್ಮ ಕಾದಂಬರಿಯನ್ನು ಏಕೆ ಭಿನ್ನವಾಗಿ ಚಿತ್ರಿಸಿದ್ದಾರೆ. ಇದು ಅವರು ಬೇಕೆಂದೆ ಮಾಡಿದರೂ ಇಲ್ಲಾ ಕಲ್ಪನೆಯಲ್ಲಿ ಪರಿಸರ ಅವರಿಗೆ ಕಾಣದೇ ಹೊಯಿತೋ ಎಂಬುವದು ಇಲ್ಲಿ ಉದ್ಭವಿಸುವ ಪ್ರಶ್ನೆಯಾಗಿದೆ. ಕಾದಂಬರಿಯಲ್ಲಿ ವಿಟ್ಠು ಪೈ ಹುಟ್ಟಿದಾಗ ಬರುವ ಮಳೆ ಮುಂದೆ ಬಳ್ಳಂಬೆಟ್ಟನಲ್ಲಿ ರಾಮಚಂದ್ರ ಪೈ ಕುಟುಂಬ ನೆಲೆನಿಂತಾಗ ಅಲ್ಲಿ ಮಳೆ ಕಾಣಿಸಿಕೊಳ್ಳುತ್ತದೆ. ಇವುಗಳ ಮದ್ಯ ನದಿ ಸಮುದ್ರ ಎಂದು ಹೇಳುತ್ತಾ ಲೇಖಕರು ಪರಿಸರದಿಂದಾ ತಪ್ಪಿಸಿಕೊಳ್ಳುತ್ತಾರೆ.

ಇತಿಹಾಸ ಪ್ರಮುಖ ಘಟನೆಯಾದ ಪೋರ್ಚುಗೀಸರು ಮತಾಂತರ ಸಾರಸ್ವತ ಬ್ರಾಹ್ಮಣರಿಗೆ ನುಂಗಲಾರದ ತುತ್ತಾಗುತ್ತದೆ. 'ಊಂಡ ಮನೆಗೆ ಕನ್ನಾಹಾಕಿದ'ರೆಂಬಂತೆ ಪೋರ್ಚಗೀಸರು ವ್ಯಾಪಾರದ ನೆಪದಲ್ಲಿ ಬಂದು ನಮ್ಮ ನಾಡಿನ ಸಂಪತಿನೊಂದಿಗೆ ಇಲ್ಲಿಯ ದೇವಾಲಯ, ಧರ್ಮ, ಆಚಾರ-ವಿಚಾರ, ನಂಬಿಕೆ ಎಲ್ಲವನ್ನು ಹಾಳುಮಾಡಿದರು. ಒಂದಡೆ ಪೋರ್ಚುಗೀಸರು ಕಂಡು ಬಂದರೆ ಇನ್ನೊಂದೆಡೆ ಮುಸಲ್ಮಾನರ ಹಾವಳಿ ತುಂಬಿ ಹೋಗಿತ್ತು.ನಮ್ಮ ವಿಜಯನಗರ ಅರಸರ ಕಾಲ ಮುಗಿಯುತ್ತಾ ಬರುವ ಕಾಲವದು ಇಂತಹ ಸನ್ನಿವೇಶದಲ್ಲಿ ಸಾರಸ್ವತ ಕುಟುಂಬಗಳು ಅಸಹಾಯಕರಾಗಿ ವೆರಣಿಯಲ್ಲೇ ಇದ್ದರು. ಇವರು ಖಡ್ಗ ಹಿಡಿದು ಹೋರಾಡಲು ಸಿದ್ಧರಾಗದೆ ಪೋರ್ಚುಗೀಸರ ಮನಸ್ಸನ್ನು ಗೆಲ್ಲಲಾಗದೇ ತಮ್ಮ ನಂಬಿಕೆ ಆಚರಣೆಗಳನ್ನು ಉಳಿಸಿಕೊಳ್ಳಲು ವಲಸೆ ಹೋಗ ಬೇಕಾಯಿತು. ಇದೆನು ಬ್ರಾಹ್ಮಣರ ಶ್ರೇಷ್ಠತೆಯ ಪ್ರತಿಕವೂ ಇಲ್ಲಾ ಅವರ ಬಲಹೀನತೆಯ ಪ್ರದರ್ಶನವೋ? ಎಂಬುದು ಒಂದು ಪ್ರಶ್ನೆಯಾಗಿ ಹುಟ್ಟಿಕೊಳ್ಳುತ್ತದೆ. 'ಪ್ರಾಣ ಬಿಟ್ಟೆವೂ ಆದರೆ ಧರ್ಮ ಬಿಡೆವೂ'ಎಂಬ ಸಾರಸ್ವತರ ಧ್ವನಿ ಪೋರ್ಚುಗೀಸರನ್ನು ಮುಟ್ಟುವಷ್ಟರಲ್ಲಿ ಇವರು ವಲಸೆ ಹೋಗಿದ್ದರು. ವಲಸೆ ಹೋಗುವ ಸಾರಸ್ವತ ಕುಟುಂಬಗಳು ಒಂದೆಡೆಯಾದರೆ ಮತಾಂತರವನ್ನು ಬಡತನದ ಹಿನ್ನೆಲೆಯಲ್ಲಿ ಸ್ವೀಕರುಸುವ ಬುದ್ದುನ ಕುಟುಂಬ ಇನ್ನೊಂದೆಡೆಯಾಗಿ ನಿಲ್ಲುತ್ತದೆ. ಬುದ್ದು ಕೆಲವುಕಾಲ ಸಂತೋಷದಿಂದಿದ್ದರೂ ಸಹ ಅವನು ಸಾರಸ್ವತ ವಿಧಿವಿದಾನಗಳನ್ನು ಬಿಟ್ಟಿರಲಿಲ್ಲಾ ಕಾದಂಬರಿಯಲ್ಲಿ ಬರುವ ದ್ವಿಮುಖ ಪಾತ್ರಗಳಂತೆ ಸಾರಸ್ವತರು ಕಾಣಿಸಿಕೊಳ್ಳುತ್ತಾರೆ. ಆದರು ಸಹ ಇವರು ಪ್ರತಿಭಟನೆಯಿಂದಾ ಪೋರ್ಚುಗೀಸರನ್ನು ಗೆದ್ದವರಲ್ಲ ಎಂಬುದು ಮುಖ್ಯವಾಗಿದೆ. ವಿಟ್ಠು ಪೈ ತನ್ನ ಮೋಹದ ಬಲೆಯಿಂದ ಅಲ್ವೀರಾಳನ್ನು ಗೆದ್ದಿದ್ದ.

ಕಾದಂಬರಿಕಾರರು ಕೆಲವು ಸಂದರ್ಭಗಳಲ್ಲಿ ಪಾತ್ರಗಳ ಬೆನ್ನು ಹತ್ತಿರುವುದು ಕಂಡುಬರುತ್ತದೆ.ಪೋಚುಗೀಸರ ಕ್ರೌರ್ಯತೆಗೆ ಮುಖವಾಣಿಯಾಗುವ ಗೋಯಸ್ ಒಂದೆಡಯಾದರೆ ದೂರದ ನಾಡಿನಿಂದ ಬಂದ ಕವಿಹೃದಯದ ಕೋಮಿನೋ ಆ ಪರಂಗಿಯವರಲ್ಲು ಇದ್ದ ಮಾನವೀಯತೆಗೆ ಪ್ರತೀಕವಾಗುತ್ತಾನೆ. ವಿಟ್ಠು ಪೈ ಪ್ರೇಯಸಿಯಾದ ಅಲ್ವೀರಾ ಮತ್ತು ಕೋಮಿನೋ ಪಾತ್ರಗಳ ಮೂಲಕ ಪೈಯವರು ನಿಜಕ್ಕೂ ಒಂದು ಚಮತ್ಕಾರವನ್ನೇ ಸಂಘರ್ಷದ ಆ ದಿನಗಳ ನಡುವೆಯೋ ಮಾನವೀಯತೆಯ ಸೆಲೆಗಳನ್ನು ಚಿತ್ರಿಸಿ ಪ್ರೀತಿಯ ಬರತೆಯನ್ನು ಬಿಂಬಿಸಿ, ಕಾದಂಬರಿಯ ಆ ಭಾಗಕ್ಕೆ ಒಂದು ಹೊಸ ಆಯಾಮವನ್ನ ತಂದಿದ್ದಾರೆನ್ನಬಹುದು. ವಿಟ್ಠು ಪೈ ಪ್ರೇಮದಲ್ಲಿ ಬಿದ್ದು ಅಲ್ವೀರಾಳನ್ನು ಪ್ರೀತಿಸಿದರೂ ತನ್ನ ಬ್ರಾಹ್ಮಣತ್ವಕ್ಕೆ ಧಕ್ಕೆ ತಂದುಕೊಳ್ಳದೇ ತನ್ನ ಜೀವನವನ್ನು ಸಮತೋಲನದಲ್ಲಿ ನಡೆಸಿಕೊಂಡು ಹೋಗುವ ಚೋದ್ಯ ಒಂದೆಡೆಯಾದರೆ. ಪೋರ್ಚುಗೀಸರ ಕುಲದವಳಾದ ಅಲ್ವೀರಾ ಆ ವರೆಗೆ ಬ್ರಾಹ್ಮಣರನ್ನು ದ್ವೇಷಿಸಿದ್ದರೂ ವಿಟ್ಠು ಪೈಯನ್ನು ಪ್ರೀತಿಸಿದ ನಂತರ ಪ್ರೀತಿಯ ಮಹಾಪೂರವನ್ನೇ ಹರಿಸಿ ಅವನಿಗೆ ಯಾವ ರೀತಿಯ ತೊಂದರೆಯನ್ನು ನೀಡದೆ

ಇರುವ ಪರಿ ಬೆರಗನ್ನು ಹುಟ್ಟಿಸುತ್ತದೆ. ಅದು ಬಹುಶಃ ಪ್ರೀತಿಯ ಶಕ್ತಿ ಆಗಿರಬಹುದು. ವೆರಣೆ ಎಂಬ ಇಡೀ ಊರನ್ನೇ ಖಾಲಿ ಮಾಡಿ ದೂರದ ಕನ್ನಡನಾಡಿಗೆ ವಲಸೆ ಹೋಗುವ ಅನಿವಾರ್ಯತೆ ಎದುರಾದಾಗ ವಿಟ್ಠು ಪೈ ಕೊನೆಯ ಬಾರಿ ಅಲ್ವೀರಾಳನ್ನು ನೋಡಿದಾಗ ಅವಳು ಸಮಾಜ ಸೇವೆಮಾಡುವದಾಗಿ ಹೇಳುತ್ತಾಳೆ. ಹೀಗೆ ಪ್ರೀತಿ ಹುಟ್ಟಿ ಕೊನೆಗೊಳ್ಳುವ ರೀತಿಯನ್ನು ನಿರೂಪಕರು ಸುಂದರವಾಗಿ ಚಿತ್ರಿಸಿರುವುದು ಕಂಡು ಬರುತ್ತದೆ.

ನಾಗ್ಡೊ ಬೇತಳನು ಸಾವಿಲ್ಲದ ಆವಧೂತ ಎನ್ನಬಹುದು. ಸಾರಸ್ವತ ಬ್ರಾಹ್ಮಣರು ಯಾವುದೇ ಕಷ್ಟವನ್ನು ಎದುರಿಸುವಾಗಲೂ ಧುತ್ತೇಂದು ಪ್ರತ್ಯಕ್ಷವಾಗುವ ನಾಗ್ಡೊ ಬೇತಾಳನು ಸೂಕ್ತ ಪರಿಹಾರವನ್ನು ಸೂಚಿಸಿ ಅವರಿಗೆ ಮಾರ್ಗದರ್ಶನ ನೀಡುತ್ತಾನೆ ಮತ್ತು ಅವನಿಗೆ ಸಾವಿಲ್ಲವೆಂಬ ನಂಬಿಕೆ ಇದೆ. ಪೂರ್ಣ ನಗ್ನವಾಗಿ ಓಡಾಡುವ ಇತನಿಗೆ ಆದಾಗಲೇ ಗುಡಿ ಗೋಪುರಗಳನ್ನು ಕಟ್ಟಿರುತ್ತಾರೆ. ಅದೆಷ್ಟೊ ತಲೆಮಾರುಗಳ ಹಿಂದಿನಿಂದಲೂ ಇತ ಬದುಕಿದ್ದಾನಂತೆ. ಕಳ್ಳನ್ನು ಕುಡಿದು ಮೀನು ತಿನ್ನುತ್ತ ತನ್ನ ದಪ್ಪನೆಯ ಗಡ್ಡವನ್ನು ನೀವುತ್ತಾ ದೊಡ್ಡ ದನಿಯಲ್ಲಿ ಮಾತನಾಡುವ ನಾಗ್ಡೊ ಬೇತಾಳ ಕೆಲವು ಬಾರಿ ಗದ್ದೆಗಳಲ್ಲಿ ಕೆಲಸ ಮಾಡುವುದೂ ಉಂಟು. ಗೋವಾದ ಆಗಿನ ವಿಪ್ಲವ ದಿನಗಳ ನಡುವೆ ಅಲ್ಲಲ್ಲಿ ಪ್ರತ್ಯಕ್ಷನಾಗುವ ನಾಗ್ಡೊ ಬೇತಾಳನು ಕಾದಂಬರಿಯ ಆ ಭಾಗದ ಕಥಾನಕಕ್ಕೆ ಅಪರೂಪದ ಆಯಾಮವನ್ನೆ ನೀಡುತ್ತಾನೆ. ನಾಗ್ಡೊ ಬೇತಾಳ ಕಾದಂಬರಿಯ ಉದ್ದಕ್ಕೂ ಒಂದು ಜಾಗ್ರತ ಧ್ವನಿಯಂತೆ ಕಂಡು ಬರುತ್ತಾನೆ.ಇವನೊಬ್ಬ ಕಾಲ ಪರುಷನೆ ಆಗಿದ್ದಾನೆ. ಹಿಂದಿನ ಕಾಲದ ಕಥೆಯನ್ನು ತಿಳಿದಿದ್ದ ಅಲ್ಲದೆ ಮುಂದೆ ನಡೆಯುವ ಬಗೆಯನ್ನು ಹೇಳುತ್ತಿದ್ದ. ಅದಕ್ಕಾಗಿಯೇ ಸಾರಸ್ವತ ಸಮುದಾಯಕ್ಕೆ ದೇವರಾಗಿ ಕಾಣಿಸಿಕೊಳ್ಳುವ ನಾಗ್ಡೊ ಬೇತಾಳ

.......'ಮಾತುಗಳಲ್ಲಿ ಬರುವ ಶಬ್ದಗಳು ಅರ್ಥ ಕಳೆದುಕೊಳ್ಳುತ್ತವೆ

ಶಾಪಗಳು ತಗಲುವುದಿಲ್ಲ. ಅಂಥ ದಿನಗಳು ಬರಲಿವೆ'.[೧].......

ಎಂಬ ಭವಿಷ್ಯ ಕಾಲದ ಕುರಿತು ಹೇಳುತ್ತಾನೆ.

ಈ ಸಮಯದಲ್ಲೇ ಮುದ್ರಣ ಯಂತ್ರದ ವಿಷಯ ಹುಟ್ಟಿಕೊಳ್ಳುತ್ತದೆ. ಸುಮಾರು ನಾನೂರು ವರ್ಷಗಳ ಹಿಂದೆ ನಮ್ಮ ದೇಶ ಮುದ್ರಣ ಕಂಡಿತ್ತು. ಆದರೆ ಆ ಕಾಲದ ಜನರು ಯಂತ್ರದ ಬಗ್ಗೆ ಅರಿಯದವರಾಗಿದ್ದರು. ಅದು ನಮ್ಮ ನಾಡಿಗೆ ಶಾಪವಂತೆ ಎಂಬ ಅಭಿಪ್ರಾಯ ಅವರದಾಗಿತ್ತು. ಏಕೆಂದರೆ ನೂರಾರು ಜನರ ಹೊಟ್ಟೆ ಮೇಲೆ ಇದು ಹೊಡೆಯುತ್ತದೆ ಎಂಬ ಕೂಗು ಅವರದ್ದು. ಇದೊಂದೆಡೆ ಆದರೆ ಇನ್ನೊಂದೆಡೆ ನೂರಾರು ಜನ ಮಾಡುವ ಕೆಲಸವನ್ನು ಕೆಲವೇ ಸಮಯದಲ್ಲಿ ಮಾಡುತ್ತದೆ ಎಂಬ ಸತ್ಯವನ್ನು ಜನ ತಿಳಿಯದೇ ಹೋಗಿದ್ದರು.ಈಗಿನ ಪರಿಸ್ಥಿತಿಯಲ್ಲಿ ಅದನ್ನು ಬಹಿಷ್ಕರಿಸುವುದು ಅಗತ್ಯ ಎಂದು ಕೆಲವರು ಹೇಳುತ್ತಿದ್ದರು. ನಾಗ್ಡೊ

ಬೇತಾಳ ಒಂದು ಕ್ಷಣ ಯೋಚಿಸಿ ಬಹುಶಃ ಈ ಯಂತ್ರ ಮುಂದಿನ ದಿನಗಳಲ್ಲಿ ಬಹು ಮುಖ್ಯವಾದ ಪಾತ್ರವಹಿಸುತ್ತದೆ. ಓದು ಬರಹಗಳ ಸ್ವಾಮ್ಯ ಕೆಲವರಗೆ ಮಾತ್ರ ಸೀಮಿತವಾಗಿರುವುದಿಲ್ಲ. ಈಗ ಸದ್ಯಕ್ಕೆ ಕೆಲವರು ಹೊಟ್ಟೆ ಹೊರೆದುಕೊಳ್ಳವುದು ಕಷ್ಟವಾಗಬಹುದು. ಆ ಜನರೆಲ್ಲ ಬೇರೆ ಕೆಲಸ ಮಾಡುವುದು ಒಳ್ಳೆಯದು ಯಂತ್ರಕ್ಕೆ ಬಹಿಷ್ಕಾರ ಹಾಕುವುದು ಮೂರ್ಖತನವಾಗುತ್ತದೆ.[3] ಎಂದು ಮಾತನ್ನು ಮುಗಿಸಿದ ಈ ಮಾತುಗಳ ಜನರಿಗೆ ಒಂದು ಮಾರ್ಗವಂತೆ ಕಂಡು ಯಂತ್ರದ ಸುದ್ದಿಯನ್ನು ಕೈ ಬಿಟ್ಟರು.

ಇದೇ ಕಾಲಕ್ಕೆ ಪೋರ್ಚುಗೀಸರ ಆಕ್ರಮಣ ಹೆಚ್ಚಾಗುತ್ತಾ ಹೋಗುವದರಿಂದ ಸಾರಸ್ವತ ಸಮುದಾಯಗಳಿಗೆ ವಲಸೆ ಅನಿವಾರ್ಯವಾಗುತ್ತದೆ. ಅದರಲ್ಲೂ ಪೈ ಕುಟುಂಬವು ಪೂರ್ವಜರಿಂದಲೇ ನಾಗಶಾಪವನ್ನು ಪಡೆದು ಕೊಂಡು ಬಂದಿತ್ತು. ಇದು ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಾ ಹೋಗುವ ಶಾಪವಾಗಿ ಕಂಡುಬರುತ್ತದೆ. ಇದರ ಮಧ್ಯ ವಿಟ್ಠು ಪೈ ತನ್ನ ಜೀವ ಉಳಿಸಿಕೊಳ್ಳಲು ಹೋಗಿ ಧಡ್ಡನನ್ನು ಬಲಿಕೊಟ್ಟ. ಈ ಕಾರಣಕ್ಕಾಗಿ ನಾಗ್ಡೊ ಬೇತಾಳ ವಿಟ್ಠು ಪೈಗೆ "ಈ ಕ್ಷಣದಿಂದ ನಿನಗೆ ಮ್ಹಾಳಶಿಮಾಂಯಿಯ ಪೂಜೆ ಮಾಡುವ ಹಕ್ಕಿಲ್ಲ. ಈ ವೆರಣೆಯ ನೀರು ನಿನಗೂ ನಿಷಿದ್ದ. ನಿನ್ನ ಸಂತಾನ ನಾಲ್ವರಲ್ಲಿ ಒಂದರಂತೆ ನಿಶ್ಶೇಷವಾಗಿ ಹೋಗಲಿ"[3] ಎಂದು ಶಾಪಕೊಟ್ಟ ವಿಟ್ಠು ಪೈನ ಕುಟುಂಬವು ಎರಡು ಶಾಪಗಳಿಂದ ತತ್ತರಿಸಿ ಹೊಯಿತು. ಬೇತಾಳ ಬೆನ್ನು ಬಿಡದೆ ಶಾಪದ ಮುಕ್ತಿಯನ್ನು ಬಯಸಲು ಮುಂದಾದರು ಸಹ ಕೊಟ್ಟ ಶಾಪವನ್ನು ಹಿಂದಕ್ಕೆ ತೆಗೆಯುವ ಹಾಗಿಲ್ಲದ ಕಾರಣ ನಿಮ್ಮ ಮನೆ ದೇವರಿಗಾಗಿ ಪ್ರಾಣ ತೆತ್ತ ಧಡ್ಡನನ್ನು ಇನ್ನು ಮುಂದೆ ನೀವೆಲ್ಲ ಸಾರಸ್ವತರೂ ದೇವರೆಂದು ಪೂಜಿಸಬೇಕೆಂದು ಹೇಳಿದ. ಆಗಲಿ ಎಂದಾಗ ಮುಂದೆ ನಾನೂರು ವರ್ಷಗಳ ಬಳಿಕ ಮತ್ತೆ ನಿನ್ನ ಸಂತಾನಕ್ಕೆ ಮ್ಹಾಳಶಿಮಾಂಯಿ ದೊರೆಯುತ್ತಾಳೆ ಎಂಬ ಮಾತನ್ನು ಬೇತಾಳ ಹೇಳಿದ. ಇದರ ಜೊತೆಗೆ ವಲಸೆ ಹೋದ ಸಂದರ್ಭಗಳಲ್ಲಿ ಬ್ರಾಹ್ಮಣರು ಸಿಕ್ಕರೆ ಮಾಮ್ಮಾ ಎಂತಲೂ ಮಾತೆಯನ್ನು ಮಾಂಯ್ಯೇ ಎಂತಲೂ ಕರೆಯಬೇಕೆಂಬ ಸಲಹೆಯನ್ನು ನೀಡಿ ನಾಗ್ಡೊ ಬೇತಾಳ ಹೋದ. ಸಾರಸ್ವತ ಕುಟುಂಬಗಳು ವರಣೆಯನ್ನು ಬಿಟ್ಟು ದಕ್ಷಿಣಾಭಿಮುಖವಾಗಿ ಹೊಗುವದು. ವಿಟ್ಠು ಪೈ ಕುಟುಂಬಕ್ಕೆ ಅಂಟಿಕೊಂಡ ನಾಗಶಾಪ ಮತ್ತು ಧಡ್ಡನ ಶಾಪ ಕೊನೆಯವರೆಗೂ ಪರಿಹಾರವಾಗದೇ ಹೋಗುತ್ತದೆ. ನಿರೂಪಕರು ಶಾಪವೇ ಮುಂದೆ ವರವಾಗುತ್ತದೆ ಎಂದು ಹೇಳುವ ಮುಖಾಂತರ ಕಾದಂಬರಿಯಲ್ಲಿ ಹೊಸ ಸೃಷ್ಟಿ ಕಾಣುವಂತೆ ಮಾಡುತ್ತಾರೆ.

೫.೨ ಸಾರಸ್ವತರ ವಲಸೆ ಅನುಭವ

ಕಾದಂಬರಿಯ ಎರಡನೆ ಘಟ್ಟವಾಗಿ ಕಾಣಿಸಿಕೊಳ್ಳುವ ವಲಸೆ ಎಂಬುದು ಇಲ್ಲಿ ಮುಖ್ಯ ಪೋರ್ಚುಗೀಸರ ಆಕ್ರಮಣಕ್ಕೆ ಒಳಗಾದ ಸಾರಸ್ವತ ಬ್ರಾಹ್ಮಣರು ವೆರಣೆ ಜೀವನ ಒಂದೆಡೆಯಾದರೆ ಇದರಿಂದಾ ಮುಕ್ತಿಪಡೆಯಲು 'ವಲಸೆ' ಹೋಗುವ ಚಿತ್ರಣ ಇನ್ನೊಂದೆಡೆಯಾಗಿ ನಿಲ್ಲುತ್ತದೆ. ತಮ್ಮ ಧರ್ಮ ದೇವರು ಎಂಬ ಅಪಾರವಾದ ನಂಬಿಕೆ ಇದ್ದವರಿಗೆ ದೇಶಾಂತರ ಹೋರಡಲೇ ಬೇಕಾದ ಅನಿವಾರ್ಯತೆ ಸಾರಸ್ವತ ಸಮುದಾಯಕ್ಕೆ ಎದುರಾಯಿತು. ಇದರೊಂದಿಗೆ ಈ ರೀತಿ ವಲಸೆ ಹೋಗಲು ಮತ್ತೊಂದು ಕಾರಣವು ಇತ್ತು. ಪರಂಪರಾಗತವಾಗಿ ಬಂದಿದ್ದ ಕೆಲವು ಉದ್ಯೋಗಗಳು ವಸಾಹತು ಶಾಹಿಯೊಡನೆ ಆಧುನಿಕ ಯಂತ್ರೋಪಕರಣಗಳು ಭಾರತಕ್ಕೆ ಬಂದವು. ಆಗ ಕೆಲವು ಸಮುದಾಯಗಳು ಕೈಗೊಂಡಿದ್ದ ಉದ್ಯೋಗಗಳಿಗೆ ಆಪತ್ತು ಉಂಟಾಯಿತು. ಆಗ ಅವರು ಬೇರೆ ಉದ್ಯೋಗಗಳನ್ನು ಮಾಡಬೇಕಾಯಿತು. ಉದ್ಯೋಗ ಬಾರದಿದ್ದರು ನೈಪೂಣ್ಯತೆ ಇಲ್ಲದವರು ತಮಗೆ ಗೊತ್ತಿರುವ ಉದ್ಯೊಗವನ್ನರುಸುತ್ತಾ ಬೇರೆಡೆ ಹೋಗಬೇಕಾಯಿತು. ಬ್ರಾಹ್ಮಣ ಸಮುದಾಯಕ್ಕೆ ಆಧುನಿಕಥೆಯ ಯಂತ್ರಗಳು ಕೂಡಾ ಅಪಾಯವನ್ನು ತಂದೊಡ್ಡಿದವು. ಅದರಲ್ಲಿ ಮುದ್ರಣ ಯಂತ್ರವೂ ಒಂದು ದೇವಾಸ್ಥಾನಗಳಲ್ಲಿ ಗ್ರಂಥಗಳ ಪ್ರತಿ ತೆಗೆದು ನೂರಾರು ಜನರ ಜೀವನ ಸಾಗಿಸುತ್ತಿದ್ದರು ಇದಕ್ಕೂ ಹೊಡೆತ ಬಿದ್ದಂತಾಯಿತು. ಬಹಿಸ್ಕಾರ ಹಾಕಾಬೇಕೆಂದು ಕೆಲವರು ಹೇಳಿದರೆ ಮತ್ತೆ ಕೆಲವರು ಅದನ್ನು ಸ್ವಾಗತಿಸುತ್ತಾರೆ ವಸಾಹತು ಕಾಲದ ಮುಖ್ಯ ಲಕ್ಷಣ ವೆಂದರೆ ಇದೆ. ಒಂದು ಕಡೆ ಆಧುನಿಕತೆಯ ಸೌಲಭ್ಯಗಳು ಸ್ವಾಗತ ಮತ್ತೊಂದೆಡೆ ತಮ್ಮ ಸಂಪ್ರದಾಯ, ಆಚರಣೆ, ಧರ್ಮ ಇವುಗಳ ಉಳುವಿಗಾಗಿ ಹೋರಾಟ ಹೀಗೆ 'ವಲಸೆ' ಎಂಬುದು ಅನಿವಾರ್ಯ ಎಂಬಂತೆ ಹುಟ್ಟಿಕೊಳ್ಳುತ್ತದೆ.

ವೆರಣಿಯಲ್ಲಿ ಮನುಷ್ಯರಿಂದಲೇ ಆಕ್ರಮಣಕ್ಕೆ ಒಳಗಾಗುವ ಸಾರಸ್ವತರು ವಲಸೆ ಹೋಗುವ ಸಂದರ್ಭಕ್ಕೆ ಬಂದಾಗ ಶಾಪಗಳ ಆಕ್ರಮಣಕ್ಕೆ ಬಲಿಯಾಗುವ ಚಿತ್ರಣ ಇಲ್ಲಿ ಮಾಡಿದರೆ. ಧರ್ಮವನ್ನು ಕಾಪಾಡಿಕೊಳ್ಳಲು ನಾಗ್ಡೊ ಬೇತಾಳನ ಆಜ್ಞೆಯಂತೆ ಸಾರಸ್ವತ ಕುಟುಂಬಗಳು ವಲಸೆ ಹೋಗಲು ಸಿದ್ಧರಾಗಿರುತ್ತಾರೆ. ವಿಟ್ಠು ಪೈ ಅಶ್ವತ್ಥಾಮನಂತೆ ಬೆನ್ನಿಗೆ ಶಾಪಗಳನ್ನು ಕಟ್ಟಿಕೊಂಡು ವಲಸೆದಾರಿ ಹಿಡಿಯುತ್ತಾನೆ. ವಲಸೆಗೆ ಅದರದೇ ಆದ ಸಮಸ್ಯೆಗಳು ಅನುಕುಲಗಳು ಇವೆ. ಸಮಾಜದ ಅಂತಸ್ತಿನ ಒಂದು ಮೆಟ್ಟಿಲು ಇವುಗಳೆಲ್ಲ ವಲಸೆಯಲ್ಲಿ ಪುಡಿ ಪುಡಿ ಯಾಗುತ್ತವೆ. ಮೇಲ್ವಿಚಾರಣೆ ನಾಯಕತ್ವ ಎಲ್ಲ ಬೇರೆ ಇರುತ್ತದೆ. ಆದರೆ ಅದರಲ್ಲಿ ಅಂತಸ್ತಿನ ಪಸೆಯಿರುವುದಿಲ್ಲ ಎನ್ನುವದನ್ನು ಮರೆಯಬಾರದು ಹಾಗೆ ಆಹಾರದ್ದು ವಯೋವೃದ್ದರದ್ದು, ಕಾಯಲೆ ಬಿದ್ದವರದ್ದು ಮತ್ತು ಸತ್ತೇಹೋದವರ ಸಮಸ್ಯೆಗಳು ಕಳ್ಳರ ಕಳ್ಳನಾದವರ ಗೋಳುಗಳು ಒಳಗಿನವರನ್ನೆ ಅನುಮಾನಿಸಬೇಕಾಗಿ ಬರುವಂತ ಸತ್ವ ಪರೀಕ್ಷೆಯ ಸಮಸ್ಯೆಗಳು ಎಲ್ಲ

ಮಿರಿಸಿದ್ದು ಯೌವನಕ್ಕೆ ಕಾಲಿಟ್ಟು ಹುಡುಗಿಯರ ರಕ್ಷಣೆಯದು. ಕಾದಂಬರಿಯಲ್ಲಿ ಇವೆಲ್ಲವೋ ಅತ್ಯಂತ ಸಹಜ ಎಂಬಂತೆ ಬಂದು ಹೊಗುತ್ತವೆ. ಆತ್ಮಹತ್ತೆಯ ಯೋಚನೆ ಬಂದವರು ಮರಳಿ ಗೋವೆಗೆ ಹೋಗಿ ಕ್ರಿಶ್ಚಿಯನ್ನಾದರು ಪರವಾಗಿಲ್ಲ ನೆಮ್ಮದಿಯಿಂದ ಸಾಯುತ್ತೇನೆ ಎಂದುಕೊಂಡವರು ಮಾನಸಿಕ ಸ್ತಿಮಿತ ಕಳೆದುಕೊಂಡವರು. ಈ ಎಲ್ಲಾ ವಿವರಗಳ ವಲಸೆಯಲ್ಲಿ ಅಡಗಿಕೊಂಡಿವೆ. ಹೀಗೆ ವಲಸೆಯ ಪಯಣ ಸಾಗುತ್ತಾ ಹೋಗುತ್ತದೆ.

ಈ ಕಾದಂಬರಿಯಲ್ಲಿ ವಲಸೆ ಕೇವಲ ಮತಾಂತರ ತಪ್ಪಿಸಿಕೊಳ್ಳಲು ಮಾತ್ರ ಹುಟ್ಟಿಕೊಂಡಿದಲ್ಲ ವ್ಯಾಪರ ಕೃಷಿಕರಿಗೂ ಇದು ವಿಸ್ತರಿಸುತ್ತಾ ಹೋಗಿದೆ. ಪ್ರದೇಶ ಬಿಟ್ಟು ಪ್ರದೇಶಕ್ಕೆ ಹೊರಟರು ಸಂಬಂಧ ಎಂಬುದು ಕೊನೆಗೊಳ್ಳದೆ ಹಾಗೆ ಬೆಳೆಯುತ್ತಾ ಹೋಗುತ್ತದೆ. ವೆರಣೆಯನ್ನು ಬಿಡುವಾಗ ನಾಲ್ವತ್ನಾಲ್ಕು ಕುಟುಂಬಗಳಿದ್ದರು ಸಹ ಮುಂದೆ ಕಿಣಿಯರ ಕುಟುಂಬಗಳು ಸೇರುವ ಮೂಲಕ ನಲವತ್ತೆಂಟು ಕುಟುಂಬಗಳಾಗುತ್ತವೆ. ಸಾರಸ್ವತ ಬ್ರಾಹ್ಮಣರು ಸಿಕ್ಕರೆ ಮಾಮ್ಮಾ ಎಂದೆ ಸಂಭೊದಿಸುವದು ಮಾತೆಯರನ್ನು ಮಾಂಯ್ಯೋ ಅನ್ನುವರು ಧರ್ಮ ಸಂಬಂಧವನ್ನು ಬೆಸೆಯುವದಾಗಿದೆ. ಎಲ್ಲರು ಒಂದೆ ಎಂಬ ಭಾವನೆಗಳು ತಳೆದಂತೆ ಕಂಡರು ಕೆಲವು ಸಂದರ್ಭದಲ್ಲಿ ಸಮಸ್ಯೆಗಳು ಬುತ್ತಿ ಬಿಚ್ಚಿಕೊಳ್ಳುತ್ತವೆ. ಅದು ಆಹಾರ ಇಲ್ಲವೆ ಕಳ್ಳನ ಸಂದರ್ಭಗಳಾಗಿರಬಹುದು. ಯುದ್ಧಕ್ಕೆ ಹೋರಟ ಸೈನ್ಯದಂತೆ ಸಾರಸ್ವತ ಕುಟುಂಬಗಳು ದಾರಿಹಿಡಿದವು. ಈ ಎಲ್ಲಾ ಕುಟುಂಬಗಳ ಮುಖ್ಯಸ್ಥನಾಗಿ ವಿಟ್ಠು ಪೈನ ಪಾತ್ರ ಕಾಣಿಸಿಕೊಳ್ಳುತ್ತದೆ. ವಲಸೆ ಹೋಗುವ ಸಂದರ್ಭದಲ್ಲಿ ವಿಟ್ಠು ಪೈನ ಮನಸ್ಸು ವೆರಣೆಯತ್ತ ಸೆಳೆಯುತ್ತಿರುತ್ತದೆ. ಇದು ಪ್ರೀತಿಯ ಸಳೆತವೂ ಇಲ್ಲಾ ತನ್ನ ಭೂಮಿ ವ್ಯಾಪಾರದ ಸೆಳೆತವೂ ಎಂಬುವದು ಇಲ್ಲಿ ಪ್ರಶ್ನೆ ಯಾಗುತ್ತದೆ. ಹೆಂಡತಿಗೆ ದ್ರೋಹ ಮಾಡಿದ್ದನೆ ಎಂಬ ಅಳುಕು ಒಂದೆಡೆಯಾದರೆ ಪ್ರೇಯಸ್ಸಿಯ ಸೆಳೆತದಿಂದ ತಪ್ಪಿಸಿಕೊಂಡೆ ಎಂಬ ದುಃಖವು ವಿಟ್ಠು ಪೈನ್ನು ಕಾಡುತ್ತಿರುತ್ತದೆ. ಇದರ ಜೊತೆಗೆ ಪೂರ್ವಜರ ನಾಗಶಾಪ ನಾಗ್ಡೊ ಬೇತಾಳನ ಶಾಪ ಎಲ್ಲವೂ ನೆಣಿನ ಹಗ್ಗದಂತೆ ವಿಟ್ಠು ಪೈ ಜೀವನಕ್ಕೆ ಹೆಣೆದು ಕೊಳ್ಳುತ್ತವೆ. ಇತ ಜೀವನದುದ್ದಕ್ಕೂ ಸಾವು ನೋವುಗಳನ್ನು ಕಷ್ಟಸುಖಗಳನ್ನು ಸಮನಾಗಿ ಕಂಡವನು. ತಂದೆ ಮಾಳಪ್ಪಯ್ಯಾ ತೀರಿಕೊಂಡಾಗ 'ಯಾವಕ್ಷಣದಲ್ಲಿ ನನಗೆ ವಿಟ್ಠು ಪೈ ಎಂತ ಹೆಸರಿಟ್ಟರು? ಆ ದೇವರಂತೆ ನಾನು ಅನಾತನಾದೆ' ಎಂದು ಹೇಳುವ ವಿಟ್ಠು ಪೈನ ಮಾತುಗಳು ಆತನ ಜೀವನದ ಅನುಭವಗಳನ್ನು ಪ್ರತಿಬಿಂಬಿಸುವಂತೆ ಕಂಡು ಬಂದಿದೆ.

ಸ್ಮಶಾನ ಯಾತ್ರೆಯಂತೆ ಮೌನವಾಗಿ ಸಾಗುತ್ತಿದ್ದ ಗುಂಪುಗಳಲ್ಲಿ ಕೇವಲ ಸಾವಿನ ಸುದ್ದಿ ಅಷ್ಟೆ ಅಲ್ಲ ಜಗಳಗಳು ಕಾಣಿಸಿಕೊಳ್ಳುವುದುಂಟು ಪಾಂಡು ಹೆಗಡೆ ಹೆಂಡತಿಗೂ ನಾಗೇಶ ಹೆಗಡೆಗೂ ಮನಸ್ತಾಪ ಇರುವುದು ಅಲ್ಲಲ್ಲಿ ಕಾಣಿಸಿಕೊಳ್ಳುವ ಸೂಕ್ಷ್ಮತೆಯಾಗಿವೆ. ಇವುಗಳ ಮದ್ಯ ಹುಚ್ಚನಾಗಿ ಕಂಡುಬರುವ ನಾಗೇಶ ಹೆಗಡೆ ಪಾತ್ರ ಎಲ್ಲವು ವಲಸೆಯ ಒಂದೊಂದು ವಿಷಯಗಳೆಂಬಂತೆ ಮುಡಿಬಂದಿವೆ.

ಕಾದಂಬರಿಕಾರರು ಇಲ್ಲಿ ಪ್ರದೇಶಗಳನ್ನು ಊರಹೆಸರಿನಿಂದ ನದಿಗಳ ಹೆಸರಿನಿಂದ ಇಲ್ಲವೇ ದೇವರ ಹೆಸರಿನಿಂದ ಗುರುತಿಸುತ್ತಾ ಹೋಗುತ್ತಾರೆ. ಇದು ನಮ್ಮ ನಾಡು ಸಂಸ್ಕೃತಿ ಪರಿಸರ ಕುರಿತು ವಿವರಣೆಯನ್ನು ನಿಡುತ್ತವೆ. ಪ್ರದೇಶಗಳ ಹೆಸರುಗಳನ್ನು ಉಡುಪಿ, ಕಾರವಾರ, ಬಟ್ಕಳ, ಕುಂಬಳಿ, ಧರ್ಮಸ್ಥಳ, ಗೋಕರ್ಣ, ಕೊಚ್ಚಿ, ಉಳ್ಳಾಲ್ಲ ಎಂದು ಹೆಸರಿಸುವದರಿಂದ ಇತಿಹಾಸದ ಜೊತೆಗೆ ಸ್ಥಳಗಳ ಪ್ರಸಿದ್ಧಿಯನ್ನು ಗುರುತಿಸಿದ್ದಂತಾಗಿದೆ. ಇದೇ ರೀತಿ ಸಿರಿಯಾ, ಘುಲಾ, ನಿರಂಜನಿ, ನೇತ್ರಾವತಿ, ಚಂದ್ರಗಿರಿ ಎಂಬ ನದಿಗಳ ಹೆಸರುಗಳನ್ನು ಕೊಡುತ್ತಾರೆ. ಗ್ರಾಮದೇವತೆಗಳಾಗಿ ಮಾರಮ್ಮಾ, ಅನಂತೇಶ್ವರ, ಕುಂದೇಶ್ವರ ಎಂಬ ದೇವರುಗಳ ಹೆಸರುಗಳನ್ನು ಕೊಡುವದರ ಮೂಲಕ ಪರಿಸರ ಸಂಸ್ಕೃತಿ ಎಲ್ಲಕ್ಕೂ ಅವಕಾಶವನ್ನು ಕಲ್ಪಿಸಿಕೊಂಡತ್ತಾಗಿದೆ.

ಪ್ರದೇಶದಿಂದ ಪ್ರದೇಶಕ್ಕೆ ಇರುವ ಆಚರಣೆ, ಭಾಷೆ, ಪರಿಸರ, ಆಹಾರ ಇತ್ಯಾದಿ ವಿಷಯಗಳಲ್ಲಿ ಭಿನ್ನತೆಯನ್ನು ಕಾಣುತ್ತವೆ. ಪರಿಸರದ ಕುರಿತು ಹೇಳುತ್ತಾ ಅಲ್ಲಲ್ಲಿ ಮಳೆಯ ಆಗುವ ಕುರಿತು ನದಿಗಳು ತುಂಬಿ ಹರಿಯುವ ಚಿತ್ರಣ ಗಿಡಮರಗಳು ಅಚ್ಚಹಸಿರಾದ ಪರಿಸರದ ಚಿತ್ರಣಗಳು ಸುಂದರವಾಗಿ ಕಾದಂಬರಿಯಲ್ಲಿ ಕಂಡು ಬಂದಿದೆ.ಪ್ರದೇಶ ಬಗ್ಗೆ ಹೇಳುತ್ತಾ ರಾಜ-ರಾಣಿಯರ ಚಿತ್ರಣ ಅವರ ಆಡಳಿತ ಯುದ್ಧಗಳ ಕುರಿತು ಸಹ ಹೇಳಿರುವುದು ಕಂಡುಬರುತ್ತದೆ. ನಮ್ಮ ನಾಡಿನ ರಾಜ-ರಾಣಿಯರು ಹೇಗೆ ಇತಿಹಾಸವನ್ನು ಕಟ್ಟಿದವರು ಎಂಬುವದು ಇಲ್ಲಿ ಮುಖ್ಯವಾಗಿ ಗ್ರಹಿಸುವ ವಿಷಯವಾಗಿದೆ. ಆ ಇತಿಹಾಸದಲ್ಲಿ ಕಲ್ಪನೆ ಬೇರೆತು ಸುಂದರವಾಗಿ ಮುಡಿ ಬಂದಿರುವ ಈ 'ಸ್ವಪ್ನ ಸಾರಸ್ವತ' ಕಾದಂಬರಿ ಹಾಲಿನಲ್ಲಿನ ಬೆಣ್ಣೆಯಂತೆ ಕಾಣುತ್ತದೆ. ಈ ಕೆಲಸವನ್ನು ಗೋಪಾಲಕೃಷ್ಣ ಪೈಯವರು ಚನ್ನಾಗಿ ರೂಪಗೂಳ್ಳುವಂತೆ ಮಾಡಿದ್ದಾರೆ.

ಪ್ರದೇಶ ಪರಿಸರ ಕುರಿತು ಹೇಳುವ ನಿರೂಪಕರು ಮತ್ತೆ ವಲಸೆ ಜನರತ್ತ ಕಣ್ಣು ಹಾಯಿಸುತ್ತಾರೆ. ಇಲ್ಲಿ ಒಡವೆ ಕಳೆದು ಕೊಂಡವರ ಗೊಳು ಒಂದೆಡೆಯಾದರೆ ಮಗಳನ್ನು ಕಳೆದುಕೊಂಡ ನಾಗೇಶನ ಹೆಂಡತಿಯ ಗೊಳು ಇನ್ನೊಂದೆಡೆಯಾಗಿ ನಿಲ್ಲುತ್ತದೆ. ಹೀಗೆ ಒಂದೊಂದು ಸಮಸ್ಯೆಗಳು ತಮ್ಮ ಸ್ವರೂಪತಾಳುತ್ತಾ ದೊಡ್ಡದಾಗಿ ನಿಲ್ಲುತ್ತವೆ. ಇವೆಲ್ಲವೂ ಸ್ತ್ರೀ ಸಮಸ್ಯೆಗಳೆಂದೇ ತೊರಿಸುವ ಕಾದಂಬರಿಕಾರರು 'ಮುಳ್ಳು ಮುಳ್ಳಿ ನಿಂದಲೇ ತಗೆಯಬೇಕೆಂಬ' ಮಾತಿನ ಅರ್ಥವನ್ನು ತುಳಿಸೀಬಾಯಿ ಪಾತ್ರದ ಮೂಲಕ ಚನ್ನಾಗಿ ಬಳಸಿಕೊಂಡಿದ್ದಾರೆ. ಸಮಸ್ಯೆಗಳು ಹುಟ್ಟಿಕೊಂಡ ಸಂದರ್ಭದಲ್ಲಿ ಎದ್ದುನಿಂತ ತುಳಿಸೀಬಾಯಿ ಹುಟ್ಟಿದ ಊರು ಹೆತ್ತ ಮಕ್ಕಳು ಮೆಟ್ಟಿದ ನೆಲ ಕುಡಿದ ನೀರು ಯಾವುದು ಉಳಿದಿದೆ? ಎಂಬ ಪ್ರಶ್ನೆ ಎತ್ತುವ ಮೂಲಕ ಎಲ್ಲ ಸಮಸ್ಯೆಗಳಿಗೆ ಕೊನೆ ಹಾಡಿದಳು ಪ್ರಾರಂಭದಲ್ಲಿ ತುಳಿಸೀಬಾಯಿಯ ಪಾತ್ರವನ್ನು ತೂರಿಸದ ನಿರೂಪಕರು ಈ ಸಂದರ್ಭದಲ್ಲಿ ಇಷ್ಟೊಂದು ಮುಖ್ಯ ಪಾತ್ರ ಎನಿಸಿಕೊಳ್ಳಲು ಅವಕಾಶ ಮಾಡಿ ಕೊಟ್ಟಿರುವುದು ಕಾದಂಬರಿಯಲ್ಲಿ ಸ್ತ್ರೀ ಪಾತ್ರಕ್ಕೂ ವಿಶೇಷತೆ ದೊರೆತಂತಾಗಿದೆ.

ಇನ್ನೊಂಡೆ ಸ್ತ್ರೀಯನ್ನು ಪ್ರೀತಿ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. ವಲಸೆ ಎನ್ನುವದು ಇಲ್ಲಿ ಒಂದು ರೀತಿಯ ಕಷ್ಟದ ಪಯಣವೆಂದು ಕಂಡರು ಸಹ ಯಾವದೇ ರೀತಿಯ ಅನುಭವಕ್ಕೆ ಕಡಿಮೆ ಇಲ್ಲದಂತೆಯೋ ವಲಸೆಯನ್ನು ರೂಪಿಸಿದ್ದಾರೆ. ಎಲ್ಲವುಗಳ ಮಧ್ಯ ಗಂಡ–ಹೆಂಡತಿಯ ಸಂಬಂಧ ಹೇಗಿರುತ್ತದೆ ಎಂಬಲ್ಲಿ ತುಳಸೀಬಾಯಿ ತನ್ನ ಗಂಡನ ಉಪಚರಿಸುವ ರೀತಿ ಆತನ ಆಸನಗಳನ್ನು ಪೂರೈಸುವ ರೀತಿ ಎಲ್ಲವೂ ಮೌನವಾಗಿಯೇ ಇಲ್ಲಿ ನಡೆದು ಹೋಗುತ್ತವೆ. ಹೆಂಡತಿಯನ್ನು ಹೆಂಡತಿಯಾಗಿ ನೋಡುತಿದ್ದ ವಿಟ್ಠು ಪೈ ಮುಂದೆ ಅವಳ ಮಾರ್ಗದರ್ಶನ ಪಡೆಯುವ ಮೂಲಕ ತನ್ನ ಏಳಿಗೆಯನ್ನು ಕಾಣುತ್ತಾನೆ. ಈ ವಿಷಯವು ಕಾದಂಬರಿಯಲ್ಲಿ ಆದರ್ಶದ ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಕಾದಂಬರಿಯಲ್ಲಿ ಸ್ತ್ರಿ ಪಾತ್ರಕ್ಕೆ ಸ್ಥಾನ ದ್ವರೆತರು ಸಹ ಕೆಲವು ಹಿನ ಮಾನ ಪದ್ಧತಿಗಳು ಅವಳನ್ನು ಮುಖವಾಗಿಸುತ್ತವೆ. ಗಂಡ ಸತ್ತ ನಂತರ ಹೆಂಡತಿಯು ಸಾಯುವ ಪದ್ಧತಿ ಹಿಂದಿನ ಕಾಲದಲ್ಲಿ ಇತ್ತು. ಇದಕ್ಕೆ ಸತಿ ಸಹಗಮನ ಪದ್ಧತಿ ಎನ್ನುತ್ತಿದ್ದರು. ಇದೇ ರೀತಿಯಲ್ಲಿ ಕಾದಂಬರಿ ವಸ್ತುವಾಗಿ ಬಂದ ಸ್ತ್ರೀ ಪಾತ್ರ ಗಂಡ ಸತ್ತನಂತರ ಮುಂಡೆಯಾಗಿ ತಲೆ ಬೋಳಿಸಿಕೊಂಡು ಸಮಾಜದಿಂದ ದೂರುಳಿದು ನಾಲ್ಕು ಗೊಡೆಗಳ ಮಧ್ಯ ಜೀವನ ನಡೆಸುವದು ಅಲ್ಲದೆ ಶುಭಸಮಾರಂಭದಲ್ಲಿ ಇವರಿಗೆ ಪ್ರವೇಶ ಕೊಡದೆ ಇರುವದು. ಇದು ನಮ್ಮ ಸಂಸ್ಕೃತಿಯನ್ನು ವಿರೋಧಿಸುವ ರೀತಿಯಿಂದ ಕಂಡು ಬಂದಂತೆ ಅನಿಸುತ್ತಿದೆ. ಕಾದಂಬರಿಯಲ್ಲಿ ಸಹ ಮುಂಡೆಯಾದ ಹೆಣ್ಣಿನ ಚಿತ್ರಣವನ್ನು ಅಷ್ಟೋಂದು ಮಹತ್ವ ಎಂಬಂತೆ ಚಿತ್ರಿಸಲೂ ನಿರೂಪಕರು ಮನಸ್ಸು ತೋರಿಸದಿರುವದು ಕಾಣುತ್ತದೆ. ರಾಮಚಂದ್ರ ಪೈ ಮನೆ ಜವಾಬ್ದಾರಿ ಹೊತ್ತಾಗ ತನ್ನ ಅಜ್ಜಿ ತುಳಸೀಬಾಯಿ ಗಂಡ ಸತ್ತ ನಂತರ ಮುಂಡೆಯಾಗಿದ್ದು ಇದೆ ಸಮಯಕ್ಕೆ ರಾಜೊ ಪೈ ಅವಳನ್ನು ಬೊಳಿ ಎಂದು ಕರೆಯುವದು. ಇದು ಬಾಯಿತಪ್ಪಿ ಬಂದ ಶಬ್ದವಾದರು ಸಹಿತ ಅದು ನೈಜತೆಯನ್ನು ಪ್ರತಿನಿದಿಸುತ್ತಿದೆ ಎಂಬುದು ಸತ್ಯದ ಅರಿವಾಗುತ್ತದೆ.

ವಲಸೆ ಹೋಗುವ ಸಾರಸ್ವತ ಸಮುದಾಯಕ್ಕೆ ಮುಖ್ಯ ಸಮಸ್ಯೆಯಾಗಿ ಕಂಡುಬರುವದೇ ಜ್ವರ, ಕಾಲರಾ, ಪ್ಲೇಗ ಅಂತಹ ಮಹಾಮಾರಿ ರೋಗಗಳು ತಮ್ಮ ವಿಶಾಲ ಹಸ್ತವನ್ನು ಚಾಚಿ ಜನರ ಜೀವಗಳನ್ನು ಬಲೆ ತೆಗೆದುಕೊಂಡಿರುವದು. ಈ ಸಂದರ್ಭದಲ್ಲಿ ಜೀವನ ನಡೆಸುವದೇ ಕಷ್ಟವಾಗಿರುವಲ್ಲಿ ರೋಗಗಳಿಂದ ಸಾರಸ್ವತರು ತತ್ತರಿಸಿ ಹೊಗುತ್ತಾರೆ. ಸಾವು ನಿಶ್ಚಿತ ಎಂಬ ನಿರ್ಧಾರಕ್ಕೆ ಬರುತ್ತಾರೆ. ನಮ್ಮ ಗುರಿ ತಲುಪಲು ಆಗುತ್ತದೆಯೂ ಇಲ್ಲವೂ ಎಂಬ ಅಳುಕ ಅವರನ್ನು ಆವರಿಸುತ್ತದೆ. ಈ ಹೊತ್ತಿನಷ್ಟರಲ್ಲಿ ರೋಗಗಳು ವಿಶಾಲ ವ್ಯಾಪ್ತಿಯನ್ನು ಪಡೆದು ಮಕ್ಕಳು ಹಿರಿಯರನ್ನು ಸಾಲು ಸಾಲಾಗಿ ನಿಲ್ಲಿಸಿಕೊಂಡು ಕರೆದ್ವಯುತ್ತವೆ. ಕಾದಂಬರಿಯೂ ವರ್ತಮಾನಕಾಲದಲ್ಲಿ ರಚನೆಗೊಂಡರು ಸಹ ಮಹಾಮಾರಿ ರೋಗಗಳು ಅಂದಿನ ಕಾಲದಲ್ಲಿ ಹೇಗೆ ತಮ್ಮ ಜ್ವಾಲೆಯಂತಿರುವ ಹಸ್ತವನ್ನು ಬಿರುತಿದ್ದವು ಎಂದು

ತೋರಿಸುವಲ್ಲಿ ಪೈಯವರು ಯಶಸ್ಸು ಕಂಡಿದಾರೆ ಅಲ್ಲದೇ ಕಣ್ಣಿಗೆ ಕಟ್ಟುವಂತೆ ಚಿತ್ರಣವನ್ನು ಮಾಡಿದ್ದಾರೆ.

ಸಾರಸ್ವತ ಕುಟುಂಬಗಳಿಗೆ ಬೆನ್ನೆತ್ತಿದ ಬೇತಾಳನಂತೆ ಆಕ್ರಮಣ ಎಂಬುದು ಮೇಲಿಂದ ಮೇಲೆ ಕಿವಿಗೆ ಬಿಳುತ್ತಲೆ ಇತ್ತು. ಮೂಲದಲ್ಲಿ ವೆರಣಿಯಲ್ಲಿ ಕಾಣಿಸುವ ಅಕ್ರಮಣ ಕೊನೆಯಲ್ಲಿ ಮಂಗಳೂರು ಪ್ರದೇಶದತ್ತ ಕಿರಸ್ತಾನರಾದ ಜನರು ಮರಾಠಿಗರಿಂದ ಶೋಷಣೆಗೆ ಒಳಗಾದ ವಿಷಯ ಪ್ರಸ್ತಾಪವಿದೆ. ಅಂದರೆ ಇಲ್ಲಿ ನಿರೂಪಕರು ಸಾರಸ್ವತ ಸಮುದಾಯಗಳನ್ನು ಮಾತ್ರ ಆಕ್ರಮಣಕ್ಕೆ ಒಳಗಾಗಿವೆ. ಅಂತ ಹೇಳದೆ ಇನ್ನುಳಿದವರ ಮೇಲೆ ಈ ರೀತಿಯ ಆಕ್ರಮಣಗಳು ನಡೆದಿವೆ ಎಂಬುವದನ್ನು ತೊರಿಸಿದ್ದಾರೆ. ಇದರ ಜೊತೆಗೆ ಬೇರೆ ಬೇರೆ ಪ್ರದೇಶಗಳ ಜನರ ಜೀವನ ಭಿನ್ನತೆಗಳನ್ನು ತೊರಿಸುತ್ತಾರೆ. ನಾಗಶಾಪ ಹೊತ್ತ ಪೈ ಕುಟುಂಬ ಒಂದೆಡೆ ಚಿತ್ರಿತವಾದರೆ. ಇದೆ ನಾಗ ಪೂಜೆಯನ್ನು ಮಾಡುವ ಜನರಿದ್ದಾರೆ ಎಂಬುದು ದಕ್ಷಿಣ ಕಡೆಯ ಪ್ರದೇಶಗಳನ್ನು ತೊರಿಸುತ್ತಾರೆ. ಭಾಷೆಯಲ್ಲಿ ಪದಗಳ ಬಳಕೆಯು ಬೇರೆಯಾಗಿ ಕಾಣುತ್ತವೆ. ಅಲ್ಲಿ ಅಪ್ಪನನ್ನು ಅಮ್ಮನಂತಲು ಅಮ್ಮನನ್ನು ಅಪ್ಪನಂತಲೂ ಕರೆಯುತ್ತಿರುವ ಜನರು ಇದ್ದಾರೆ. ಇವರ ರೋಗಗಳು ಸಹ ಬೇರೆಯಾಗಿವೆ ಎಂಬುವದನ್ನು ತಿಳಿಸಲು ಆನೆಕಾಲ ರೋಗದ ಕುರಿತು ಹೇಳುತ್ತಾರೆ. ಎಲ್ಲಾ ವಿಷಯಗಳಲ್ಲಿ ಸಾರಸ್ವತರಿಗೆ ಭಿನ್ನವಾಗಿಯು ಈ ಜನರ ಚಿತ್ರಣವನ್ನು ಕಾದಂಬರಿಕಾರರು ಮಾಡಿದ್ದಾರೆ.

ಕಾದಂಬರಿಯಲ್ಲಿ ವ್ಯಾಪಾರ ಎನ್ನುವದು ಮೂಲದಿಂದ ಹುಟ್ಟಿ ವಲಸೆಯಲ್ಲಿ ಪ್ರವೇಶ ಮಾಡಿ ಕೊನೆಗೆ ವ್ಯಾಪಾರದಿಂದಲೇ ಎಲ್ಲವೂ ಎಂಬುದರಲ್ಲಿ ಮುಕ್ತಾಯಗೊಳ್ಳುತ್ತದೆ. ವಲಸೆ ಪ್ರಾರಂಭದಿಂದ ಹಲವು ಕುಟುಂಬಗಳು ಸೇರಿದ್ದರು ಸಹ ಪ್ರದೇಶದಿಂದ ಪ್ರದೇಶಕ್ಕೆ ಬರುವಲ್ಲಿ ತಮ್ಮ ಅನುಕುಲಕ್ಕೆ ತಕ್ಕಂತೆ ಅಲ್ಲೇ ನೆಲೆ ನಿಲ್ಲುವದು ಇದರಿಂದಾ ವಲಸೆ ಕೊನೆಯಲ್ಲಿ ಅಂದರೆ ಕುಂಬಳಿಗೆ ಬರುವಲ್ಲಿ ಪೈ, ಕಾಮತಿ, ಮ್ಹಾನ್ಯೆ, ಕಿಣಿ ಎಂಬ ನಾಲ್ಕು ಕುಟುಂಬಗಳಿಗೆ ಸೀಮಿತವಾಗಿ ಕೊನೆಗೆ ಬಳ್ಳಂಬೀಡಿನ ಪೈ ಕುಟುಂಬಕ್ಕೆ ಸೀಮಿತಗೊಳ್ಳುವ ಮುಖಾಂತರ ಕಾದಂಬರಿ ಮುಕ್ತಾಯ ಕಾಣುತ್ತದೆ. ಇಲ್ಲಿ ವಲಸೆಯಲ್ಲಿ ರಾಜಕಾರಣದ ಸೂಕ್ಷ್ಮಗಳು, ಭೂಮಿಯ ಪ್ರಶ್ನೆ ತನ್ನ ಸಮುದಾಯದಲ್ಲಿ ಕುಟುಂಬದಲ್ಲಿ ಹುಟ್ಟಿಕೊಂಡ ಸ್ವಾರ್ಥ, ಅಸುಯೆ, ದ್ವೇಷಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಬದುಕನ್ನು ಕಟ್ಟಿಕೊಳ್ಳುವ ಆಶೆಯವಾಗಿ ಇಲ್ಲಿನ ವಲಸೆಯ ಆಶೆಯ ಬಂದಿದೆ. ವಿಟ್ಠು ಪೈ ತನಗೆ ತಿಳಿದಿದ್ದ ತಮ್ಮ ಕುಲದ ಎಲ್ಲಾ ಸಂಗತಿಗಳನ್ನು ಗೋವೆಯ ವಿವರಗಳನ್ನು ತಮ್ಮ ಹೋರಾಟವನ್ನು ತಮ್ಮ ಕುಲಕ್ಕೆ ಇರುವ ಭಾಗ್ಯ ಮತ್ತು ಅಂಟಿದ ಶಾಪವನ್ನು ನಾನೂರು ವರ್ಷಗಳ ನಂತರ ಮುಂದಿನ ತಲೆಮಾರು ಹಿಂದುರಗಬಹುದೆಂಬ ವಿಚಾರವನ್ನು ತನ್ನ ಮೊಮ್ಮಗ ರಾಮಚಂದ್ರ ಪೈಗೆ ಹೇಳುವ ಮೂಲಕ ವಿಟ್ಠು ಪೈ ಕಣ್ಣು ಮುಚ್ಚುತ್ತಾನೆ. ಕಾದಂಬರಿ ಇತಿಹಾಸದ ಮತ್ತು ಕಲ್ಪನೆಯ ಮಿಶ್ರಿತವಾದರೂ ಸಹ ಕಾದಂಬರಿಯಲ್ಲಿ ಕಥನ ಇತಿಹಾಸ ಮತ್ತು

ವರ್ತಮಾನ ಎರಡು ಕಾಲವನ್ನು ಒಳಗೊಂಡಿದೆ. ರಾಚ್ಯೊ ಪೈ ತನ್ನ ಪೂರ್ವಜರ ಇತಿಹಾಸ ತಿಳಿದುಕೊಂಡು ಅದನ್ನು ತನ್ನ ವರ್ತಮಾನ ಕಾಲಕ್ಕೆ ಬಳಸಿಕೊಳ್ಳುವ ರೀತಿಯು ಇಲ್ಲಿ ಮಹತ್ವದಾಗಿದೆ. ಈ ಚಿತ್ರಣವನ್ನು ನಿರೂಪಕರು ಸುಂದರವಾಗಿ ಚಿತ್ರಿಸಿದ್ದಾರೆ.

೫.೩ ಕುಂಬಳೆ ಪ್ರದೇಶದ ಸಾರಸ್ವತ ಸಮುದಾಯ

ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಿಟ್ಠು ಪೈನ ಜೀವನದಿಂದ ಮುಕ್ತಾಯದ ಹಂತ ಒಂದು ಘಟ್ಟವಾದರೆ ಈ ಕಥೆಯನ್ನು ಕೇಳಿದ ರಾಮಚಂದ್ರ ಪೈನವರ ಜೀವನ ಪ್ರಾರಂಭದಿಂದ ಕಾದಂಬರಿಯ ಕೊನೆಯ ಹಂತ ಪ್ರಾರಂಭವಾಗಿ ಇವರ ಅನುಭವದ ಕೊನೆಯಲ್ಲಿ ಕಾದಂಬರಿ ಮುಕ್ತಾಯ ಗೊಳ್ಳುತ್ತದೆ. ಈ ಕಾದಂಬರಿಯು ನಾಲ್ಕನೆಯ ಭಾಗದಲ್ಲಿ ರಾಮಚಂದ್ರ ಪೈ ಬಳ್ಳಂಬೀಡಿನಲ್ಲಿ ಬಂದು ನೆಲೆ ನಿಂತ ನಂತರ ಅಭಿವೃದ್ಧಗೊಂಡ ಬಗ್ಗೆ ತುಂಬಿದ ಮನೆಯ ಯಜಮಾನಿಕೆಯನ್ನು ನಡೆಸುವದರೊಂದಿಗೆ ಆರಂಭಗೊಂಡು ಸಮಾಜದಲ್ಲಿ ಬೇರು ಬಿಡುವ ಪ್ರಕ್ರಿಯೆಯನ್ನು ಚಿತ್ರಿಸುತ್ತದೆ. ಶಾಪ ಫಲಿಸಿತೆನೋ ಎಂಬ ಅಳುಕು ಅದರಿಂದ ಮುಕ್ತಿ ಪಡೆಯಲು ಮಾಡಿದ ಕಾರ್ಯಗಳ ವಿವರ ಒಂದಾದರೊಂದರಂತೆ ಸಾವು ದಾಯಾದಿ ಕಲಹಗಳು ಅಣ್ಣ ತಮ್ಮಂದಿರು ಬೇರಾಗುವಿಕೆ ತಮ್ಮ ವೈರತ್ವದಲ್ಲಿ ದೇವರನ್ನು ಬಳಸಿಕೊಳ್ಳುವದು ಮಾಟಮಂತ್ರ ತಂತ್ರಗಳು ತಲೆ ಎತ್ತಿ ನಿಲ್ಲುತ್ತವೆ. ಇದರಿಂದ ಅಸಹಾಯಕತೆ ತಾಂಡವಾಡುತ್ತೆ. ದುರಂತ ಸಾವುಗಳಿಂದ ಎಲ್ಲೆಡೆ ವಿಷಾದವಾತಾವರಣ ಚಿತ್ರಿಸುತ್ತವೆಸೆ. ಇವುಗಳ ಮಧ್ಯ ಅನೈತಿಕ ಸಂಬಂಧಗಳು, ಸ್ತ್ರೀ ಪಾತ್ರ ಚಿತ್ರಣ ಮುಖ್ಯ ಎನಿಸಿಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಕಾದಂಬರಿ ತನ್ನ ಚೌಕಟ್ಟನ್ನು ಮೀರಿ ಬೆಳೆದಿದೆ. ಎಂಬುದನ್ನು ಕಂಡುಕೊಂಡರು ಸಹ ಈ ಒಂದು ದುರಂತಗಳನ್ನು ತನ್ನ ಹೊದಿಕೆಯಾಗಿ ಪಡೆದುಕೊಂಡು ಕಾದಂಬರಿ ಎಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ದುರಂತವೇ ಇಲ್ಲಿ ಜೀವಾಳ ಎಂಬಂತೆ ಪೈಯವರು ಚಿತ್ರಣಮಾಡುವದರಲ್ಲಿ ಯಶಸ್ವಿಯಾಗಿದ್ದಾರೆ.

ಕಾದಂಬರಿಯ ವಸ್ತು ಆಶೆಯವು ವಲಸೆ, ವ್ಯಾಪಾರ, ಕೃಷಿ, ಮತಾಂತರ ಇವುಗಳ ಸೂತ್ರ ಹೆಣೆದು ಕೊಂಡಿದೆ. ಕಥೆಯನ್ನು ಕೇಳಿದ ರಾಮಚಂದ್ರ ಪೈ ತನ್ನ ಪೂರ್ವಜರ ಶಾಪ, ನಡೆಸಿಕೊಂಡು ಹೋಗಬೇಕಾದ ಕಾರ್ಯಗಳತ್ತ ಗಮನ ಹರಿಸುತ್ತಾನೆ. ಪೂರ್ವಜರಂತೆ ಇತನು ವ್ಯಾಪಾರಕ್ಕೆ ಕೈ ಹಾಕುವ ಮೂಲಕ ತನ್ನ ಕುಟುಂಬದ ಜವಾಬ್ದಾರಿ ಹೊತ್ತುಕೊಳ್ಳುತ್ತಾನೆ. ಕುಂಬಳೆಯಲ್ಲಿ ಪರಿಸರವು ಮುದಿ ಬಂದದ್ದು ಅಲ್ಲಿಯ ಕೃಷಿಭೂಮಿ, ಸಮುದ್ರ, ವ್ಯಾಪಾರ ಭರಾಟೆ ಎಲ್ಲವೂಗಳ ಚಿತ್ರಣ ಕಾದಂಬರಿಯಲ್ಲಿ ಹುದುಗಿದೆ. ಸಾರಸ್ವತರು ವ್ಯಾಪಾರದ ಜೊತೆ ಜೊತೆಯಲ್ಲಿ ವಿವಾಹ ಸಂಬಂಧಗಳು ಸಹ ಬೆಳೆದುಕೊಂಡು ಹೊಗುತ್ತವೆ. ಇದೇ ಹೊತ್ತಿಗೆ ಗೋವಾದ

ಕ್ರೈಸ್ತರನ್ನು ಶಿವಾಜಿ ಮಹಾರಾಜ ಕಡೆಯವರು ಓಡಿಸುವಾಗ ಚಲ್ಲಾಪಿಲ್ಲಿಯಾಗಿ ಹರಡಿ ಹೊಗುತ್ತಾರೆ ಆಗ ರಾಮಚಂದ್ರ ಪೈ ಅವರನ್ನು ಕಂಡು ಮಾತನಾಡಿಸುತ್ತಾನೆ. ಇದು ಸಂಯುಕ್ತತೆಯನ್ನು ಬಯಸುವ ವಿಶಾಲ ಹೃದಯವಂತಿಕೆಯನ್ನು ಸೂಚಿಸುತ್ತದೆ. ವಲಸೆಗಾರರಲ್ಲಿ ಈ ಮನೋಭಾವನೆ ಇರುತ್ತದೆ ಎಲ್ಲರನ್ನು ನಮ್ಮವರು ತಮ್ಮ ಗೋವೆಯವರು ಹಿಂದೆ ನಮಗೆ ಎಂತಹ ಕಷ್ಟ ಬಂದಿತ್ತೋ ಅಂತಹ ಕಷ್ಟದಲ್ಲಿರುವವರು ಎಂದು ಭಾವಿಸುವ ಮನೋಧರ್ಮದ ರಾಮಚಂದ್ರ ಪೈ ಕೂಡಾ ಒಂದು ರೀತಿಯ ವಲಸೆ ಮನೋಭಾವದವನೆ ಎಂಬುದನ್ನು ತಿಳಿಯುತ್ತದೆ.

ರಾಚ್ಪೊ ಪೈಗೆ ಭೂಮಿ ಕೊಳ್ಳುವ ಆಸೆ ಇದು ಆತನ ಅಜ್ಜನ ಆಸೆಯು ಆಗಿತ್ತು. ಇಲ್ಲಿ ನಿರೂಪಕರು ಭೂಮಿ, ವ್ಯಾಪಾರ, ವಿವಾಹ, ಈ ಮೂರು ವಿಷಯಗಳನ್ನು ರಾಮಚಂದ್ರ ಪೈ ಪಾತ್ರದ ಮೂಲಕ ಹರಿಸುತ್ತಾರೆ. ವಿವಾಹ ಎನ್ನುವದು ಸಾರಸ್ವತ ಕುಟುಂಬದಲ್ಲಿ ಅದು ವಯಸ್ಸಿಗೆ ಬರುವ ಪೂರ್ವದಲ್ಲಿ ವಿವಾಹ ವಾಗಬೇಕು. ಈ ರೀತಿಯ ನಿಯಮಗಳಿಗೆ ಬದ್ಧವೆಂಬಂತೆ ರಾಚ್ಪೊ ಪೈ ಕಾಲಕಾಲಕ್ಕೆ ಮಾಡುವ ಕಾರ್ಯಗಳನ್ನು ಮಾಡುತ್ತಾನೆ. ಇವುಗಳ ಮಧ್ಯ ಧರ್ಮ, ದೇವರ ಪ್ರತಿಷ್ಠಾಪಣೆ ಎಂಬ ವಿಷಯ ಎಲ್ಲ ಸಾರಸ್ವತರಲ್ಲಿ ಮುಡುವ ಮೂಲಕ ಒಂದು ದೇವಾಲಯ ಕಟ್ಟಿಸಲು ಮುಂದಾಗುತ್ತಾರೆ. ಇದು ಒಂದು ಕುಂಟುಂಬಕ್ಕೆ ಆಶ್ರಯ ನಿಡುವ ಉದ್ದೇಶವು ಇದರಲ್ಲಿ ಕಾಣುತ್ತೇವೆ. ಅಲ್ಲದೇ ತಮ್ಮ ಕುಟುಂಬಗಳಿಗೆ ಒಬ್ಬ ದೇವರು ಬೇಕು ಎನ್ನುವ ಹಿನ್ನೆಲೆಯಲ್ಲಿ ವಿಠ್ಠಲ ದೇವಾಲಯ ನಿರ್ಮಿಸಿದರು. ಕುಂಬಳಿಗೆ ವಲಸೆ ಬಂದ ಕುಟುಂಬಗಳಾದರು ಸಹ ತಮ್ಮ ನೆಲದಂತೆ ಅಲ್ಲೇ ನೆಲೆಯುರಿ ಬದುಕಲು ಪ್ರಾರಂಭಿಸಿದರು. ಇದು ವಲಸೆಯನ್ನು ಮಾತ್ರ ಸೂಚಿಸದೆ ನಮ್ಮ ನಾಡು ನುಡಿ ಎಂಬ ಭಾವನೆ ಬರುವ ಹಾಗೇ ಚಿತ್ರಣ ಗೊಂಡಿದೆ. ಇಲ್ಲಿ ಭೂಮಿ ಪಡೆದುಕೊಳ್ಳುವುದೇ ಮುಖ್ಯ ವಿಷಯವಾಗಿದೆ. ತನ್ನ ಪೂರ್ವಜರ ಆಸೆಯನ್ನು ಪೂರೈಸಬೇಕೆಂಬ ಆಸೆ ರಾಚ್ಪೊ ಪೈಗೆ ಇದೆ. ಈ ಸಮಯದಲ್ಲಿ ಸಮಸ್ಯೆಗಳು ಸಾಲು ಸಾಲಾಗಿ ಬಂದು ನಿಲ್ಲುತ್ತವೆ ಆದರು ಛಲಬಿಡದೆ ಮುಂದೆ ಸಾಗುತ್ತಾನೆ. ದಾಸಮಲ್ಯ ಜಮೀನು ತೆಗೆದು ಕೊಂಡ ಸುದ್ದಿ ತಿಳಿದನಂತರೆ ಇತನಿಗೆ ಭೂಮಿ ಆಸೆ ಇಮ್ಮಡಿಗೊಳ್ಳುತ್ತದೆ. ಇಲ್ಲಿ ನಿರೂಪಕರು ಭೂಮಿಗಾಗಿ ಆತ ಮಾಡಿದ ಕೆಲಸ ಎಲ್ಲವೂ ಬೀಡಿ ಬೀಡಿಯಾಗಿ ತೊರಿಸುತ್ತಾ ಹೊಗುತ್ತಾರೆ. ಕೊನೆಗೆ ಮಣೆಯಾಣಿಗಳಿಂದ ಬೆಳ್ಳಂಬೀಡಿನಲ್ಲಿ ನಾನೂರು ಎಕರೆ ಭೂಮಿಯನ್ನು ಐವತ್ತು ವರಹಕ್ಕೆ ಕಡಿಮೆಯಾಗುವಂತೆ ತೆಗೆದುಕೊಳ್ಳುತ್ತಾನೆ. ಇಲ್ಲಿ ಭೂಮಿ ಪ್ರಶ್ನೆ ಬರುವದು ಒಂದೆಡೆ ನೆಲೆನಿಲ್ಲಲು ಅನುಕೂಲ ಕಲ್ಪಿಸಿ ಕೊಡುತ್ತದೆ. ಆದಿವಾಸಿಗಳು ತಮ್ಮ ವ್ಯವಸಾಯವನ್ನು ಕಾಲಕಾಲಕ್ಕೆ ಬೇರೆ ಬೇರೆ ಸ್ಥಳಗಳಲ್ಲಿ ಮಾಡುತ್ತಿದ್ದರು. ಇವರಂತೆ ಸಾರಸ್ವತರು ಕಾಣಬಾರದೆಂಬ ಮುಂಜಾಗ್ರತೆ ವಹಿಸಿ ಇಲ್ಲಿ ನಿರೂಪಕರು ಭೂಮಿಯ ವಿಷಯವನ್ನು ಕಾದಂಬರಿಯಲ್ಲಿ ಇಟ್ಟಿರುವದು ಕಂಡುಬರುತ್ತದೆ.

ಕುಂಬಳೆ ಪ್ರದೇಶವನ್ನು ನಾಗಪ್ಪಯ್ಯ ಮತ್ತು ಆತನ ಹೆಂಡತಿ ರುಕ್ಮಾಬಾಯಿ ತೀರಿಕೊಂಡ ಬೆನ್ನೆಲ್ಲೇ ರಾಚ್ಚೊ ಪೈ ಬೆಳ್ಳಂಬೀಡಿನಲ್ಲಿ ನೆಲೆನಿಲ್ಲುತ್ತಾನೆ. ಇಲ್ಲಿಂದ ಕಾದಂಬರಿಯ ಕೊನೆಯ ಹಂತ ಪ್ರಾರಂಭಗೊಳ್ಳುತ್ತದೆ. ವ್ಯಾಪಾರದ ಬದಲಿಗೆ ಕೃಷಿ ಇಲ್ಲಿ ಮುಖ್ಯ ಎನಿಸಿದೆ. ಕೌಟುಂಬಿಕ ಕಲಹಗಳು ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತವೆ. ಈ ಹೊತ್ತಿಗಾಗಲೇ ರಾಚ್ಚೊ ಪೈಗೆ ಅನಂತ ಪೈ, ತಮ್ಮ ಪೈ, ಸಿದ್ದು ಪೈ ಎಂಬ ಮೂರು ಗಂಡು ಮಕ್ಕಳಾಗಿದ್ದವು. ಇವರ ಜೊತೆ ಶಿವಪ್ಪ ಪೈ ಮತ್ತು ದೇವೂ ಪೈ ಎಂಬ ಇಬ್ಬರು ತಮ್ಮಂದಿರು ದಾಯಾದಿ ಕಲಹವಾಗದಂತೆ ನೋಡಿಕೊಳ್ಳಬೇಕೆಂಬ ಅಜ್ಜನ ಧ್ವನಿ ಆಗಾಗ ರಾಚ್ಚೊ ಪೈ ನನ್ನ ಜಾಗ್ರತಗೊಳಿಸುತ್ತಿತ್ತು. ಆದರು ಸಹ ಕೆಲವು ಸಮಯದಲ್ಲಿ ಅದು ಕೈ ಮೀರಿ ನಡೆಯುವುದುಂಟು. ತಾನು ಜಮೀನು ಪಡೆದರೆ ಸಾಲದು ತಮ್ಮಂದಿರಿಗು ಜಮೀನು ಮಾಡಬೇಕೆಂಬ ಹಂಬಲ ಅದಕ್ಕೆ ಕಾರ್ಯ್ಯಾಡು ಮತ್ತು ಕೊಂಭ್ರಾಜನಲ್ಲಿ ಆಸ್ತಿಕೊಳ್ಳುವದು. ಇವೆಲ್ಲ ರಾಚ್ಚೊ ಪೈನ ಮೂಲಕ ನಡೆದರು ಸಹ ಮುಂದೆ ನಡೆಯುವ ಘಟನೆಗೆ ಕಾರಣ ಇತನೆ ಎಂಬಂತೆ ಚಿತ್ರಣವನ್ನುಮಾಡಿದ್ದಾರೆ. ಆಸ್ತಿ ಸಂಪಾದನೆ, ವ್ಯಾಪಾರದಲ್ಲಿ ಪಡೆದ ಲಾಭ ಇವೆಲ್ಲವೂ ರಾಚ್ಚೊ ಪೈಗೆ ಸಂತೋಷವೆನಿಸಿದರು ಕೂಡಾ ಮಕ್ಕಳನ್ನು ಬೆಳೆಸುವುದರಲ್ಲಿ ಇತ ಸೋಲ್ಲನ್ನು ಅನುಭವಿಸುತ್ತಾನೆ.

ಅನಂತ ಪೈನ ಚಿತ್ರಣ ಇಲ್ಲಿ ಸಾರಸ್ವತ ಕುಟುಂಬಕ್ಕೆ ಮಸಿ ಹಚ್ಚಿಕೊಳ್ಳುವ ರೀತಿಯಲ್ಲಿ ಕಂಡು ಬಂದಿದೆ. ತನ್ನ ಕಚ್ಚೆ ಹರುಕತನ ಮನೆಯಲ್ಲಿ ಇತ ಬೇಡ ಅನಿಸುವಮಟ್ಟಿಗೆ ಹೊಗುತ್ತಾನೆ. ತನ್ನ ಜೀವನದಲ್ಲಿ ಹಲವು ಹೆಣ್ಣುಗಳೊಂದಿಗೆ ಸಂಬಂಧ ಇಟ್ಟುಕೊಂಡ ಇತ ಕೊನೆಗೆ ತನ್ನ ಸಾವುವನ್ನು ತಾನೆ ತಂದುಕೊಳ್ಳುತ್ತಾನೆ. ಕಾದಂಬರಿಯಲ್ಲಿ ಹೆಣ್ಣಿನ ಸಂಬಂಧ ಇಟ್ಟು ಕೊಂಡ ಪಾತ್ರಗಳಾಗಿ ವಿಟ್ಠು ಪೈ ನಾಗಪ್ಪಯ್ಯ ಮತ್ತು ಅನಂತ ಪೈನ ಪಾತ್ರಗಳನ್ನು ಕಾಣುತ್ತೇವೆ. ತನ್ನ ಮಗ ಅನಂತ ಪೈ ಅನ್ನು ಪೂಜಾರಿ ಮೊಮ್ಮಗಳ ಸಾವಿಗೆ ಕಾರಣನೆಂದು ತಿಳಿದರು ಸಹ ರಾಚ್ಚೊ ಪೈ ಅಸಹಾಯಕನಾಗಿ ನಿಂತುಕೊಳ್ಳುತ್ತಾನೆ. ಈ ಹೊತ್ತಿಗಾ ಅನಂತ ಪೈಗೆ ಮದುವೆಯಾಗಿ ಹೆಂಡತಿ ಮನೆಗೆ ಬಂದಿರುತ್ತಾಳೆ. ಇಲ್ಲಿ ಕಾದಂಬರಿಕಾರರು ಪ್ರತಿಭಟಿಸುವ ಪಾತ್ರ ಚಿತ್ರಣ ಮಾಡಿದರು ಸಹ ಸಮಯಕ್ಕೆ ಅದು ಸೌಮ್ಯವಾಗಿ ಒಪ್ಪಿಕೊಳ್ಳುವಂತೆ ಮಾಡಿದ್ದಾರೆ.

ಸಾರಸ್ವತರಲ್ಲಿ ಹಬ್ಬ ಹರಿದಿನಗಳ ಚಿತ್ರಣವೂ ಮುಖ್ಯವಾಗಿದೆ. ಹಬ್ಬದ ಸಂದರ್ಭಗಳಲ್ಲಿ ಎಲ್ಲರೂ ಸೇರಿ ಆಚರಣೆ ಮಾಡುವುದು ಈ ಸಮಯದಲ್ಲಿ ಒಂದು ಘಟನೆ ಜರಗುತ್ತದೆ.ಈ ಘಟನೆಯೋ ಕಾದಂಬರಿ ಕೊನೆಯವರೆಗೆ ಜ್ವಾಲೆಯಂತೆ ಬೆಳೆಯುತ್ತದೆ. ತಿಮ್ಮ ಪೈ ಮತ್ತು ಶಿವಪ್ಪಯ್ಯಗೆ ಆದ ದಾಯಾದಿ ಕಲಹವೂ ಎರಡು ಮನೆಗಳ ಇಬ್ಭಾಗಕ್ಕೆ ಕಾರಣವಾಗುತ್ತದೆ. ಇತ್ತ ಮಂಜುನಾಥನ ಆಣೆ ಹಾಕಿ ದೂರವಾಗುವ ಶಿವಪ್ಪಯ್ಯ ಒಂದೆಡೆಯಾದರೆ ತಂದೆಯಿಂದಾ ದೂರವಿರಲು ಬಯಸಿ ತಿಮ್ಮ ಪೈ ಸರ್ಪಕ್ಕೆ ಬಲಿಯಾಗುವುದು ಇನ್ನೊಂದೆಡೆಯಾಗಿದೆ. ಗಂಡನ ಆಜ್ಞೆಯಂತೆ ಆತ ಹೇಳಿದ ಮನೆಯಲ್ಲಿವಾಸಿಸುವ ಜಾಹ್ನವಿ ಪಿಶಾಚಿಯಂತೆ ಬದುಕುವುದು ಮುಂದೆ

ತನ್ನ ಜೊತೆಗಿದ್ದವಳನ್ನೇ ಹರಿದು ತಿನ್ನುವುದು ಸಾವುಗಳು ಸಾಲುಸಾಲಾಗಿ ನಿಲ್ಲುತ್ತವೆ. ರಾಚ್ಚೊ ಪೈಗೆ ತನ್ನ ಅಜ್ಜ ವಿಟ್ಟು ಪೈ ಹೇಳಿದ ಮಾತು ನೆನಪಾಗುತ್ತದೆ. ನಾನು ಸಾವಿನ ಸಂತೆಯನ್ನೇ ಕಂಡಿದ್ದೆ ಎಂದು ಹೇಳಿದ ಮಾತು ರಾಚ್ಚೊ ಪೈ ಜೀವನದಲ್ಲಿ ನಡೆದು ಹೋಗುತ್ತದೆ. ಅಣ್ಣ-ತಮ್ಮಂದಿರು ಮಕ್ಕಳನ್ನು ಕಳೆದುಕೊಂಡ ರಾಚ್ಚೊ ಪೈ ಅನಾಥನಾಗುತ್ತಾನೆ.

ಭುಜಂಗ ಪೈನ ಹಗೆತನ ಬೆಳೆಯುತ್ತಾ ಹೋಗುತ್ತವುದು ಅದರಿಂದಾಗುವ ಅನಾಹುತಗಳು ಎಲ್ಲವೂ ಕಾದಂಬರಿಯ ವಸ್ತುವಿಗೆ ಜೀವ ತುಂಬುತ್ತಾ ಹೋಗುತ್ತವೆ. ತನ್ನ ತಂದೆಯ ಸಾವಿಗೆ ಕಾರಣರಾದ ಬಳ್ಳಂಬೀಡಿನ ಪೈ ಕುಟುಂಬದ ನಾಶಮಾಡುವ ಪಣತೊಟ್ಟ ಭುಜಂಗ ಪೈ ತನ್ನ ಕಾರ್ಯಸಾಧನೆಗೆ ಏನೂ ತಿಳಿಯದ ರಂಗಪೈನ ಜೀವತೆಗೆದು ಕೊಳ್ಳುತ್ತಾನೆ. ಭೂತ ಮಂತ್ರವಾದಿ ಎನ್ನುತ್ತ ಎಲ್ಲ ಪ್ರಯೋಗಗಳನ್ನು ಮಾಡಿ ಕೊನೆಗೆ ತಾನೇ ಬೆಂಕಿ ಇಡಲು ಮುಂದಾದ ಸಮಯದಲ್ಲಿ ಆತನಿಗೆ ಬಂದ ಕೆಲಸವೇ ಮರೆತು ತನ್ನ ಪ್ರಾಣಕ್ಕೆ ಸಂಚಕಾರವನ್ನು ತಂದು ಕೊಳ್ಳುತ್ತಾನೆ. ಇಲ್ಲಿ ನಿರೂಪಕರು ಪಾತ್ರದ ಮೂಲಕ ವಸ್ತುವನ್ನೇ ನೋಡುತ್ತಾರೂ ಇಲ್ಲಾ ಪಾತ್ರವೇ ನಿರೂಪಕರನ್ನು ಕರೆದುಕೊಂಡು ಹೋಗಿದೆ ಎನ್ನವುದನ್ನು ಗುರ್ತಿಸಲು ಸಾಧ್ಯವಿಲ್ಲ ಎಂಬಂತೆ ಚಿತ್ರಣಗೊಂಡಿದೆ. ಇಲ್ಲಿ ಕಲ್ಪಿನೆಯ ಶಕ್ತಿ ಚನ್ನಾಗಿ ಹರಿದಂತೆ ಕಂಡು ಬರುತ್ತದೆ. ಭುಜಂಗ ಪೈ ದಾಯಾದಿಗಳ ನಾಶಕ್ಕೆ ಬಂದು ತಾನೆ ಬೆಂಕಿಗೆ ಸಿಕ್ಕು ಬುದಿಯಾಗುವ ಪ್ರಸಂಗ ಇತ್ತ ಕಾವೇರಮ್ಮನ ಹಂಠಮಾರಿತ ಎಲ್ಲವು ತಲೆಯೆತ್ತಿ ನಿಲ್ಲುತ್ತದೆ. ಮಗನ ಸಾವಿಗಿಂತಾ ಹಗೆತನವೇ ಕಾಮರಮ್ಮನಿಗೆ ಮುಖ್ಯ ಎಂಬಂತೆ ಇಲ್ಲಿ ಚಿತ್ರಿಸಲಾಗಿದೆ. ಈ ಎಲ್ಲಾ ದೃಶ್ಯಗಳನ್ನು ಕಂಡ ರಾಚ್ಚೊ ಪೈ ಜೀವನದಲ್ಲಿ ನೊಂದು ಹೋಗುತ್ತಾನೆ. ಅವನ ಆಸೆ ಒಂದೇ ನಾಗ್ಡೂ ಬೇತಾಲ ನನ್ನು ಕಾಣುವದು ಅವನ ಕೈಯಲ್ಲಿ ತನ್ನ ಮೊಮ್ಮಗ ಸಿದ್ಧನ ವೆಂಕಟೇಶನನ್ನ ಕುಡುವದು. ತನ್ನ ಜವಾಬ್ದಾರಿ ಕಳೆದುಕೊಳ್ಳುವದರ ಜೊತೆಗೆ ರಾಮಚಂದ್ರ ಪೈ ತನ್ನ ಜೀವನ ಕೊನೆ ಘಟ್ಟಿನ ಬಾಗಿಲನ್ನು ತಿಟ್ಟಿರುತ್ತಾನೆ.

ಸ್ತ್ರೀಯ ಕುರಿತಾಗಿ ಹೇಳುತ್ತಾ ಕಾದಂಬರಿಕಾರರು ಅಂದಿನ ಕಾಲದ ವಿವಾಹದ ಬಗ್ಗೆ ಹೇಳುತ್ತಾರೆ. ಹೆಣ್ಣು ಮಕ್ಕಳಿಗೆ ಹದಿಮೂರು ವರ್ಷವಾದ ತಕ್ಷಣ ಮದುವೆ ಮಾಡುವ ಶಾಸ್ತ್ರ ಅಂದಿನ ಕಾಲದಲ್ಲಿತ್ತು. ಈ ಪದ್ಧತಿಯೂ ಕಾದಂಬರಿಯಲ್ಲಿ ಬರುವ ಎಲ್ಲಾ ವಿವಾಹಗಳಿಗೆ ಅನ್ವಯವಾಗುವಂತೆ ಚಿತ್ರಿಸಿದ್ದಾರೆ. ವಿವಾಹದ ಕುರಿತು ಹೇಳುವ ಕಾದಂಬರಿಕಾರರು ಗಂಡ ಸತ್ತ ಹೆಂಡತಿಯ ವಿಧವೆ ತನದ ಕುರಿತು ಇಲ್ಲಿ ಹೇಳುತ್ತಾರೆ. ಸ್ತ್ರೀಗೆ ಸಮಾಜದಲ್ಲಿ ಗಂಡ ಬದುಕಿರುವವರೆಗೆ ಸ್ಥಾನಮಾನ, ಗೌರವದಿಂದಾ ಬದುಕಲು ಅರ್ಹಳು ಗಂಡಸತ್ತನಂತರ ತಲೆ ಬೋಳಿಸುವ ಕ್ರಮ ಅವಳನ್ನು ರಂಡೆ ಮುಂಡೆ ಎಂದು ಕರೆಯುವ ಪದ್ಧತಿ ಎಲ್ಲವೂ ಹಿನಮಾನ ಎನಿಸಿಕೊಳ್ಳುತ್ತವೆ. ಆದರೆ ಜಾಹ್ನವಿ ಮತ್ತು ಕಾವೇರಮ್ಮನ ಪಾತ್ರಗಳು ಇದಕ್ಕೆ ಭಿನ್ನವೆಂಬಂತೆ ಚಿತ್ರಣ ಮಾಡಿರುವದು ನಿರೂಪಕರ ಬರವಣಿಗೆಯ ಸೂಕ್ಷ್ಮತೆಯ ಫಲವೆಂತೆಲೇ ಕರೆಯಬಹುದು. ಕುಂಬಳಿ

ಪ್ರದೇಶದಲ್ಲಿರುವ ಸಾರಸ್ವತರ ವಿವಾಹ ಸಂಬಂಧಗಳು ಅಲ್ಲಲ್ಲೇ ಹೆಣೆದುಕೊಳ್ಳುತ್ತಾ ಹೋಗಿವೆ.

ಈ ರೀತಿ ಸಾವು-ನೋವುಗಳಾದರು ಸಹ ರಾಮಚಂದ್ರ ಪೈ ಅಸಹಾಯಕ ನಂತಾಗಿ ಇದೆಲ್ಲ ಶಾಪಗಳ ಫಲವಿರಬಹುದೆಂದು ಕೊಳ್ಳುತ್ತಾನೆ. ಅಜ್ಜ ಹೇಳಿದ ಎಲ್ಲ ಶಾಪಗಳು ನಮ್ಮ ಕುಟುಂಬದ ಮೇಲೆ ಇದ್ದದರಿಂದಾ ಇಷ್ಟಲ್ಲಾ ಅನಾಹುತವಾಯಿತು ಎಂದುಕೊಳ್ಳುತ್ತಾನೆ. ಇದರ ಅರ್ಥ ಶಾಪಗಳನ್ನು ಮರೆತಿದ್ದ ಎಂತಲ್ಲಾ ಈ ಮೂಲದಲೇ ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಗೋವಿಂದ ಭಟ್ಟರ ಮೂಲಕ ಅಂಜನ ಹಾಕಿಸಿದ್ದ. ನಾಗಬಿಂಬವನ್ನು ಪತ್ತೆ ಮಾಡಿ ನಾಗದೇವನ ಪ್ರತಿಷ್ಠಾಪನೆ ಮಾಡಿಸುವ ಪ್ರಯತ್ನದಲ್ಲಿ ತಮ್ಮ ಕುಟುಂಬಕ್ಕೆ ಅಂಟಿದ ನಾಗಶಾಪದಿಂದ ಪಾರಾಗುವ ಪ್ರಯತ್ನವಿದೆ. ಆ ನಾಗ ಬಿಂಬವನ್ನು ನಾಶಪಡಿಸಲು ಯತ್ನಿಸುವ ದಾಯಾದಿ ಕುಟುಂಬದ ಭುಜಂಗ ಪೈ ಮತ್ತು ರಂಗ ಪೈ ಇಬ್ಬರ ಸಾವುದಾರುಣವಾಗಿದೆ. ಎಂಬುದನ್ನು ಸಹ ನಾವು ನೋಡುತ್ತೇವೆ. ಕೆಲವು ದುರಂತಗಳ ತೀವ್ರತೆಯು ಕಾದಂಬರಿಯ ಬಂಧಕ್ಕೆ ಹೊಂದುವುದೇ ಇಲ್ಲ ಎನಿಸುತ್ತದೆ. ಈ ನಿಟ್ಟಿನಲ್ಲಿ ಕಾದಂಬರಿಯ ನಾಲ್ಕನೆಯ ಭಾಗವು ಮೊದಲ ಮೂರು ಭಾಗಗಳಿಗಿಂತ ಭಿನ್ನವಾಗಿ ಮೂಡಿ ಬಂದಿದೆ. ಸಾಲುಸಾಲಾಗಿ ಘಟಿಸುವ ಸಾವುಗಳ ಚಿತ್ರಣವೇ ಈ ಭಾಗವನ್ನು ಪ್ರತ್ಯೇಕಗೊಳಿಸಿವೆ ಎನ್ನಬಹುದು ಹೀಗೆ ಕಾದಂಬರಿಯು ಕೊನೆಯ ಘಟ್ಟಕ್ಕೆ ಬಂದು ತಲುಪುತ್ತದೆ.

ಕೊನೆಗಾಲದಲ್ಲಿ ದೈಹಿಕವಾಗಿ ದುರ್ಬಲನಾಗಿದ್ದ ರಾಮಚಂದ್ರ ಪೈಯ ಕನವರಿಕೆಯನ್ನು ಈಡೆರಿಸಲೋ ಎಂಬಂತೆ ಅರ್ಧ ಕನಸಿನ ಸ್ಥಿತಿಯಲ್ಲೇ ಅವನಿಗೆ ನಾಗ್ಡೊ ಭೇತಾಳನ ದರ್ಶನ ಆಗುತ್ತದೆ.ಮೂರು ವರ್ಷದ ಮಗು ಸಿದ್ಧನ ವೆಂಕಟೇಶನನ್ನ ಆತ ಕಾಪಾಡುತ್ತಾನೆ.ಇನ್ನು ಆತನ ಪೀಳಿಗೆ ಕಷ್ಟ ಕೋಟಲೆಗಳು ಬರುವುದಿಲ್ಲ ಎಂಬ ಶುಭ ನುಡಿಯೊಂದಿಗೆ ನಾಗ್ಡೊ ಬೇತಾಳನು ಆ ಮಗುವನ್ನು ಎತ್ತಿಕೊಂಡು ಪೂರ್ವದತ್ತ ಸಗುವುದರೊಂದಿಗೆ ಕಾದಂಬರಿಯು ಮುಕ್ತಾಯವಾಗುತ್ತದೆ. ನಾಗ್ಡೊ ಬೇತಾಳನು ಕೊನೆಯಲ್ಲಿ ಈ ರೀತಿ ಪ್ರತ್ಯಕ್ಷನಾಗುವ ಪರಿಯು ಮುಂದಿನ ಶುಭ ದಿನಗಳ ಸೂಚನೆ ಎನ್ನಬಹುದೆ, ಇಲ್ಲಾ ಮಗುವನ್ನು ಎತ್ತಿಕೊಂಡು ಪೂರ್ವದತ್ತ ಸಾಗುವ ಅವನ ನಡೆಯು ಇನ್ನು ಬಾಕಿ ಉಳಿದಿರುವ ಆ ಜನಾಂಗದ ಹೋರಾಟದ ಸೂಚನೆಯನ್ನು ನೀಡುತ್ತದೆಯೋ? ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಈ ಕಾದಂಬರಿಯಲ್ಲಿ ಚಾರಿತ್ರಿಕ ವ್ಯಕ್ತಿಗಳ ವ್ಯಕ್ತಿತ್ವದ ಪುನರ್ ರಚನೆ ಇಲ್ಲಿಯ ಬರವಣಿಗೆಯ ಭಿತ್ತಿ ಇದಕ್ಕೆ ಸಂಬಂಧಿಸಿದಂತೆ ಘಟನೆ, ಸನ್ನಿವೇಶ ರೂಪ ಪಡೆಯುತ್ತದೆ. ನಾನೂರು ವರ್ಷಗಳ ಹಿಂದಿನ ಇತಿಹಾಸವನ್ನು ಕಲ್ಪನೆ ಜೊತೆಗೆ ಹದವಾಗಿ ಬಳಸಿಕೊಂಡು ರಚನೆಯಾದ ಈ 'ಸ್ವಪ್ನ ಸಾರಸ್ವತ' ಕಾದಂಬರಿ ವರ್ತಮಾನದಲ್ಲಿ ರಚನೆಯಾಗಿರುವುದು ಮಹತ್ವದಾಗಿದೆ. ಇಂತಹ ಸಾಧನೆ ಮಾಡಿದ

ಗೋಪಾಲಕೃಷ್ಣ ಪೈರವರು ಕನ್ನಡ ಸಾಹಿತ್ಯದಲ್ಲಿ ಕೃಷಿಮಾಡುವ ಮೂಲಕ ಕಾದಂಬರಿಯ ಕ್ಷೇಸತ್ರಕ್ಕೆ ಮಹತ್ವದ ಕೊಡುಗೆಯನ್ನು ನೀಡಿದಂತಾಗಿದೆ.

೫.೪ ಸಾರಸ್ವತ ಸಂಪ್ರದಾಯ ಪದ್ಧತಿಗಳಲ್ಲಿ ಸ್ತ್ರೀಸ್ಥಾನ

ಈ ಕಾದಂಬರಿಯಲ್ಲಿ ಆಕ್ರಮಣ, ಮತಾಂತರ, ವಲಸೆ, ದಾಯಾದಿ ಕಲಹ, ಕೃಷಿ ವ್ಯಾಪಾರ ಧರ್ಮ ನಂಬಿಕೆ ಇತ್ಯಾದಿ ವಿಷಯಗಳೊಂದಿಗೆ ಗಂಡು ಹೆಣ್ಣಿನ ಸಂಬಂಧ ವಿವಾಹ ಪದ್ಧತಿ ಮುಖ್ಯ ಎನಿಸುತ್ತದೆ. ಕಾದಂಬರಿ ಉದ್ದಕ್ಕೂ ಪುರುಷರ ಕುರಿತಾಗಿ ಹೇಳಿಕೊಳುತ್ತಾ ಹೋಗುವ ಲೇಖಕರು ಕೆಲವು ಸಂದರ್ಭಗಳಲ್ಲಿ ಮಹಿಳೆಗೇ ಅವಕಾಶಗಳನ್ನು ಕಲ್ಪಸಿಕೊಟ್ಟದ್ದಾರೆ. ದೇವರ ಬಗ್ಗೆ ಹೇಳುವ ನಿರೂಪಕರು ಹೆಣ್ಣು ದೇವರುಗಳ ಪ್ರಸ್ತಾಪವೆ ಹೆಚ್ಚಾಗಿ ಮಾಡುರುವುದನ್ನು ಕಾಣುತ್ತೇವೆ. ಇದು ನಮ್ಮ ಭಾರತೀಯ ಸಂಸ್ಕೃತಿಯ ಪ್ರತಿಕವು ಆಗಿದೆ. ಇಲ್ಲಿ ಇತಿಹಾಸ ಮತ್ತು ಕಲ್ಪಿನೆಯ ಗೌಣವಾಗಿ ಉಳಿದರು ಕಾದಂಬರಿಯ ವಸ್ತು ಮತ್ತು ಆಶಯ ವರ್ತಮಾನಕ್ಕೆ ತಿರುಗುತ್ತದೆ.

ಸಾರಸ್ವತ ಸಮುದಾಯದಲ್ಲಿ ವಿವಾಹ ಪದ್ಧತಿ ಒಂದು ಪ್ರಮುಖ ಘಟ್ಟವೆಂದೆ ಕರೆಯಬಹುದು. ಕಾಲಕಾಲಕ್ಕೆ ಅಂದರೆ ಹದಿಹರೆಯಕ್ಕೆ ಕಾಲಿಡುವ ಸಮಯದಲ್ಲಿ ವಿವಾಹ ಮಾಡುವದು ಅವರ ವಾಡಿಕೆಯಾಗಿತ್ತು. ಮುಖ್ಯವಾಗಿ ಹೆಣ್ಣು ಇನ್ನೂ ಮೈನೆರೆಯುವ ಪೂರ್ವದಲ್ಲಿ ಅವಳಿಗೆ ಮದುವೆ ಮಾಡುವುದು ನಂತರ ಸಂಸಾರದ ಬಾರವನ್ನು ಗಂಡನ್ನೊಂದಿಗೆ ಹಂಚಿಕೊಳ್ಳುವುದು ಇದನ್ನೆ ಬಾಲ್ಯ ವಿವಾಹ ಪದ್ಧತಿ ಎಂದು ಕರೆಯುತ್ತೇವೆ. ಇಂದಿನಕಾಲದಲ್ಲಿ ಈ ಪದ್ಧತಿ ಕಾನೂನು ಬಾಹಿರ ಎನಿಸಿಕೊಂಡಿದೆ. ಅಂದಿನ ಕಾಲದಲ್ಲಿ ಸಾಮಾನ್ಯ ಪದ್ಧತಿಯೆ ಆಗಿತ್ತು. ಇದು ಮತಾಂತರ ಪರದೆ ಇಂದಾ ತಪ್ಪಿಸಿ ಕೊಳ್ಳಲು ಮಾಡಿವ ಪ್ರಯತ್ನ ಎನಿಸಿದರು ಕೂಡಾ ಕಾದಂಬರಿಯಲ್ಲಿ ಮತಾಂತರಕ್ಕೆ ವಿಶಾಲವಾದ ಅರ್ಥವನ್ನೇ ಕೂಡವ ಮೂಲಕ ವಲಸೆ ಎನ್ನುವುದು ಹುಟ್ಟಿಕೊಳ್ಳುತ್ತದೆ. ವಿವಾಹ ಪದ್ಧತಿಯಲ್ಲಿ ಹೆಣ್ಣನ್ನು ಬಾಲ್ಯವಿವಾಹಕ್ಕೆ ಒಡ್ಡುವ ಸಾರಸ್ವತರು ಒಂದೆಡೆಯಾದರೆ ಪೋರ್ಚುಗೀಸರು ಹೆಣ್ಣುನ್ನು ಬೆತ್ತಲೆ ನಿಲ್ಲಿಸಿ ಅವಳ ಕನ್ಯೆತ್ವದ ಪರೀಕ್ಷೆ ಮಾಡಿ ಹರಾಜು ಹಾಕುವದು ಇನ್ನೊಂದೆಡೆಯಾಗಿ ನಿಲ್ಲುತ್ತದೆ. ಈ ಕಾರಣ ದಿಂದಲೇ ಪಾಶ್ಚತ್ಯ ದೇಶದ ಹೆಂಗಸರು ಪೂರ್ವದೇಶದ ಹೆಂಗಸರಿಗಿಂತ ಗೋವೆಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಹೆಣ್ಣನ್ನು ದೇವತೆರೂಪದಲ್ಲಿ ತಾಯಿ, ಸಹೋದರಿ,ಹೆಂಡತಿ ಮಕ್ಕಳರೂಪದಲ್ಲಿ ಕಾಣುತ್ತೇವೆ. ಆದರೆ ಪೋರ್ಚುಗೀಸರ ಆಕ್ರಮಣದಿಂದ ಸಂಪತ್ತಿನ ಜೊತೆಗೆ ಆಚಾರ ವಿಚಾರ ಸಂಬಂಧಗಳನ್ನು ಕಳೆದು ಕೊಳ್ಳುವಂತಾಯಿತು. ಅಂದಿನ ಕಾಲದ ಬಾಲ್ಯ ವಿವಾಹಕ್ಕೆ ಪಾಶ್ಚಾತ್ಯದೇಶದ ಆಕ್ರಮಣವೂ ಕಾರಣವಾಗಿತ್ತು. ಅಲ್ಲದೆ ಹೆಣ್ಣು ಮಕ್ಕಳು ವಯಸ್ಸಿಗೆ ಬಂದರೆ 'ಉಡಿಯಲ್ಲಿ ಕೆಂಡ ಕಟ್ಟಿಕೊಂಡಂತೆ' ಎಂಬುದು ಅಂದಿನಕಾಲದ ಜನರ

ಅಭಿಪ್ರಾಯವಾಗಿತ್ತು. ಕಾದಂಬರಿಯಲ್ಲಿ ಬರುವ ನರಸಪ್ಪ ಪೈ ಮತ್ತು ತುಳಸೀಬಾಯಿ ವಿವಾಹ ಬಾಲ್ಯವಿವಾಹ ಎಂಬುದು ಅವರ ವಯಸ್ಸನ್ನು ನಿರೂಪಕರು ಹೇಳುವ ಮುಖಾಂತರ ತೋರಿಸಿಕೊಡುತ್ತಾರೆ. ವಿವಾಹ ಸಂದರ್ಭಗಳು ಧರ್ಮ ಎಂಬುದು ಎಷ್ಟು ಮುಖ್ಯ ಎನ್ನುವದು ಲೇಖಕರು ಈ ರೀತಿ ಹೇಳುತ್ತಾರೆ. ಕಿರಿಸ್ತಾನ ಮತಕ್ಕೆ ಮತಾಂತರಗೊಂಡ ಬ್ರಾಹ್ಮಣರು ಮದುವೆಯಲ್ಲಿ ಪಾಲ್ಗೊಂಡರೆ ಮದುವೆ ಮನೆ ಮೈಲಿಗೆ ಆದಂತೆ ಎಂಬ ಅಭಿಪ್ರಾಯವನ್ನು ಪಾತ್ರಗಳ ಮೂಲಕ ತೋರಿಸುತ್ತಾರೆ. ಧಡ್ಡನ ಶಾಪಕ್ಕೆ ಗುರಿಯಾದ ಸಾರಸ್ವತರು ವಿವಾಹ ಸಂದರ್ಭದಲ್ಲಿ ಆತನನ್ನು ಕೂರಿಸುತ್ತಾರೆ. ಮತಾಂತರಗೊಂಡ ಸಾರಸ್ವತರು ತಮ್ಮ ಧರ್ಮದ ಯಾವುದೆ ಕಾರ್ಯಗಳಿಗೆ ಬರಲು ಅವಕಾಶಗಳು ಇರಲಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಮತಾಂತರ ಎನ್ನುವುದು ತಮ್ಮ ಧರ್ಮ ಮೇಲಿರುವ ವಿಶ್ವಾಸ ಆಚಾರ ವಿಚಾರ ನಂಬಿಕೆ ಇವುಗಳನ್ನು ಉಳಿಸಿ ಬೆಳೆಸಲು ಬೇರೆ ಧರ್ಮದವರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವದಾಗಿದೆ. ಇದು ಸ್ವಇಚ್ಛೆ ಆಗಿರಬಹುದು ಇಲ್ಲಾ ಬಲವಂತತೆಯನ್ನು ಹೊಂದಿರಬಹುದು. ಈ ಎರಡು ರೀತಿಗಳಿಂದ ಮತಾಂತರಗಳು ನಡೆಯುತ್ತವೆ. ಪೋರ್ಚುಗೀಸರು ತಮ್ಮ ಕ್ರೈಸ್ತ ಧರ್ಮವನ್ನು ವಿಸ್ತಾರಗೊಳಿಸು ಬಿಸಿದ ಪರದೆಯಲ್ಲಿ ಸಾರಸ್ವತ ಬ್ರಾಹ್ಮಣ ಬಿಳದೇ ಹೊದಾಗ ಅವರ ಮೇಲೆ ಆಕ್ರಮಣ ಅನಿವಾರ್ಯ ಸ್ವರೂಪ ತಾಳುತ್ತದೆ. ಈ ಸಂದರ್ಭವೆ ವಲಸೆಗೆ ಮೂಲಕಾರಣ ವಲಸೆ ಹೋಗುವ ಸಾರಸ್ವತ ಬ್ರಾಹ್ಮಣರು ಒಂದೆಡೆಯಾದರೆ ಬಡತನದಿಂದ ತನ್ನ ಜೀವನ ಸಾಗಿಸಲಾರದ ಸ್ಥಿತಿಯ ಬುದ್ದು ಮತಾಂತರಕ್ಕೆ ಕುಟುಂಬ ಸಮೇತ ಮುಂದಾಗುತ್ತಾನೆ. ಮತಾಂತರದಿಂದ ಆರ್ಥಿಕ ನೆರವು ಪಡೆಯುದು ಇಲ್ಲಿ ಮುಖ್ಯ ಅನಿಸುವುದು ಇನ್ನೊಂದೆಡೆಯಾಗಿ ನಿಲ್ಲುತ್ತದೆ.

ಮತಾಂತರ ಎಂಬುದು ಪೋರ್ಚುಗೀಸರು ಮತ್ತು ಸಾರಸ್ವತ ಬ್ರಾಹ್ಮಣರ ನಡುವೆ ಇರುವ ಪರದೆಯಾಗಿದೆ. ಇದು ಆಕ್ರಮಣದ ರೂಪ ಪಡೆದು ಸಂದರ್ಭದಲ್ಲಿ ಅಸಹಾಯಕರಾದ ಸಾರಸ್ವತರು ವಲಸೆ ಹೊಗುವದು ಅನಿವಾರ್ಯವಾಗುತ್ತದೆ. ಇವುಗಳ ಮಧ್ಯ ದ್ವೇಷದ ಮಾರ್ಗವನ್ನೇ ಹಿಡಿದರು ಸಹ ಅಲ್ಲಿ ಪ್ರೀತಿಹುಟ್ಟುತ್ತದೆ. ಎಂಬುದನ್ನು ವಿಟ್ಠು ಪೈ ಮತ್ತು ಅಲ್ವೀರಾಳಪಾತ್ರ ಚಿತ್ರಣಗೊಂಡಿದೆ. ಇದು ಲೇಖಕರ ಕಲ್ಪನೆಯಲ್ಲಿದೆಯೋ ಇಲ್ಲಾ ಕಲ್ಪನೆಯನ್ನೆ ಮೀರಿನಿಂತಿದೆ ಎಂಬುದು ನಿರ್ಧರಿಸುವದು ಸ್ವಲ್ಪಕಷ್ಟವೇ ಏಕೆಂದರೆ ಸಾರಸ್ವತ ಬಾಹ್ಮಣರು ಪರಸ್ತ್ರೀಯೊಂದಿಗೆ ಈ ರೀತಿ ಸಂಬಂಧ ಇಟ್ಟುಕೊಳ್ಳುತ್ತಾರೆ ಎಂದು ಹೇಳುವುದು ನೈಜತೆಗೆ ದೂರವೇ ಆಗಿದೆ. ಕಾದಂಬರಿಯಲ್ಲಿ ಅಂತು ಪೈ ಮತ್ತು ನಾಗ ಪೈ ಅವರನ್ನು ಇದೇ ರೀತಿಯಲ್ಲಿ ಚಿತ್ರಿಸಲಾಗಿದೆ. ಇನ್ನೊಂದು ವಿಶೇಷತೆ ಎಂದರೇ ಪೊರ್ಚುಗೀಸರ ವಿರೋಧಿಯಾದ ವಿಟ್ಠು ಪೈ ಅದೇ ಧರ್ಮದ ಹೆಣ್ಣೊಂದಿಗೆ ಸಂಬಂಧ ಹೊಂದಿದರು ಕೂಡಾ ಅದು ಕಾದಂಬರಿಯಲ್ಲಿ ಮುಸುಕಾಗಿ ಕಾಣಿಸುತ್ತದೆ.

ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾದ ವಿಟ್ಠು ಪೈ ಮತ್ತು ರಾಮಚಂದ್ರ ಪೈ ಈ ಪಾತ್ರಗಳು ಒಂದಕ್ಕೊಂದು ಸಂಬಂಧ ಇರುವದರಿಂದ ಉಳಿದ ಪಾತ್ರಗಳೊಂದಿಗೆ ಸಂಬಂಧಗಳನ್ನು ಹೆಣೆಯುತ್ತಾ ಹೊಗುತ್ತವೆ. ವಿಟ್ಠು ಪೈ ಅಲ್ವೀರಾ ಒಬ್ಬಳ ಸಂಬಂಧ ಹೊಂದಿದರೆ ಇತನ ಮೊಮ್ಮಗನಾದ ರಾಮಚಂದ್ರ ಪೈ ನಾನು ಕಮ್ಮಿ ಇಲ್ಲಾ ಎಂಬಥೆ ಹಲವು ಹೆಂಗಸರ ಸಂಬಂಧ ಹೊಂದಿದ್ದ ಎಂದು ಹೇಳಿಸುವ ಮುಖಾಂತರ ಆ ಪಾತ್ರಕ್ಕೂ ನಿರೂಪಕರೂ ಕಪ್ಪು ಮಚ್ಚೆ ಇಟ್ಟಂತಾಗಿದೆ. ಈ ಎರಡು ಪಾತ್ರಗಳು ಮದುವೆ ನಂತರ ಸಂಬಂಧ ಹೊಂದಿವೆ ಎಂದು ತೊರಿಸುತ್ತಾ ಲೇಖಕರು ಅಂತುಪೈ ಮದುವೆ ಮುಂಚೆ ನಾಗಪೈ ಸಂಸಾರ ಬೇಸರ ಎಂಬ ಸಂದರ್ಭದಲ್ಲಿ ಸಂಬಂಧ ಇಟ್ಟು ಕೊಂಡಿರುವ ಚಿತ್ರಣವನ್ನು ಇಲ್ಲಿ ಸಮಯ ಸಂದರ್ಭಕ್ಕೆ ಚ್ಯೂತಿ ಬರದಂತೆ ಚಿತ್ರಿಸಿದ್ದಾರೆ.

ಅಂತುಪೈ ತಮ್ಮ ಮನೆಯ ಕೆಲಸದ ಪೂಜಾರಿ ಮೊಮ್ಮಗಳಿಗೆ ಮೊಸ ಮಾಡುವುದು ಇಲ್ಲಿ ಧರ್ಮಗಳ ಮಧ್ಯ ಇರುವ ತಾರತಮ್ಯವನ್ನು ತೋರಿಸುತ್ತದೆ. ಮೇಲಜಾತಿ ಗಂಡು ಕೆಳಜಾತಿಯ ಹೆಣ್ಣಿನ್ನೊಂದಿಗೆ ಸಂಬಂಧ ಇಟ್ಟುಕೊಂಡರು ಅದು ಸಮಾಜದ ದೃಷ್ಟಿಯಲ್ಲಿ ತಪ್ಪು ಅನಿಸಲಾರದು. ಇದು ಒಂದು ರೀತಿಯಲ್ಲಿ ದಬ್ಬಾಳಿಕೆ ಅಂತಲೇ ಕರೆಯಬಹುದು. ಸಾರಸ್ವತರು ಪೋರ್ಚಗೀಸರ ಮತಾಂತರಿಂದಾ ತಪ್ಪಿಸಿಕೊಳ್ಳಲು ವಲಸೆ ಬಂದರು. ಅವರು ಮಾಡಿದ್ದಾದರು ಏನು ಎಂಬ ಪ್ರಶ್ನೆಗೆ ಉತ್ತರ ತಮಗಿಂತಾ ಕೆಳ ವರ್ಗದವರೊಂದಿಗೆ ಅನೈತಿಕ ಸಂಬಂಧ ಹೊಂದಿರುವುದು ಮತಾಂತರದಂತೆ ಇದು ಕೂಡಾ ಭಿನ್ನ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಇನ್ನೊಂದೆಡೆ ನಾಗ ಪೈ ಗಂಡು ಮಕ್ಕಳ ಆಗಿಲ್ಲವೆಂಬ ಕಾರಣಕ್ಕೆ ಬೇರೆ ಜಾತಿ ಹೆಣ್ಣಿನೊಂದಿಗೆ ಸಂಬಂಧ ಇಟ್ಟುಕೊಳ್ಳುವದು ಕಾದಂಬರಿಯ ಇತರೆ ಪಾತ್ರಗಳಿಗೆ ಭಿನ್ನವಾಗಿ ಕಂಡು ಬಂದಿದೆ. ಇಲ್ಲಿ ಕಾದಂಬರಿಕಾರರು ಹೆಣ್ಣನ್ನು ಒಂದು ರೀತಿಯಲ್ಲಿ ಅನೈತಿಕ ಸಂಬಂಧಕ್ಕೆ ಒಳಪಡಿಸಿರುವುದು ಕಾದಂಬರಿಯ ದೃಷ್ಟಿಯಿಂದ ಸರಿ ಏನಿಸಿದರು ಕೂಡಾ ಓದುಗರಲ್ಲಿ ಬರುವ ಬಾವನೆಗಳೆ ಇನ್ನೊಂದೆಡೆಯಾಗಿ ನಿಲ್ಲುತ್ತವೆ. ಒಬ್ಬ ಸಾರಸ್ವತ ಬೇರೆ ಜಾತಿಯ ಹೆಣ್ಣನ್ನು ಇಟ್ಟುಕೊಳ್ಳವದರಿಂದ ಕೊನೆಗೆ ಆಗುವ ಅವಾಂತರಗಳನ್ನು ಅಂತು ಪೈನ ಪಾತ್ರದ ಮುಖಾಂತರ ತಿಳಿಸುತ್ತಾರೆ. ಅಂತು ಪೈನ ಸಾವು ಹೇಗಾಯಿತು ಎಂಬುದು ಕಾದಂಬರಿಯಲ್ಲಿ ಪ್ರಶ್ನೆಯಾಗೆ ಉಳಿದುಕೊಳ್ಳುತ್ತದೆ.

ಗಂಡ ಹೆಂಡತಿಯ ಮಧ್ಯ ಪರಸ್ಪರ ಗೌರವವಿದ್ದಾಗ ಸಂಸಾರದಲ್ಲಿ ಸಮತೋಲನ ಏರ್ಪಟ್ಟಾಗ ಉಡುಪು, ಊಟ, ಪೂಜೆ, ಪುನಸ್ಕಾರ, ಹಬ್ಬ ಉತ್ಸವ ಇವೆಲ್ಲವೂ ಬದುಕಿಗಿಂತಲೂ ದೊಡ್ಡವು ಅನಿಸಿಕೊಳ್ಳಲಾರವು. ನಂಬಿಕೆ, ವಿಶ್ವಾಸ, ಸ್ವಭಾವ, ಅಭಿರುಚಿ ಇವು ಸಹಜವೆಂಬಂತೆ ಅಳವಡಿಕೊಂಡಾಗ ದಾಂಪತ್ಯದಲ್ಲಿ ಸಾಮರಸ್ಯ ಎನ್ನುವದು ಎಂದು ಮರೀಚಿಕೆಯಾಗಿ ಉಳಿಯುವುದೆ ಇಲ್ಲ. ಜೀವನದಲ್ಲಿ ನಾವು ಅನೇಕ ಮಾಯದ ಗಾಯಗಳನ್ನು ದಕ್ಕಿಸಿಕೊಂಡು ಜೀವನವನ್ನು ನಾವು ನಂಬಿದ್ದೇವೆ. ನಾವು ಕಂಡಂಥ ವ್ಯಕ್ತಿಗಳು ಮತ್ತು ನಡೆದು ಹೋದ ಘಟನೆಗಳ ಆಧಾರದ ಮೇಲೆ ಸರ್ವಸಮ್ಮತವಾದ ಪಾತ್ರಗಳನ್ನು ಸೃಷ್ಟಿಸುತ್ತೇವೆ ಎಂದು ಸೃಜನ

ಶೀಲರಷ್ಟೇ ಭಾವಿಸಿದರೂ ಅವರ ಗೋಚರಿಕೆಯನ್ನು ಮೀರಿದ ವಾಸ್ತವತೆ ಎಲ್ಲೋ ಇಣುಕಿ ಹಾರುತ್ತಲೇ ಇರುತ್ತದೆ. ಜೀವನವೆನ್ನುವುದು ಹೇಗೆ ಸೋಜಿಗವೂ ಮನುಷ್ಯ ಸ್ವಭಾವವೂ ಹಾಗೇ ವಿಸ್ಮಯಕಾರಿ. ನಮ್ಮ ನಮ್ಮ ಕುಟುಂಬಗಳನ್ನು ಉದಾಹರಣೆಯನ್ನಾಗಿ ತೆಗೆದುಕೊಂಡರೂ ಅಲ್ಲಿ ಸ್ನೇಹ, ತ್ಯಾಗ, ಕರುಣೆ ಇಂಥ ಸದ್ಗುಣಗಳನ್ನು ಧಾರಾಳವಾಗಿ ಮತ್ತೊಬ್ಬರಿಗೆ ನೀಡಬಲ್ಲಂಥವರನ್ನು ನಾವು ನೋಡಿರುವಂತೆಯೇ ಕ್ರೌರ್ಯ ದಬ್ಬಾಳಿಕೆ ಅಸಂತುಷ್ಟಿ ಇಂಥ ಸಂಕುಚಿತ ಬುದ್ಧಿಯನ್ನು ಪೋಷಿಸಿಕೊಂಡು ಬಂದಿರುವಂಥವರನ್ನು ಕಾಣುತ್ತೇವೆ. ಹೀಗೆ ಇಲ್ಲಿರುವ ಕೆಲವು ಅಂಶಗಳನ್ನು ನಾವು ಕಾದಂಬರಿಯಲ್ಲಿ ಗ್ರಹಿಸಬಹುದು.

ಕಾದಂಬರಿಯಲ್ಲಿ ಬರುವ ಅಂಜನ. ಭವಿಷ್ಯ ಜಾತಕ. ಮಾಟ. ದೈವಗಳಿಗೆ ಗುಡಿ ಮುಂತಾದವು ಒಂದು ನೆಲೆಯಿಂದ ಶಾಪ, ಪ್ರತಿಹಠಮಾರಿತನ ಆಣೆಭಾಷೆಯಂಥ ಸ್ವಯಂಕೃತ ಬಂಧನಗಳು ಇನ್ನೊಂದು ನೆಲೆಯಿಂದ ಮನುಷ್ಯನ ನಡವಳಿಕೆಯನ್ನು ಪ್ರತಿಬಂಧಿಸುವಾಗಲೇ ಇವುಗಳಲ್ಲಿ ಇದ್ದು ಇಲ್ಲದಂತಿರುವ ಒಂದು ಸಂಯೋಜನೆ ಚಂದ ಬದುಕಿನ ಬಟ್ಟಂದವನ್ನು ನಮಗೆ ಕಟ್ಟಿಕೊಡುತ್ತದೆ. ಕಾದಂಬರಿಯಲ್ಲಿ ಬರುವ ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ಬೇರೆ ರೂಪಪಡೆಯುತ್ತವೆ ಎಂದು ಹೇಳುವುದು ಈ ಅರ್ಥದಲ್ಲಿ ಎಂದೆನಿಸುತ್ತದೆ. ಇಲ್ಲಿ ಕಾವೇರಮ್ಮನ ಪಾತ್ರ ತೆಗೆದು ಕೊಂಡಾ ಅವಳು ತನ್ನ ಗಂಡ ನಾಗ ಪೈ ಬದುಕಿರುವವರೆಗೂ ಮೌನತಾಳಿದ್ದು ನಂತರದಲ್ಲಿ ಅವಳ ಆಕ್ರೋಶ ವ್ಯಕ್ತವಾಗತ್ತಾ ಹೊಗುತ್ತದೆ. ನಿರೂಪಕರು ಈ ಪಾತ್ರವನ್ನು ಸಂದರ್ಭಕ್ಕೆ ಚನ್ನಾಗಿ ಬಳಸಿಕೊಂಡಂತೆ ಕಾಣುತ್ತದೆ. ಇದೇ ಸಾಲಿನಲ್ಲಿ ನಿಲ್ಲುವ ಇವಳ ಮಗ ಭುಜಂಗ ಪೈ ಜೀವನ ಉದ್ದಕ್ಕೂ ತನ್ನ ರೂಪದ ಜ್ವಾಲೆಯನ್ನು ಹರಿಸುತ್ತಾ ಹೋಗುತ್ತಾನೆ. ಕಾದಂಬರಿಯಲ್ಲಿ ಇವನ ಪಾತ್ರಬಂದ ತಕ್ಷಣ ವಸ್ತು ಆಶಯವೇ ತಿರುಗುಮುರುಗಾದ ಚಿತ್ರಣವು ಕಂಡುಬರುತ್ತೆ. ನಾವು ಈ ಪಾತ್ರದ ಬಗ್ಗೆ ಹೇಳಬೇಕಾದರೆ ಇಲೋಂದು ಮಾತು ನೆನಪಿಗೆ ಬರುತ್ತೆ 'ತಾನೊಂದು ಬಗೆದರೆ ದೈವವಂದು ಬಗೆಯುತ್ತೆ' ಎಂದು ಹೇಳುತ್ತಾರೆ. ಇದು ಭುಜಂಗ ಪೈನಿಗೆ ಒಪ್ಪುವಂತದ್ದು ತನ್ನ ದುಷ್ಟ ಬುದ್ಧಿಯಿಂದ ಬೇರೆಯವರ ನಾಶಕ್ಕೆ ಬಂದ ಇತ ಅದರಲ್ಲೆ ತನ್ನ ನಾಶವಿದೆ ಎಂಬುದನ್ನು ತಿಳಿಯದೇ ಹೋಗುತ್ತಾನೆ.

ಇಲ್ಲಿ ಜಾಹ್ನವಿಯ ಪಾತ್ರ ಚಿತ್ರಣವು ಕಾದಂಬರಿಯ ವಿಶೇಷತೆಯಲ್ಲಿ ಒಂದು ಎಂಬಂತೆ ಮೂಡಿಬಂದಿದೆ. ಗಂಡನ ಮಾತಿನಂತೆ ಮನೆಬಿಟ್ಟು ಹೊರಗೆ ಬರಭಾರದೆಂದು ಇವಳ ಜೀವನದ ಕೊನೆಯನ್ನು ಸೂಚಿಸುತ್ತದೆ. ಅಂದರೆ ಇಲ್ಲಿ ನಿರೂಪಕರು 'ಪತಿಯೇ ಪರಮೋ ಧರ್ಮ' ಎಂಬ ಹಿನ್ನೆಲೆಯಲ್ಲಿ ಜಾಹ್ನವಿಯ ಚಿತ್ರಣವನ್ನು ಮಾಡಿದ್ದಾರೆ. ಆದರೆ ಈ ಪಾತ್ರ ಕೊನೆಗೊಳ್ಳುವುದು ಎಲ್ಲವನ್ನು ಮೀರಿನಿಲ್ಲುವಂತದ್ದು. ಕಾದಂಬರಿಯಲ್ಲಿ ಗ್ರಹಿಸುವ ಇನ್ನೊಂದು ಮುಖ್ಯ ಅಂಶವೆಂದರೆ ದೇವರ ಆಣೆ ಹಾಕುವದು. ದೇವರು ಧರ್ಮವನ್ನು ನಂಬಿದ ಸಾರಸ್ವತರು ಆ ನಂಬುಗೆಯಲ್ಲಿ ತಮ್ಮ ನೊಂದಿಗೆ ಜಗಳವಾಡುವಾಗ ಅಲ್ಲಿ ಧರ್ಮಸ್ಥಳ ಮಂಜುನಾಥನ

ಆಣೆ ಹಾಕುತ್ತಾನೆ. ಇದರಿಂದಲೇ ಕಾದಂಬರಿ ಮುಂದೆ ಜೀವಪಡೆದರು ಸಹ ತಿಮ್ಮ ಪೈನ ಜೀವ ಅಲ್ಲಿ ತಗೆದು ಕೊಳ್ಳುವುದರ ಜೊತೆಗೆ ಜಾಹ್ನವಿ ಸೇರೆವಾಸದೊಂದಿಗೆ ತನ್ನ ಜೀವನವನ್ನು ಕಳೆಯುವುದು ಇವೆಲ್ಲವೂ ಒಂದು ದೇವರ ಆಣೆಯ ಹಿನ್ನೆಲೆಯಲ್ಲಿ ನಡೆಯುವುದು. ಕಾದಂಬರಿಕಾರರ ಸೂಕ್ಷ್ಮ ಪ್ರಜ್ಞೆಯನ್ನು ತಿಳಿಸುತ್ತದೆ.

ಬ್ರಾಹ್ಮಣತ್ವ ಪ್ರಚಾರಕ್ಕೆ ಪಾಂಡಿತ್ಯ ಪೂರ್ಣ ಹಾಗೂ ವೈಚಾರಿಕ ಬರಹಗಳಿಗೇನೂ ಕೊರತೆ ಇಲ್ಲ. ಆದರೆ ಭಾವಾವೇಶದಿಂದ ಎಲ್ಲಾ ಜನಸಾಮಾನ್ಯರು ಎಲ್ಲಾ ಕೃತಿಗಳನ್ನು ಓದುವುದಿಲ್ಲ. ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ಬರುವ ಮತಾಂತರ, ದೇವಾಲಯಗಳನಾಶ, ಪ್ರತಿಭಟನೆ, ಅಸಹಾಯಕತೆ ಈ ಎಲ್ಲ ವಿಷಯಗಳನ್ನು ನೋಡುತ್ತಾ ಹೊರಟರೆ ಪೋರ್ಚುಗೀಸರು ಏಕಸಾಮ್ಯತೆಯನ್ನು ಸಾಧಿಸುವಲ್ಲಿ ತಮ್ಮ ತನವನ್ನು ಮೆರೆದಿದ್ದರು ಎಂಬ ವಿಷಯ ಸ್ಪಷ್ಟವಾಗುತ್ತದೆ. ಹಾಗೆ ನೋಡಿದರೆ ವಸಾಹತು ಸಂದರ್ಭದಲ್ಲಿ ತಮ್ಮ ಸಾಂಸ್ಕೃತಿಕ ಹಿರಿಮೆಯನ್ನು ಸ್ಥಳಿಯರಿಗೆ ಮನದಟ್ಟು ಮಾಡಿ ಅವರು ಅಂತರಂಗದಲ್ಲಿ ಅದರ ಉನ್ನತಿಯನ್ನು ಸ್ಥಾಪಿಸಲು ಪೋರ್ಚುಗೀಸರೆ ನೆರವಾದದ್ದು. ಚರಿತ್ರೆಯ ಮೇಲೆ ಮುಚ್ಚಿರುವ ಸುಳ್ಳು ಪರದೆಯನ್ನು ಕಿತ್ತುಹಾಕಿ ಗತಕಾಲದ ಹಿಂದೂ ವೈಭವದ ಬೀಜ ಸ್ವರೂಪವನ್ನು ತೋರಿಸಲು ತಮ್ಮ 'ಹಿಂದುತ್ವ ಐಡಿಯಲಾಜಿ'ಯನ್ನು ಸತ್ಯದ ಹೆಸರಿನಲ್ಲಿ ಮುಚ್ಚಿಹಾಕುವ ತಾವು ಹೇಳುವ ಇತಿಹಾಸ ಮತ್ತು ಕಲ್ಪನೆ ವಸ್ತುವನ್ನು ಸತ್ಯವೆಂದೇ ಪ್ರತಿಪಾದಿಸುವ ಕೆಲಸವನ್ನು ಗೋಪಾಲಕೃಷ್ಣ ಪೈರವರು ಈ ಕಾದಂಬರಿಯ ಮುಖಾಂತರ ಮಾಡಿದ್ದಾರೆ.

೫.೫. ಕಾದಂಬರಿಯ ಪಾತ್ರ ಚಿತ್ರಣ ಮತ್ತು ಪ್ರಾದೇಶಿಕತೆ.

'ಸ್ವಪ್ನ ಸಾರಸ್ವತ' ಕಾದಂಬರಿಯ ನಿರೂಪಕರಾದ ಗೋಪಾಲಕೃಷ್ಣ ಪೈರವರು ಇತಿಹಾಸದ ಜೊತೆಗೆ ತಮ್ಮ ಕಲ್ಪನೆ ಸೇರಿಸಿ ತಾವು ಹುಟ್ಟಿ ಬೆಳೆದ ಪರಿಸರದ ಹೆಸರುಗಳನ್ನು ಕಾದಂಬರಿಯ ಪಾತ್ರಗಳ ಮುಖಾಂತರ ದುಡಿಸಿಕೊಂಡಿರುವುದು ಪ್ರಾದೇಶಿಕತೆಗೆ ಹೆಚ್ಚು ಒತ್ತನ್ನು ಕೊಟ್ಟಂತಾಗಿದೆ. ಇಲ್ಲಿಯ ಹೆಚ್ಚಿನ ಪಾತ್ರಗಳು ಸಹಜ ವಿಕಾಸ ಹೊಂದುವ ಸಂವೇದನಾಶೀಲ ಪಾತ್ರಗಳು. ಕೆಲವು ದ್ವೇಷ, ಕ್ರೌರ್ಯ ಮತ್ತು ಒಳಸಂಚುಗಳಿಗೆ ಪ್ರತೀಕವಾದವುಗಳೂ ಬದುಕಿನ ಕ್ಲಿಷ್ಟತೆಗೆ ಒಳಗಾಗಿ ಹಪಹಪಿಸುವ ಪಾತ್ರಗಳೂ ಕಂಡು ಬರುತ್ತವೆ. ಪ್ರತಿಷ್ಠೆಯ ಅಸಹಾಯ ಜೀವಂತ ಪಾತ್ರಗಳು ಸ್ವಪ್ನ ಸಾರಸ್ವತದಲ್ಲಿ ಸಿಗುತ್ತವೆ. ಪ್ರಸ್ತುತ ಕಾದಂಬರಿಯ ಪಾತ್ರಗಳೂ ಕಥನಕ್ಕೆ ಪೂರಕವಾಗಿ ಬಂದಿರುವ ಕಾಲ್ಪನಿಕ ಪಾತ್ರಗಳಾಗಿವೆ.

ಕಾದಂಬರಿಯ ಪ್ರಾರಂಭದಲ್ಲಿ ೪೪ ಕುಟುಂಬಗಳು ವಲಸೆ ಹೋಗುವ ಕುರಿತು ಹೇಳುವ ಲೇಖಕರು ಮುಂದೆ ವಲಸೆ ಹೋಗುವ ಸಂದರ್ಭದಲ್ಲಿ ಮತ್ತೆ ನಾಲ್ಕು ಕುಟುಂಬಗಳನ್ನು ಜೊಡಿಸಿ ನಲವತ್ತೆಂಟು ಕುಟುಂಬಗಳು ವಲಸೆ ಹೋಗುತ್ತವೆ. ಈ ವಲಸೆ ವಿಷಯದ ಕುರಿತು ವಿವರಿಸುತ್ತಾ ಹೋಗುತ್ತಾರೆ. ವಲಸೆ ಕುರಿತು ಮಾತ್ರ ಹೇಳದೆ ದಾರಿ ಮಧ್ಯದಲ್ಲಿ ಅವರಿಗೆ ಕಾಣುವ ಜನರು, ಅರಸ

ರಾಣಿಯರ, ಪರಿಸರ ಅಲ್ಲಿನ ಸಂಪ್ರದಾಯ ದೇವಾಲಯಗಳು ಇತ್ಯಾದಿ ವಿಷಯ ಪ್ರಸ್ತಾಪವನ್ನು ಸಹ ಸುಂದರವಾಗಿ ಚಿತ್ರಿಸಿದ್ದಾರೆ. ಎಲ್ಲಕಿಂತಾ ಮುಖ್ಯವಾಗಿ ಸಾರಸ್ವತ ಬ್ರಾಹ್ಮಣರು ವಲಸೆ ಹೊದರು ಸಹ ತಮ್ಮ ಮೂಲ ವೃತ್ತಿಯಾದ ವ್ಯಾಪಾರವನ್ನು ಬಿಡದೆ ಅದರ ಮೂಲಕವೇ ತಮ್ಮ ಜೀವನ ನಡೆಸುವುದರ ಜೊತೆಗೆ ಆಸ್ತಿಸಂಪಾದನೆಯನ್ನು ಮಾಡಿರುವುದು ಇಲ್ಲಿ ಮುಖ್ಯ ಅನಿಸಿದೆ. ಮೂಲದಲ್ಲಿ ೪೮ ಕುಟುಂಬಗಳನ್ನು ಹೇಳುವ ಲೇಖಕರು ಕುಂಬಳಿಗೆ ಬರುವಲ್ಲಿ ನಾಲ್ಕು ಕುಟುಂಬಗಳಿಗೆ ಕಾದಂಬರಿಯನ್ನು ಸೀಮಿತ ಗೊಳಿಸುತ್ತಾರೆ. ನಾಲ್ಕು ಕುಟುಂಬಗಳಾದ ಬಳ್ಳಂಬೆಟ್ಟು ಪೈ, ಆಡುರು ಕಾಮತ, ಮಾನ್ಯೆಯ ಮಲ್ಯ, ಕಿಣಿಯರ ಕುಟುಂಬಗಳು. ಕುಂಬಳೆಯಿಂದಾ ಬಳ್ಳಂಬೆಟ್ಟು ಪ್ರದೇಶಕ್ಕೆ ಬಂದು ನಿಲ್ಲುವ ರಾಮಚಂದ್ರ ಪೈ ಕುಟುಂಬಕ್ಕೆ ಕಾದಂಬರಿಯೂ ಸೀಮಿತಗೊಳ್ಳುತ್ತದೆ. ಈ ಮಧ್ಯ ನಡೆಯುವ ಘಟನೆಗಳೆಲ್ಲವೂ ಕಾದಂಬರಿಯ ಕಥಾವಸ್ತುಗಳು ಒಂದಕ್ಕೊಂದು ಸಂಬಂಧಗಳು ಹೆಣೆಯುತ್ತಾ ಹೊಗುವದು ಕಾದಂಬರಿಯ ವಿಶೇಷತೆಯಾಗಿದೆ.

ಇನ್ನೊಂದು ಕಾದಂಬರಿಯ ವಿಶೇಷತೆ ಎಂದರೇ ಕಾದಂಬರಿಯಲ್ಲಿ ಬರುವ ಸಾರಸ್ವತ ಸಮುದಾಯ ಮತ್ತು ಪೋರ್ಚುಗೀಸರು ಇವರ ಮಧ್ಯದಲ್ಲಿ ಹೆಣೆದುಕೊಂಡ ಕಥಾವಸ್ತು ರಾಜ-ರಾಣಿಯರ ಮಧ್ಯವು ನೂಸುಳಿಕೊಂಡು ಹೊಗಿದ್ದನ್ನು ಸಹ ಗಮನಿಸಬಹುದು. ವಲಸೆ ಎನ್ನುವದು ವೆರಣಿಯಿಂದಾ ಕುಂಬಳಿ ಬಳ್ಳಂಬೇಟ್ಟಗೆ ಹರಿದು ಕೊಂಡು ಹೊದರು ಸಹ ಇವುಗಳ ಮಧ್ಯ ಒಂದೊಂದು ಪ್ರದೇಶದ ರಾಜ-ರಾಣಿಯರಾದ ಮಿಂಗ್ವೇಲ, ಅಬ್ಬಕ್ಕ, ಬಸವಪ್ಪ ನಾಯಕ, ಚನ್ನಭೈರಾದೇವಿ, ಜಯಸಿಂಹ ಸದಾಶಿವರಾಯ, ಚೆನ್ನಾದೇವಿ, ಲಕ್ಷ್ಮಪ್ಪ, ಚೌಟರರಾಣಿಯರ ಪರಿಚಯವನ್ನು ಕಾದಂಬರಿಯ ಮಾಡಿಕೊಡುತ್ತದೆ. ಅಲ್ಲದೆ ಅಲ್ಲಿರುವ ಪರಿಸರ ಜನರ ನಡುವಳಿಕೆ ಎಲ್ಲಿವೂ ಮುಖ್ಯವಾಗಿವೆ. ಜೊತೆಗೆ ಸಾರಸ್ವತರಿಗೆ ಮಾತ್ರ ಪೋರ್ಚುಗೀಸರು ವಿರೋಧಿಗಳಲ್ಲಾ ಅವರು ನಮ್ಮ ನಾಡಿನ ರಾಜ-ರಾಣಿಯರಿಗೂ ಅವರು ವಿರೊಧಿಗಳೆಂಬುವದು ಇಲ್ಲಿ ನೈಜತೆಯೆ ಚಿತ್ರಣ ಕಂಡುಬರುತ್ತದೆ. ಪೋರ್ಚುಗೀಸರ ವಿರುದ್ಧ ಹೋರಾಡಿದ ಅಬ್ಬಕ್ಕ ರಾಣಿ ಹೆಸರು ಇಂದಿಗೂ ಅಜರಾಮರವಾಗಿದೆ. ಏಕೆಂದರೆ ‘ಮಂಗಳೂರಿನ ಉಳ್ಳಾಲದ ಕಡಲ ತೀರದಲ್ಲಿ ನಾನೂರು ವರ್ಷಗಳಿಂದ ಹೋರಾಡಿದ್ದಕ್ಕಾಗಿ ಭಾರತೀಯ ಕರಾವಳಿ ಭದ್ರತಾ ನೌಕೆಗೆ ರಾಣಿ ಅಬ್ಬಕ್ಕಳ’[೩] ಹೆಸರನ್ನು ಇಡಲಾಗಿದೆ. ಹೀಗೆ ಕಾದಂಬರಿಯ ಕೆಲವು ಅಂಶಗಳನ್ನು ನಾವು ನೈಜತೆಯಲ್ಲಿ ಕಾಣಬಹುದಾಗಿದೆ.

ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾಗಿ ಕಾಣಿಸಿಕೊಳ್ಳುವ ವಿಟ್ಠು ಪೈ ಮತ್ತು ರಾಮಚಂದ್ರ ಪೈ ಇಬ್ಬರೂ ನಿರೂಪಕರೂ ಹೌದು, ಪಾತ್ರದಾರಿಗಳೂ ಹೌದು. ಇಲ್ಲಿ ವಿಟ್ಠು ಪೈ ತನ್ನ ಭೂತ ಘಟನೆಗಳು ನಿರ್ಮಿಸುವ ಕಥೆ ಹೇಳುತ್ತಾ ಸಾರಸ್ವತ ನಿರ್ಮಾಪಕರೂ ಸಹ ಆದಂತೆ ಕಂಡು ಬರುತ್ತದೆ. ನೆನಪುಗಳು ಜೀವನಸಾಧನೆಗಳು ಸ್ಪಷ್ಟ ಮತ್ತು ಜೀವಂತವಾಗಿ ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ಬರೆದಿಡುವ

ಇಲ್ಲವೇ ಮೌಖಿಕವಾಗಿ ಹೇಳುವ ಒಂದು ಸಂಪ್ರದಾಯವಿದೆ. ವಿಟ್ಠು ಪೈ ತನ್ನ ಎಲ್ಲ ಜೀವನದ ಅನುಭವಗಳನ್ನು ಮೊಮ್ಮಗನಿಗೆ ಹೇಳುವ ಮುಖ್ಯ ಉದ್ದೇಶವೆಂದರೆ ಪೂರ್ವಜರಿಂದಾ ಬೆಳೆದು ಬಂದ ನಾಗಶಾಪದ ಬಗ್ಗೆ ಮತ್ತು ಕಾಲಪುರುಷನಾದ ನಾಗ್ಡೊ ಬೇತಾಳನ ಕುರಿತಾಗಿ ಹೇಳುವದೇ ಮುಖ್ಯವಾಗಿತ್ತು. ರಾಮಚಂದ್ರ ಪೈ ತನ್ನ ಪೂರ್ವಜರ ಕಥೆಯನ್ನು ಕೇಳುತ್ತಾ ಅಲ್ಲಿರುವ ಹಲವು ಸಂಗತಿಗಳು ತನ್ನ ಜೀವನಕ್ಕೂ ಪೂರಕ ಅಂಶಗಳಾಗುತ್ತವೆ ಎಂಬುದನ್ನು ಸಹ ಅರಿತಿದ್ದ. ಕಾದಂಬರಿಯಲ್ಲಿ ಬಿಚ್ಚಿಕ್ಕೊಳುವ ಪಾತ್ರಗಳು ಕೇಲವು ಭೂತ, ವರ್ತಮಾನ, ಭವಿಷ್ಯತ ಕಾಲಕ್ಕೆ ಸಂಬಂಧಿಶಿದವುಗಳಾಗಿವೆ. ಈ ಎಲ್ಲ ಕಾಲದ ಒಟ್ಟು ಮೊತ್ತವೇ ಕಾದಂಬರಿಯಾಗಿ ರಚನೆಗೊಂಡಿದೆ.

ವಿಟ್ಠು ಪೈ ತನ್ನ ಜೀವನದುದ್ದಕ್ಕೂ ಸುಖ ಸಂತೋಷಗಳನ್ನೇ ಹೆಚ್ಚಾಗಿ ಕಂಡವನ್ನು ಅಲ್ಲದೆ ಶಾಪಗಳನ್ನು ಪೂರ್ವಜರಿಂದಾ ಪಡೆಯೂವದರ ಜೊತೆಗೆ ಮತ್ತೊಂದು ಅಂದರೇ 'ಧಡ್ಡ'ನ ಶಾಪವು ಇವನಿಗೆ ಹೊರೆ ಆಗುತ್ತದೆ. ಜೀವನವೇ ಬೇಸರ ಎಂಬುವಷ್ಟರಲ್ಲಿ ವಲಸೆ ಹೋಗುವ ವಿಷಯ ಪ್ರಸ್ತಾಪವಾಗುತ್ತದೆ. ಈ ಎಲ್ಲ ವಿಷಯಗಳನ್ನು ಕಥೆ ಹೇಳುವ ಮೂಲಕ ಮೊಮ್ಮಗನಾದ ರಾಮಚಂದ್ರ ಪೈನ ತಲೆಯ ಮೇಲೆ ಹೊರೆಸುತ್ತಾನೆ. ಯಾವುದಕ್ಕೂ ಕಾರಣನಾಗದ ರಾಮಚಂದ್ರ ಪೈ ಶಾಪಗಳನ್ನು ತನ್ನ ಮುಂದಿನ ಪಿಳಿಗೆಗೂ ತಿಳಿಸುವ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ಕೆಲವು ಸಾರಿ ಶಾಪಗಳಿಂದ ಮುಕ್ತಿ ಪಡೆಯಲೂ ಹೋಗಿ ತೊಂದರೆಯಲ್ಲಿ ಸಲುಕಿದ್ದು ಉಂಟು. ಈ ವಿಟ್ಠು ಪೈ ಮತ್ತು ರಾಮಚಂದ್ರ ಪೈ ಪಾತ್ರಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಕಾದಂಬರಿಯಲ್ಲಿ ಕಂಡು ಬಂದಿವೆ.

ಕಾದಂಬರಿ ಕೊನೆಯ ಭಾಗದಲ್ಲಿ ಕಾಣಿಸಿಕೊಳ್ಳುವ ಭುಜಂಗ ಪೈನ ಪಾತ್ರವೂ ಸಾರಸ್ವತ ಬ್ರಾಹ್ಮಣರ ನಂಬಿಕೆಗಳನ್ನು ಹೂಸಿಗೊಳಿಸಿದೆ ಎಂಬಂತೆ ನಿರೂಪಕರು ಪಾತ್ರ ರಚನೆ ಮಾಡಿದ್ದಾರೆ. ಭುಜಂಗ ಪೈಗೆ ಹುಟ್ಟಿನಿಂದಲು ದ್ವೇಷ ಎಂಬುದು ತನ್ನ ರಕ್ತಗತವಾಗಿದೆ ಎಂಬ ನಂಬಿದಕ್ಕೆ ಮಹಾಭಾರತದಲ್ಲಿ ಪಾಂಡವರ ಅರಗಿನ ಮನೆಗೆ ಬೆಂಕಿ ಇಡುವ ದಾಯಾದಿಗಳಂತೆ ಕಾದಂಬರಿಯಲ್ಲಿ ಭುಜಂಗ ಪೈ ಪಾತ್ರ ಕಾಣಿಸಿಕೊಳ್ಳುತ್ತದೆ. ಇಲ್ಲಿ ರಾಮಚಂದ್ರ ಪೈ ಮನೆಯ ದಹನಕ್ಕೆ ಬಂದ ಭುಜಂಗ ಪೈ ಇಲ್ಲಿ ಕಂಡದ್ದೆ ಬೇರೆ ತಾನೊಂದು ಬಗೆದರೆ ದೈವ ಒಂದು ಬಗೆಯುತ್ತೇ ಎಂಬಂತೆ ಭಜಂಗ ಪೈ ಬಂದದ್ದು ತನ್ನ ದಾಯಾದಿ ಮನೆ ಭಸ್ಮಕ್ಕಾಗಿ ಆದರು ಅಲ್ಲಿ ಅವನಿಗೆ ಕಂಡದ್ದು ಜಾಹ್ನವಿ ಎಂಬ ನರಭಕ್ಷಕಿಯ ರೂಪ ಇದು ಪಾತ್ರದ ಮುಖಾಂತರ ಕಂಡದ್ದು ಇಲ್ಲಾ ನಿರೂಪಕರು ಪಾತ್ರವನ್ನು ರೂಪಿಸುವಲ್ಲಿ ಮಾಡಿಕೊಂಡ ತಂತ್ರವೋ ಎಂಬುದು ಗೌಣವಾಗಿದೆ. ತನ್ನ ಸಾವನ್ನು ತಾನೇ ತಟ್ಟಿ ಎಬ್ಬಿಸುವ ಕೆಲಸವನ್ನು ಭುಜಂಗ ಪೈ ಮಾಡಿರುವುದು ನಿರೂಪಕರ ತಂತ್ರದೊಂದಿಗೆ ದುಷ್ಟರ ಕೊನೆಯ ಸ್ಥಿತಿಯನ್ನು ನೋಡುವಂತಾಗಿದೆ. ಜೀವನದಲ್ಲಿ ಬೇರೆಯವರಿಗೆ ಒಳ್ಳೆಯದು ಇಲ್ಲಾ ಕೆಟ್ಟದ್ದು ಬಯಸಿದರೇ ಕೊನೆಗೆ ಆಗುವ ಅನಾಹುತ ಯಾವ ಮಟ್ಟಕ್ಕೆ ಬಂದು

ನಿಲ್ಲುತ್ತದೆ ಎಂಬುದನ್ನು ಭುಜಂಗ ಪೈ ನೊಂದಿಗೆ ತಿಮ್ಮ ಪೈನನ್ನು ಸಹ ಇಲ್ಲಿ ತೋರಿಸುತ್ತಾರೆ. 'ವಿಪರಿತ ಬುದ್ಧಿ ವಿನಾಶಕ್ಕೆ ಕಾರಣ' ಎಂಬುದು ತಿಮ್ಮ ಪೈನ ಜೀವನದ ಒಟ್ಟು ಸಾರವೆನಿಸಿಕೊಳ್ಳುತ್ತದೆ.

ಪಾತ್ರಗಳ ಜೊತೆಗೆ ಕಾದಂಬರಿಯಲ್ಲಿ ಪರಿಸರವು ಮುಖ್ಯವೆನಿಸಿಕೊಂಡಿದೆ. ಸಾರಸ್ವತರು ಕೃಷಿಯನ್ನು ಅವಲಂಬಿಸಿದ್ದು ಈ ಕಾರಣಕ್ಕಾಗಿಯೋ ನೆಲದ ಬಗ್ಗೆ, ಬೆಳೆಯ ಬಗ್ಗೆ, ಹೇಳಬೇಕಾದ ಅನಿವಾರ್ಯತೆ ನಿರೂಪಕರಿಗೆ ಬಂದರು ಸಹ ಪ್ರಾರಂಭದಲ್ಲಿ ಅಂದರೇ ವಿಟ್ಠು ಪೈ ಹುಟ್ಟಿದ ಸಮಯದಲ್ಲಿ ಆದ ಮಳೆಯ ಪ್ರಸ್ತಾಪ ವಲಸೆ ಸಂದರ್ಭದಲ್ಲಿ ಕಾಣದೇ ಹೋಗುತ್ತದೆ. ಆದರೆ ನದಿಗಳು ತುಂಬಿ ಹರಿಯುವದು ಮತ್ತು ಬೆಳೆಯ ಬಗ್ಗೆ ವಿಷಯಗಳು ಕಾದಂಬರಿಯ ಕೊನೆಯವರೆಗೆ ಅಲ್ಲಲ್ಲಿ ಕಾಣಸಿಕೊಳ್ಳುತ್ತವೆ. ಇದು ಕಾದಂಬರಿಕಾರು ಪ್ರಕೃತಿಯ ಬಗ್ಗೆ ಹೇಳುವಲ್ಲಿ ಮಳೆಯಿಂದಾ ಬೆಳೆ, ನದಿಗೆ ನೀರು ಎಂಬ ಸಂಬಂಧವನ್ನು ಮರೆತಿರುವಂತೆ ಕಾಣುತ್ತದೆ. ಇಲ್ಲಿ ಬರುವ ಫುಲ್ಲಾ ನದಿ ವರ್ಷದೂದ್ದಕ್ಕೂ ತುಂಬಿ ಹರಿಯುವಂತೆ ಚಿತ್ರಣವಾಗಿದೆ. ನದಿಯನ್ನು ಪೋರ್ಚುಗೀಸರು ದೇವರ ವಿಗ್ರಹಗಳನ್ನು ಒಗೆಯಲು ಬಳಸಿಕೊಂಡಿದ್ದಾರೆ. ಇನ್ನೊಂದೆಡೆ 'ಅಲ್ಟಾಂಡ್ರಾದ ಉದ್ದೋ ಉದ್ದ ಗಿಡಮರರಹಿತ ಹಳದಿ ಬಣ್ಣದ ನೆಲದ ಆಲೂಗಡ್ಡೆಯ ಗದ್ದೆಗಳಿಂದ ಬಂದ ಕೋಮಿನೋಗೆ ಗುಡ್ಡ ಬೆಟ್ಟಗಳು ಹಸಿರು ಗೋವೆ ಗಂಧರ್ವ ನಾಡಿನಂತೆ ಕಾಣುತ್ತಿತ್ತು.' ಎಂದು ಹೇಳಿರುವುದು ಉಂಟು ಕಾದಂಬರಿಯಲ್ಲಿ ವೆರಣೆಯ ಪರಿಸರ ಒಂದು ರೀತಿಯಾಗಿ ಕಂಡುಬಂದರೆ ವಲಸೆ ಹೊದ ಸಂದರ್ಭಗಳಲ್ಲಿ ಅಲ್ಲಿರುವ ಪರಿಸರ ಸಾರಸ್ವತರಿಗೆ ವೆರಣಿಯ ಪರಿಸರದ ನೆನಪು ಮರುಕಳಿಸುವಂತೆ ಮಾಡುತ್ತದೆ. ಕಾಲಕ್ಕೆ ತಕ್ಕಂತೆ ಮನುಷ್ಯ ಬದಲಾದಂತೆ ಪ್ರದೇಶಕ್ಕೆ ತಕ್ಕಂತೆ ಪರಿಸರ ಕೂಡಾ ಬದಲಾಗುತ್ತಾ ಹೋಗಿದೆ.

ಪರಿಸರವನ್ನು ಕಾದಂಬರಿಯಲ್ಲಿ ಬಳಸಿಕೊಳ್ಳತ್ತಾ ಹೋದರೆ ವಿಷಯದ ವಿಸ್ತಾರದ ಜೊತೆಗೆ ಸೌಂದರ್ಯವೂ ಹೆಚ್ಚುತ್ತದೆ. ಇಲ್ಲಿ ನದಿ ಸಮುದ್ರ ಎಂಬ ಪ್ರಕೃತಿಯ ಸಹಜ ಲಕ್ಷಣವನ್ನು ಹೇಳಿದ್ದಾರೆ. ಜೊತೆಗೆ ಅದರ ವಿಕೋಪವು ಯಾವ ರೀತಿಯಲ್ಲಿ ಆಗುತ್ತದೆ ಎಂಬ ವಿಷಯವೂ ಕಾದಂಬರಿಯಲ್ಲಿ ಮುಖ್ಯವಾಗಿ ಬಂದಿದೆ. ಇಲ್ಲಿ ಸಮುದ್ರದಲ್ಲಿ ಕೊಚ್ಚಿಕೊಂಡು ಹೋದ ರಾಯ ಪೈ ಮತ್ತು ಸಾಂತಪ್ಪ ಪೈರನ್ನು ನೋಡುತ್ತೇವೆ. 'ವಲಸೆ' ಸಂದರ್ಭದಲ್ಲಿ ಪ್ರಕೃತಿ ಸೌಂದರ್ಯ ಜೊತೆಗೆ ಇಂಪಾದ ಹಾಡನ್ನು ಕಾದಂಬರಿಯಲ್ಲಿ ಮೂಡಿ ಬಂದಿರುವುದು ಕಾಣುತ್ತೇವೆ.

"ತುಪ್ಪಶನ ಉಂಬತಿ ತುಳು ನಾಡಿಂಗೋಯೆಕ್ಕು।
ಅಕ್ಕಿಯ ಮೇಲೆ ಗೆರೆಯಲ್ಲೆ
ಅಕ್ಕಿಯ ಮೇಲೆ ಗೆರೆಯಿಲ್ಲೆ।ತುಳುನಾಡ।
ಮಕ್ಕಳ ಮೈಮೇಲೆ ಕಲೆಯಿಲೇ॥ "

ಎಂಬ ಅಚ್ಚ ಕನ್ನಡ ಶಬ್ದಗಳ ಬಳಕೆಯಾಗಿದೆ. ಇದು ಕೊಂಕಣಿಯರಿಗೆ ಕನ್ನಡ ಪದಗಳ ಪರಿಚಯ ಮಾಡುವ ಉದ್ದೇಶದಿಂದಾ ಬಳಕೆ ಮಾಡಿದ್ದಾರೋ ಇಲ್ಲಾ ಪ್ರದೇಶ ಬದಲಾದಂತೆ ಭಾಷೆ ಬದಲಾಗುತ್ತದೆ ಎಂಬುದನ್ನು ತೊರಿಸುತ್ತಾರೋ? ಎಂಬುದನ್ನು ನಿರ್ಧರಿಸುವದು ಕಷ್ಟ ಇದು ಬಹುಶಃ ಕಾದಂಬರಿಕಾರರ ವಿಶೇಷತೆಯಾಗಿದೆ. ಕಾದಂಬರಿಯ ಮೂಲದಲ್ಲಿ ಧರ್ಮಕ್ಕೆ 'ವಲಸೆ' ಕಂಡು ಬಂದರೆ ಕೊನೆಗೆ ಅಂದರೆ ರಾಮಚಂದ್ರ ಪೈ ಕಾಲದಲ್ಲಿ ಪರಿಸರ ನೆಲಕ್ಕಾಗಿ ಕುಂಬಳಿಯಿಂದಾ ಬಳ್ಳಂಬೆಟ್ಟಕ್ಕೆ ವಲಸೆ ಹೋಗಿರುವುದನ್ನು ನೋಡುತ್ತೇವೆ. ಇದು ವಲಸೆಯ ಇನ್ನೊಂದು ಮುಖದಂತೆ ಕಾಣುತ್ತದೆ.

'ಸ್ವಪ್ನ ಸಾರಸ್ವತ' ಕಾದಂಬರಿಯೋ ಭಾಷೆ ಮತ್ತು ಪ್ರಾದೇಶಿಕತೆ ದೃಷ್ಟಿಯಿಂದಲು ರಚನೆಯಾಗಿರುವುದು ಕಂಡು ಬರುತ್ತದೆ. ಇಲ್ಲಿ ಭಾಷೆ ಎನ್ನುವುದು ತಿಳುವಳಿಕೆ ಜೀವನಕ್ರಮ ಎಂಬ ಅರ್ಥವನ್ನು ಒಳ್ಳಗೊಂಡಿದೆ. ಪ್ರಾದೇಶಿಕತೆ ಎನ್ನುವುದು ಒಂದು ಪ್ರದೇಶದ ಸುತ್ತ ಹೆಣೆದುಕೊಂಡ ಅಲ್ಲಿರುವ ಭಾಷೆ, ಆಚರಣೆ, ನಂಬಿಕೆ ಸಂಪ್ರದಾಯ ಹಬ್ಬಗಳು ಇತ್ಯಾದಿ ವಿಷಯಗಳನ್ನು ಪ್ರತಿಬಿಂಬಿಸುತ್ತವೆ. ಕಾದಂಬರಿಯಲ್ಲಿ ಬರುವ ಕೊಂಕಣಿ ಭಾಷೆ ಸಮುದ್ರದ ದಂಡೆಯಲ್ಲಿ ಬದುಕುವ ಜನರ ಭಾಷೆಯಾಗಿದೆ ಇಲ್ಲಿ ಧರ್ಮ ಮುಖ್ಯವಲ್ಲ ಪ್ರದೇಶ ಮುಖ್ಯವಾಗಿರುತ್ತದೆ. ಗೋವಾ ಪ್ರದೇಶ ಜನರು ಸಮುದ್ರದ ದಂಡೆಯವರಾದ್ದರಿಂದ ಅವರು 'ವಲಸೆ' ಹೋದರು ಸಹ ಕುಂಬಳೆಯಲ್ಲಿ ಸಮುದ್ರ ತೀರ ಇರುವುದರಿಂದಾ ಭಾಷೆಯ ತೊಂದರೆಯನ್ನು ಅವರು ಕಾಣದೇ ಹೋಗುತ್ತಾರೆ. ಪ್ರಾದೇಶಿಕತೆ ಎನ್ನುವದು ಕಾದಂಬರಿಯಲ್ಲಿ ಮುಖ್ಯ ಎಂಬಂತೆ ಕಂಡುಬಂದಿದೆ.

ಗ್ರಾಮೀಣ ಸಮುದಾಯದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪರಿಸರವನ್ನು ತಿಳಿಯಲು ಮತ್ತು ಸೃಜನಶೀಲ ಲೇಖಕರ ಆಶೋತ್ತರಗಳನ್ನು ಅರ್ಥೈಸುವಲ್ಲಿ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಯಾವುದೇ ಸಮುದಾಯದ ಅಥವಾ ಸಮಾಜದ ಪರಂಪರಾಗತ ಪ್ರಭಾವ ಭಾಷೆಯ ಮೇಲೆ ಆಗಿರುತ್ತದೆ. ಆದ್ದರಿಂದಲೇ ಸಮುದಾಯ ಮತ್ತು ಭಾಷೆಗಳು ಪರಸ್ಪರ ಕೂಡಿಕೊಳ್ಳುವ ಮಾರ್ಗದಲ್ಲಿ ನಿರಂತರವಾಗಿ ಸಾಗುತ್ತಿರುತ್ತದೆ. ಒಂದು ಕೃತಿಯ ಆಶಯವನ್ನು ಭಾಷೆಯ ರಚನೆಯ ಮೂಲಕ ಕಂಡುಕೊಳ್ಳುತ್ತೇವೆ.

ಜನರ ಭಾಷೆಯ ಮೇಲೆ ಪ್ರಾದೇಶಿಕತೆಯ ಪ್ರಭಾವ ಅನನ್ಯವಾಗಿರುತ್ತದೆ. ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳು ನೈಸರ್ಗಿಕ ಅನುಕೂಲತೆ ಅನಾನೂಕಲತೆಗಳು ಜನರ ಭಾಷೆಯನ್ನು ರೂಪಿಸುತ್ತವೆ. ಜನ ಭಾಷೆಗೆ ದೇಸೀಯ ಚೆಲುವು, ಗ್ರಾಮೀಣ ಸತ್ವಗಳು ಸೇರಿಕೊಂಡಿವೆ. ಜನ ಸಾಮಾನ್ಯರ ಜನಪದರ ಗಾದೆ, ಪಡೆನುಡಿ, ದ್ವಿರುಕ್ತಿ, ಪದಗಳುಕೂಡಾ ಸೇರಿಕೊಂಡಿವೆ. ಆಡು ನುಡಿಯಲ್ಲಿ ತಂತಾನೇ ಸಹಜವಾಗಿ ಅವು ಸೇರಿಕೊಂಡು ಪ್ರಾದೇಶಿಕ ಮುದ್ರೆಯನ್ನುತ್ತಿವೆ. ಗ್ರಾಮೀಣ ಜನರ ಮಾತುಗಳಲ್ಲಿ ಬರುವ

ಆ ಅಂಶಗಳು ಜನಪದ ಭಾಷೆಯ ಸತ್ವಶಕ್ತಿಗಳನ್ನು ಪ್ರಕಟಿಸಿ ಮನುಷ್ಯನ ಮನಸ್ಸಿನ ಒಳಪದರುಗಳನ್ನು ಬಿಚ್ಚಿಡುತ್ತವೆ.

ಕಾದಂಬರಿಯಲ್ಲಿ ಸಂದರ್ಭಾನುಸಾರ ಸಹಜವಾಗಿ ದ್ವಿರುಕ್ತಿಗಳನ್ನು ಉಪಯೋಗಿಸಿದ್ದಾರೆ. ಭಾವನೆಗಳು ಸಮಯ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಅರಳಲು ಹಾಗೂ ಆಯಾ ಭಾವನೆಯ ತೀವ್ರತೆಯನ್ನು ಹೆಚ್ಚಿಸಲು ಈ ದ್ವಿರುಕ್ತಿಗಳು ಸಹಾಯವಾಗುತ್ತವೆ. ಕಾದಂಬರಿಯಲ್ಲಿ ಆಶ್ಚರ್ಯ, ಕೋಪ, ಉತ್ಸಾಹ, ಸಂಭ್ರಮ, ಸಡಗರ, ದುಃಖ ದುಮ್ಮಾಣ ಮುಂತಾದ ಸಂದರ್ಭಗಳಲ್ಲಿ ಬಳಕೆಯಾಗಿರುವುದನ್ನು ನೋಡುತ್ತೇವೆ. ಉದಾಹರಣೆ ತುಂಡ ತುಂಡ ಮಾಡಿ ಘುಲ್ಲಾನದಿಗೆ ಎಸೆದಿದ್ದ ಎಂದು ಬಳಕೆಯಾಗಿರುವುದನ್ನು ನೋಡುತ್ತೇವೆ. ಉಪಮೆ ರೂಪಕಗಳಾಗಿ ಗ್ರಾಮೀಣ ಜನರು ಬಳಸುವ ದಿನನಿತ್ಯದ ವ್ಯವಹಾರಿಕ ಮಾತುಗಳನ್ನು ಅಲಂಕಾರಯುಕ್ತವಾಗಿ ಎತ್ತಿಕೊಂಡ ಕಾದಂಬರಿಯ ಭಾಷಗೆ ಮೆರಗು ಬರುವಂತೆ ಲೇಖಕರು ಜಾನಪದ ಭಾಷೆಯನ್ನು ದುಡಿಸಿಕೊಂಡಿದ್ದಾರೆ. ಜನಪದರ ಸರಳ ನುಡಿಗಳು ಹಾಗೂ ಸುಂದರ ಸುಭಾಷಿತಗಳನ್ನು ನಿರೂಪಕರು ಬಳಸಿರುವುದರಿಂದ ಕಾದಂಬರಿಯು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. 'ಮಾಡಿದ ಪಾಪ ಹಾಸುವಷ್ಟು ಹೊದೆಯುವಷ್ಟು ತುಂಬಿಕೊಂಡಾಗ ನಾಗಪ್ಪ ಏಕೆ? ನಿಂತಾನು' (ಪು.೮೨೨) ಎಂದು ಬಳಸಿರುವುದನ್ನು ಕಾಣುತ್ತೇವೆ. ಇದೇ ರೀತಿ ಕಾದಂಬರಿ ಉದ್ದಕ್ಕೂ ಸಂದರ್ಭಕ್ಕೆ ತಕ್ಕಂತೆ ಬಳಕೆಗೊಂಡಿವೆ.

ಪೈರವರ ಕಾದಂಬರಿಯಲ್ಲಿ ಬಳಕೆಯಾದ ಬೈಗುಳಗಳು ಭಾಷೆಯ ಪರಿಣಾಮಕಾರಿ ಘಟಕಗಳಾಗಿವೆ. ಅವು ಒಂದು ರೀತಿಯಲ್ಲಿ ಭಾಷಿಕ ಹೊಡೆತ ಎನ್ನಬಹುದು. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು ಮತ್ತು ಸಂಕೀರ್ಣವಾದುದು ವ್ಯಕ್ತಿಗೆ ದೈಹಿಕ ಮತ್ತು ಮಾನಸಿಕ ಯಾತನೆಯಾದಾಗ ಬೈಗುಳಗಳು ಸೃಷ್ಟಿಯಾಗುತ್ತವೆ. ಬೈಗುಳಗಳೂ ಪ್ರಾದೇಶಿಕತೆ ಎಂಬುದರ ಹಿನ್ನಲೆಯಲ್ಲಿ ಹುಟ್ಟಿಕೊಳ್ಳುವದರಿಂದ ಒಂದು ಪ್ರದೇಶದಲ್ಲಿ ನಡೆಯುವ ಶವಸಂಸ್ಕಾರ, ವಿಧವೆತನ, ವೇಶ್ಯಾವಾಟಿಕೆ ಇತ್ಯಾದಿ ವಿಷಯದ ಪ್ರತಿನಿಧಿಸುವಂತ ಬೈಗುಳಗಳು ಹುಟ್ಟಿಕೊಂಡಿರುತ್ತವೆ. ಇವು 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲೂ ಅವಶ್ಯಕ ಎಂಬಂತೆ ಬಳಕೆಗೊಂಡಿವೆ. ಇಲ್ಲಿ ಸೂಳೇಮಗ, ಬೋಳಿಮಗ, ಹಡಬೆಮಗ, ರಂಡೆ ಪುತ್ರಾ, ಶೂದ್ರ ಮುಂಡೆ ಮಗ ಎಂಬ ಬೈಗುಳಗಳೂ ಸ್ತ್ರೀಯನ್ನು ಕೇಂದ್ರವಾಗಿ ಇಟ್ಟುಕೊಂಡಿವೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇವುಗಳ ಜೊತೆಗೆ ಅಲ್ಲಲ್ಲಿ ಜೋಡಿನುಡಿ ಪದಗಳ ಬಳಕೆಯೂ ಆಗಿರುವುದನ್ನು ಗಮನಿಸಬಹುದು.

ಹೀಗೆ ಒಂದು ಕಾದಂಬರಿಗೆ ಬೇಕಾದ ಭಾಷೆ ಮತ್ತು ಪ್ರಾದೇಶಿಕತೆ ಎಂಬುದನ್ನು ಗೋಪಾಲಕೃಷ್ಣ ಪೈ ಅವರು ತಮ್ಮ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ಬಳಸುವದರ ಮುಖಾಂತ ಕಾದಂಬರಿಯು ವಿಶಾಲತೆ ಜೊತೆಗೆ ವಿಶೇಷತೆಯನ್ನು ಕಾಣುವಂತಾಗಿದೆ.

ಕೊನೆ ಟಿಪ್ಪಣಿ

೧. ಗೋಪಾಲಕೃಷ್ಣ ಪೈ, **'ಸ್ವಪ್ನ ಸಾರಸ್ವತ'** ಮುಖ ಪುಟ

೨. ಗೋಪಾಲಕೃಷ್ಣ ಪೈ, **ಸ್ವಪ್ನ ಸಾರಸ್ವತ,** ಪುಟ–೧೪೭

೩. ದಿನಪತ್ರಿಕೆ, **ಪ್ರಜಾವಾಣಿ,** ೨೧.೦೧.೨೦೧೨, ಪುಟ–೧

೪. ಗೋಪಾಲಕೃಷ್ಣ ಪೈ, **ಸ್ವಪ್ನ ಸಾರಸ್ವತ,** ಪುಟ–೪೪

೫. ಗೋಪಾಲಕೃಷ್ಣ ಪೈ, **ಸ್ವಪ್ನ ಸಾರಸ್ವತ,** ಪುಟ–೨೧೯

ಅಧ್ಯಾಯ – ೬

ಸಮಾರೋಪ

ಫಲಿತಗಳು

ಅಧ್ಯಾಯ – ೬

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಸಾಹಿತ್ಯ ಪ್ರಕಾರವು ತನ್ನ ಪರಂಪರಾಗತ ಶೈಲಿಯನ್ನು ಕಥನದ ಮೂಲಕ ವಿಭಿನ್ನ ರೂಪದಲ್ಲಿ ಕಾಣಿಸಿಕೊಳ್ಳುತ್ತಾ ಸಾಗಿದೆ. ಭಾಷಾಗನುಗುಣವಾಗಿ ಮಾಧ್ಯಮದ ಬದಲಾವಣೆಯನ್ನು ಸಹ ಕಾದಂಬರಿ ಸಾಹಿತ್ಯ ಹೊಂದುತ್ತಾ ಇದೆ. ವಿಷಯವಸ್ತು, ಪರಂಪರೆ ಮತ್ತು ಸ್ಥಿತ್ಯಂತರಗೊಳ್ಳುವ ಸಮಾಜದ ನಡುವಿನ ಸಂಘರ್ಷವನ್ನು ಹೊಸದಾಗಿ ರೂಪಾತ್ಮಕವಾಗಿ ಬದಲಾವಣೆಗೊಳಿಸುತ್ತಾ ಸಾಗುತ್ತಿದೆ. ಇಂತಹ ಸಂದರ್ಭದಲ್ಲಿ ಗೋಪಾಕೃಷ್ಣ ಪೈಯವರು ಸಾಕಷ್ಟು ಅಧ್ಯಯನ ಮಾಡಿ ಸಾರಸ್ವತ ಬ್ರಾಹ್ಮಣರ ಚರಿತ್ರೆಯ ಹಿನ್ನೆಲೆಯಲ್ಲಿ ನೂರಾರು ಪಾತ್ರಗಳ ಜೀವನ ಸಂಘರ್ಷವನ್ನು ಅಕ್ಷರಗಳಲ್ಲಿ ಹಿಡಿದಿಟ್ಟು ಆ ಕಥೆಗೆ ಒಂದು ಕಲಾಕೃತಿ ಚೌಕಟ್ಟಿನಲ್ಲಿ ಇತಿಹಾಸವನ್ನು ಮಿಶ್ರಣ ಮಾಡುವದರ ಮೂಲಕ 'ಸ್ವಪ್ನ ಸಾರಸ್ವತ' ಎಂಬ ಅಪರೂಪದ ಕಾದಂಬರಿಯನ್ನು ನೀಡಿದ್ದಾರೆ. ಇಂತಹ ಕಾದಂಬರಿಯೋ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ರೀತಿಯ ಇತಿಹಾಸವನ್ನು ನಿರ್ಮಿಸಿದಂತಾಗಿದೆ. ಈ ಕಾದಂಬರಿಯು ಐದು ಮುದ್ರಣ ಕಂಡಿರುವುದಲ್ಲದೆ ಸಾಹಿತ್ಯ ಕ್ಷೇತ್ರದ ಹಲವು ಪ್ರಶಸ್ತಿಗಳನ್ನು ಇದು ಪಡೆದು ಕೊಂಡಿದೆ. ಎಲ್ಲಕ್ಕಿಂತ ಮೇಲಾಗಿ ಅಕಾಡಮಿಕ್ ವಲಯದಿಂದ ಹೊರಗಿನವರೊಬ್ಬರ ಅಂದರೆ ನಿವೃತ್ತ ಬ್ಯಾಂಕ ಅಧಿಕಾರಿಗಳಾದ ಗೋಪಾಲಕೃಷ್ಣ ಪೈರವರು ಸಾಹಿತ್ಯದಲ್ಲಿ ಈ ಪರಿಯ ಸಾಧನೆ ಮಾಡುತ್ತಿರುವ ವಾಸ್ತವವು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ತೋರುತ್ತಿದೆ.

'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ಹಿಂದೂತ್ವವಾದಿ (ಬ್ರಾಹ್ಮಣತ್ವದ) ಮೇಲೆ ಆಗುತ್ತಿರುವ ಚಾರಿತ್ರಿಕ ಅನ್ಯಾಯದ ಬಗ್ಗೆ ಹಳಹಳಿಕೆ ಪ್ರಗತಿಪರ ಅನಿಸಿಕೊಂಡವರು ಡೊಳ್ಳುತನ, ದಬ್ಬಾಳಿಕೆ ಬಗೆ ಲೇವಡಿ ಮತ್ತು ಸಿಟ್ಟು ತುಂಬಿದೆ. ವಂಶಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿರುವ ಸಂಪ್ರದಾಯವನ್ನು ಮುರಿಯಲು ಕಿರಿಸ್ತಾನ ಎಂಬ ಪರದೆ ಅವರ ಬೆನ್ನು ಹತ್ತಿದೆ. 'ಸತ್ಯ' ತಮ್ಮ ಕಡೆ ಇದ್ದರೂ ನಮ್ಮ ಮಾತು ಯಾರು ಕೇಳುತ್ತಿಲ್ಲವಲ್ಲ ಎಂಬ ಹತಾಶೆ, ಉದ್ವೇಗ, ಆತಂಕದ ಛಾಯೆ ದಟ್ಟವಾಗಿ ವ್ಯಾಪಿಸಿದೆ. ನಮ್ಮ ದೇಶದಲ್ಲಿ ಮತಾಂತರ ಎಂಬುದು ಕೇವಲ ಪೋರ್ಚುಗೀಸರಿಂದ ಮಾತ್ರ ಹುಟ್ಟಿಕೊಂಡದಲ್ಲಾ ಬದಲಾಗಿ ಇದು ಹಿಂದಿನಿಂದಲೂ ನಡೆದು ಬರುತ್ತಿರುವ ಒಂದು ಅಮಾನವಿಯ ಘಟನೆಯಂತಲೆ ನಾವು ಕರೆಯಬಹುದು. ಮತಾಂತರ ಎಂಬ ಪದ ನಮ್ಮ ದೇಶದಲ್ಲಿ ಹಾಸುಹೊಕ್ಕಾಗಿದೆ ಎಂತಲೆ ನಾವು ಹೇಳಬಹುದು.

ಈ ಕಾದಂಬರಿ ಇತಿಹಾಸ ಮತ್ತು ಕಲ್ಪನೆಯ ಸಮಿಶ್ರ ಫಲವಾಗಿ ೧೬ನೇ ಶತಮಾನದಲ್ಲಿ ಗೋವಾ ಬಿಟ್ಟು ದಕ್ಷಿಣದ ರಾಜ್ಯಗಳತ್ತ ವಲಸೆ ಹೋಗುವ ಹಿನ್ನೆಲೆಯಲ್ಲಿ ಕಥಾವಸ್ತು ಹುಟ್ಟಿಕೊಂಡಿದ್ದು. ಒಟ್ಟು ನಾಲ್ಕು ಭಾಗಗಳನ್ನು ಹೊಂದಿದೆ. ಈ ಕೃತಿಯ

ಮೊದಲ ಎರಡು ಭಾಗಗಳಲ್ಲಿ ಗೋವಾದ ವಿಪ್ಲವದ ದಿನಗಳ ಚಿತ್ರಣವಿದೆ. ಪೋರ್ಚುಗೀಸರು ಗೋವಾವನ್ನು ಆಕ್ರಮಿಸಿ ನಡೆಸಿದ ದಬ್ಬಾಳಿಕೆಯು ಅಲ್ಲಿನ ಜನರ ಜೀವನವನ್ನೆ ನಲುಗಿಸಿದ ದುರ್ಭರ ದಿನಗಳ ಕಥನ ವಿವರವಾಗಿ ಮುಡಿ ಬಂದಿದೆ. ಅಂದಿನ ಜನಸಾಮಾನ್ಯರು ಅಶಸ್ತ್ರರು, ಪೋರ್ಚುಗೀಸ್ ಸೈನಿಕರು ಅಮಾಯಕರ ಮೇಲೆ ನಡೆಸುವ ದೌರ್ಜನ್ಯವನ್ನು ಬಿಡಿಸಿಡುವಾಗ ಗೋಪಾಲಕೃಷ್ಣ ಪೈರವರ ಲೇಖನಿ ಹರಿತವಾಗಿ ಓಡಾಡಿದೆ. ಕಾದಂಬರಿಯ ಪ್ರಮುಖ ಪಾತ್ರವಾದ ವಿಟ್ಠು ಪೈ ಜನಿಸುವ ಸಮಯದಲ್ಲಿ ಪೋರ್ಚುಗೀಸರು ಗೋವಾದ ಮೇಲೆ ಎರಗಿದರು. ಗೋವಾದಲ್ಲಿನ ಜನರನ್ನು ಮತಾಂತರಗೊಳಿಸ ತೊಡಗಿದರು. ಆಮಿಷೆಗಳಿಂದ ಮತ್ತು ಪವಾಡಗಳಂತಹ ಚಮತ್ಕಾರಗಳ ಪ್ರದರ್ಶನದಿಂದ ಆರಂಭಗೊಂಡ ಮತಾಂತರವು ನಂತರ ಬಲಾತ್ಕಾರ ಮತ್ತು ಹಿಂಸೆಯ ಮತಾಂತರದತ್ತ ತಿರುಗಿತು. ಇನಕ್ವಿಸಿಷನ್ (ಧಾರ್ಮಿಕ ವಿಚಾರಣೆ) ಎಂಬ ಹತ್ಯಾಕಾಂಡದ ವಿವರಗಳನ್ನು ಪೈರವರು ಕಾದಂಬರಿಯಲ್ಲಿ ಅಳವಡಿಸಿದ್ದರು ಆ ವಿವರ ನೀಡುವಾಗ ತುಂಬಾ ಸಂಯಮ ತೋರಿದ್ದಾರೆಂದೇ ಹೇಳಬಹುದು. ಇನಕ್ವಿಸಿಷನ್ ಸಮಯದಲ್ಲಿ ನಡೆದ ಭಯೋತ್ಪಾದನೆಯನ್ನು ಅತಿ ರಂಜಿಸುವ ಅಪಾಯದಿಂದ ದೂರ ಉಳಿದು ಸೂಚ್ಯವಾಗಿ ಅಲ್ಲಲ್ಲಿ ಅದರ ಪ್ರಸ್ತಾಪ ಮಾಡಿ ಅಂಥದ್ದೊಂದು ಹತ್ಯಾಕಾಂಡ ಗೋವೆಯ ಜನಜೀವನದ ಮೇಲೆ ಬೀರಿದ ಪರಿಣಾಮವನ್ನು ಹೇಳಲು ಯತ್ನಿಸಿದ ಸಂಯಮವು ಲೇಖಕರ ಕುರಿತು ನಿಜಕ್ಕೂ ಗೌರವ ಮುಡಿಸುತ್ತದೆ. ಲೇಖಕರು ತಮ್ಮ ಕಲ್ಪನ ಶೈಲಿಯನ್ನು ಯಾವ ಮಟ್ಟದಲ್ಲಿ ಹರಿಸಿದ್ದಾರೆಂದು ತಿಳಿಯುವದು ವಿಶೇಷತೆ ಎನಿಸಿಕೊಳ್ಳುತ್ತದೆ.

ಅಧ್ಯಯನದ ಫಲಿತಗಳು

- ವಲಸೆ ಹೋಗುವುದನ್ನೆ ಮುಖ್ಯ ವಿಷಯವನ್ನಾಗಿ ಇಟ್ಟುಕೊಂಡ ಕಾದಂಬರಿಯೋ ವಲಸೆ ಸಂದರ್ಭದಲ್ಲಾಗುವ ಅನುಭವ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದ ಭಾಷೆ ಜನರ ನಡುವಳಿಕೆ, ಆಹಾರ ಪದ್ಧತಿ, ಪರಿಸರ ಇತ್ಯಾದಿ ವಿಷಯಗಳು ಸಹ ಕಾದಂಬರಿಯಲ್ಲಿ ಪೂರಕ ಅಂಶಗಳಾಗಿ ಬಳಸಿಕೊಂಡಿದ್ದಾರೆ.

- ನಿರೂಪಕರು ಮತಾಂತರ ಕುರಿತಾಗಿ ಹೇಳುವ ಸಂದರ್ಭದಲ್ಲಿ ರೊಚ್ಚಿಗೆಬ್ಬಿಸ ಬಹುದಾದ ಸೂಕ್ಷ್ಮ ಸಂದರ್ಭಗಳನ್ನು ಬಹು ಸಮಚಿತ್ತದಿಂದ ಕಥನವನ್ನು ದುಡಿಸಿರುವುದು ಬಹು ಅನನ್ಯ. ಈ ದೃಷ್ಟಿಯಿಂದ ಭೈರಪ್ಪನವರ ಕಾದಂಬರಿ 'ಆವರಣ'ಗಿಂತ ಇದು ಬೇರೆಯಾಗಿಯೇ ನಿಲ್ಲುತ್ತದೆ.

- ಈ ಕಾದಂಬರಿಯಲ್ಲಿ ಮುಖ್ಯವಾದ ಧ್ವನಿಯೆಂದರೆ ಜಾತಿ ವ್ಯವಸ್ಥೆಯ ಸೂಕ್ಷ್ಮಗಳ ಬಗೆಗಿನ ಒಳನೋಟಗಳು. ಕಥನ ರೀತಿ, ನೀತಿ, ಪದ್ಧತಿ ಜೀವನ ಕ್ರಮಗಳನ್ನಲ್ಲದೆ ಸ್ವಾಭಾವಿಕ ನಿಸರ್ಗದ ಹಿನ್ನೆಲೆ ಅಥವಾ ಪರಿಸರಗಳನ್ನು ಮೈಗೂಡಿಸಿಕೊಂಡು ಸರ್ವಕಾಲಿಕವೂ ಆಗಿದೆ ಎಂಬುದನ್ನು ಗುರ್ತಿಸಬಹುದು.

- ನೂರಾರು ವರ್ಷಗಳ ಹಿಂದೆ ನಡೆದಿರಬಹುದಾದ ಈ ಕಥನವು ಸಾರಸ್ವತ ಬ್ರಾಹ್ಮಣರ ಬದುಕಿನ ರೀತಿ ನೀತಿ, ವೇಷ, ಭೂಷಣ, ಭಾಷೆಗಳನ್ನು ಮಾತ್ರ ಕಾಲ ನಿರ್ದಿಷ್ಟ ಪಡಿಸುತ್ತಿದೆಯೋ ಹೊರತು ಕಥನದ ಅರ್ಥಸಾಧ್ಯತೆಗಳು ಸರ್ವಸ್ಥಾನಿಕವಾಗಿರುತ್ತವೆ.

- 'ವಲಸೆ' ಎಂಬುದು ಸಾರಸ್ವತ ಸಮುದಾಯಕ್ಕೆ ಅನಿವಾರ್ಯವಾದರು ಸಹ ಅದರ ಹಿಂದೆ ಅವರ ವ್ಯಾಪಾರ, ಭೂಮಿಗಳಿಕೆ, ಕುಟುಂಬಗಳ ಬೆಳವಣಿಗೆ ಇತ್ಯಾದಿ ಅಂಶಗಳು ಪೂರಕವಾಗಿವೆ ಎಂಬುದು ಕಾದಂಬರಿಯಿಂದ ಸ್ಪಷ್ಟವಾಗುತ್ತದೆ.

- ಕಾದಂಬರಿಯು ಪೋರ್ಚುಗೀಸರ ದಬ್ಬಾಳಕೆಯ ಚಿತ್ರಣಕ್ಕೆ ಮಾತ್ರ ಮಿಸಲಾಗದೆ, ಮನುಷ್ಯ ಸಂಬಂಧಗಳ ಪರಸ್ಪರ ಮನೋವ್ಯಾಪಾರಗಳ ನವಿರಾದ ಭಾವನೆಗಳು ಹಾಗೂ ಹಳೇ ಮತ್ತು ಹೊಸ ಅವಿಷ್ಕಾರಗಳ ಸಂಘರ್ಷ ಶೋಷಣೆಗಳು ಸಹ ಬಹುಮುಖ್ಯವಾಗಿದೆ ಎಂಬುದು ತೊರಿಸುತ್ತದೆ.

- ಸಾರಸ್ವತರು ಮತಾಂತರ ವಿರೋಧಿಯಾಗಿ ವಲಸೆ ಹೊಗುವದನ್ನು ಒಂದೆಡೆಯಿಂದಾ ನೋಡುವದಾದರೆ ಇನ್ನೊಂದೆಡೆ ಅದೇ ಸಾರಸ್ವತರಲ್ಲಿ ಧರ್ಮಕ್ಕಿಂತಾ ಬಡತನ ನಿಗಿಸಿಕೊಳ್ಳಲು ಮತಾಂತರ ಹೊಂದುವದು ಮುಖ್ಯ ಎಂಬುದು ಕಾದಂಬರಿ ದ್ವಿಮುಖತೆಯನ್ನು ತೊರಿಸುತ್ತದೆ.

- ಇತಿಹಾಸವನ್ನು ಕಲ್ಪನೆಯಿಂದಾ ನಿರೂಪಕರು ಕಾದಂಬರಿಯ ರಚನೆಯನ್ನು ಮಾಡಿದರು ಸಹ ಕಾದಂಬರಿಯನ್ನು ವರ್ತಮಾನ ಕಾಲದಲ್ಲಿ ನಿಂತು ಗ್ರಹಿಸಬೇಕಾಗುತ್ತದೆ.
- ಪೋರ್ಚುಗೀಸರು ವ್ಯಾಪಾರಕ್ಕಾಗಿ ನಮ್ಮಲ್ಲಿಗೆ ಬಂದು ಮತಾಂತರ ಎಂಬ ಪರದೆಯನ್ನು ಹಾಕಿದರು ಎಂಬುದು ಒಂದೆಡೆಯಾದರೆ ಅವರು ನಮ್ಮ ನಾಡಿಗೆ ಮೊದಲ ಮುದ್ರಣಯಂತ್ರ ಪರಿಚಯಿಸಿರುವರು ಎಂಬ ಮಾತನ್ನು ತಳ್ಳಿಹಾಕುವಂತಿಲ್ಲ. ಅವರು ಮುದ್ರಣಯಂತ್ರ ತಂದಿರುವದು ಬೇರೆ ಕಾರಣಕ್ಕೆ ಆದರು ಸಹ ನಮಗೆ ಅದರಿಂದಾದ ಲಾಭವನ್ನು ನಾವು ಮರೆಯುವಂತಿಲ್ಲಾ ಎಂಬುದು ಮುಖ್ಯವಾದದ್ದು.
- ಕಾದಂಬರಿಯಲ್ಲಿ ಬರುವ ಸಾರಸ್ವತರು ಪರಸ್ಪರ ಎದುರಾದಾಗ 'ಮಾಮಾ, ಮಾಂಮ್ಹಿ' ಎಂದು ಸಂಬೋಧಿಸುವ ವಿವರಗಳು ಗಮನಿಸಿದಾಗ ಇದು ಸಮೂಹದ ಅನ್ಯೋನ್ಯತೆಯನ್ನು ಸೂಚಿಸುತ್ತದೆ. ಈ ಅನ್ಯೋನ್ಯತೆ ಎಲ್ಲ ಸಮೂಹಗಳಲ್ಲೂ ಇರಬೇಕೆಂಬುದು ಕಾದಂಬರಿಯ ಆಶೆಯಾಗಿದೆ.
- ಇತಿಹಾಸ ಎನ್ನುವದು ಕೇವಲ ಚಕ್ರವರ್ತಿಗಳ ಯುದ್ಧ, ಜೀವನ ಕ್ರಮಗಳಷ್ಟೇ ಅಲ್ಲಾ ಸಾಮಾನ್ಯ ಜನರ ಬದುಕು ಸಹ ಇತಿಹಾಸದಲ್ಲಿ ಅಡಕವಾಗಿರುತ್ತದೆ ಎಂಬುದನ್ನು 'ಸ್ವಪ್ನ ಸಾರಸ್ವತ' ಕಾದಂಬರಿ ತೊರಿಸಿಕೊಟ್ಟಿದೆ.
- ಕಾದಂಬರಿಯ ಮುಖ್ಯ ಅಂಶವೆಂದರೆ ಪುರಾಣ, ಐತಿಹ್ಯೆ, ಆಧುನಿಕತೆ, ಸಂಪ್ರದಾಯ ಮುಂತಾದವುಗಳನ್ನು ಗ್ರಹಿಕೆ ಮತ್ತು ಅಭಿವ್ಯಕ್ತಿ ನೆಲೆಗಳನ್ನು ಸಮತೂಕದಲ್ಲಿ ಬೆರೆಸುತ್ತಾ ಬರವಣಿಗೆಯನ್ನು ಕಲಾತ್ಮಕವಾಗಿಸಿರುವುದು ನಿಜವಾದ ಕಥನ ಸೃಷ್ಟಿಯಾಗುವುದೇ ಸಮಕಾಲೀನತೆ, ಆಧುನಿಕತೆ, ಚರಿತ್ರೆ, ಇತಿಹಾಸ, ಪುರಾಣಗಳು ಹದವಾಗಿ ಬೆರೆತ ಬರವಣಿಗೆಯಲ್ಲಿ ಇದೇ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.
- ನಿರೂಪಕರು ಪೋರ್ಚುಗೀಸರನ್ನು ಕ್ರೂರಿ ಸ್ವಾರ್ಥಿಗಳೆಂದು ಹೇಳುತ್ತಾ ಅವರಲ್ಲಿ ಮೃದುತ್ವ ಇದೇ ಎಂಬುದನ್ನು ಅಲ್ವೀರಾ ಮತ್ತು ಕೋಮಿನೋ ಪಾತ್ರಗಳ ಮುಖಾಂತರ ತೊರಿಸುತ್ತಾರೆ. ಇನ್ನೊಂದೆಡೆ ಸಾರಸ್ವತ ಬ್ರಾಹ್ಮಣರು ಧರ್ಮಕ್ಕಾಗಿ ವಲಸೆ ಹೋಗಲೂ ಸಿದ್ದರಿದ್ದಾರೆಂದು ಹೇಳುತ್ತಾ ಧರ್ಮಕ್ಕೆ ವಿರೋಧ ಎಂಬಂತೆ ಅನೈತಿಕ ಸಂಬಂಧ ಹೊಂದಿದ ಅಂತು ಪೈ ಮತ್ತು ವಿಟ್ಠು ಪೈರವರನ್ನು ತೊರಿಸುವದು ಉಂಟು.

- ಕಾದಂಬರಿಕಾರರು ಕಾದಂಬರಿ ರಚನೆಯಲ್ಲಿ ಗಂಡು – ಹೆಣ್ಣಿನ ಮಧ್ಯ ಇರುವಂತ ಸಂಬಂಧಗಳು ಸಾರಸತ್ವರಲ್ಲಿ ಮುಖ್ಯವಾಗಿ ಕಂಡುಬರುವ ವಿವಾಹ ಪದ್ಧತಿ, ವಿಧವೆತನ ಇವೇಲ್ಲವೂ ಸೂಕ್ಷ್ಮತೆಯಲ್ಲಿ ಕಂಡುಬರುವ ವಿಷಯಗಳಾಗಿವೆ.

- 'ಸ್ವಪ್ನ ಸಾರಸ್ವತ'ದಲ್ಲಿ ದೈವವಾಗಿ ಕಂಡುಬರುವ ನಾಗ್ಗೊ ಬೇತಾಳ ಕಾದಂಬರಿಯಲ್ಲಿರುವ ಪಾತ್ರಗಳ ಜೀವಾಳವೆಂಬಂತೆ ಕಂಡುಬರುತ್ತಾನೆ. ಅಸ್ಪಷ್ಟವಾದ ಒಂದು ಪಾತ್ರ ಕಾದಂಬರಿ ಉದ್ದಕ್ಕೂ ಯಾವರೀತಿಯಾಗಿ ಸ್ಪಷ್ಟ ಅರ್ಥಪಡೆದು ಕೊಳ್ಳತ್ತಾಹೊಗುತ್ತದೆ ಎಂಬುದು ಇಲ್ಲಿ ಮುಖ್ಯವಾಗಿದೆ.

- ಈ ಕಾದಂಬರಿಯ ಮತ್ತೊಂದು ಮುಖ್ಯವಾದ ವಿಚಾರವೆಂದರೆ 'ವಲಸೆಯನ್ನು ನಿರ್ವಹಿಸಿರುವ ಬಗೆ ಇಲ್ಲಿನ ವಲಸೆಯಲ್ಲಿ ರಾಜಕಾರಣದ ಸೂಕ್ಷ್ಮಗಳು ಭೂಮಿಯ ಪ್ರಶ್ನೆ, ತನ್ನ ಸಮುದಾಯದಲ್ಲಿ ಕುಟುಂಬದಲ್ಲಿ ಹುಟ್ಟಿಕೊಂಡ ಸ್ವಾರ್ಥ, ಅಸೂಯೇ, ದ್ವೇಷಗಳು ಬಿಚ್ಚಿಕೊಳ್ಳುತ್ತಾ' ಹೋಗುತ್ತವೆ. ಬದುಕನ್ನು ಕಟ್ಟಿಕೊಳ್ಳುವ ಆಶಯವಾಗಿ ಇಲ್ಲಿನ ವಲಸೆಯ ಆಶಯ ಬಂದಿದೆ.

- ಕಾದಂಬರಿಯಲ್ಲಿ ಕ್ಷಣ ಕ್ಷಣಕ್ಕೂ ಭಯವನ್ನು ಹುಟ್ಟುಹಾಕುವ ನಾಗಶಾಪ ಇದು ಪೂರ್ವಜರಿಂದಾ ಬಂದರು ಸಹ ಪಿಳಿಗೆಯಿಂದ ಪಿಳಿಗೆಗೆ ಅದು ಹಬ್ಬಿಕೊಳ್ಳುವ ಚಿತ್ರಣ ಜೊತೆಗೆ ಧಡ್ಡನ ಶಾಪವು ಅದರೊಂದಿಗೆ ಸೇರಿ ಕೊಳ್ಳುವದರಿಂದಾ ಕುಟುಂಬದಲ್ಲಾಗುವ ಎಲ್ಲ ಕಷ್ಟ ನಷ್ಟಗಳಿಗೆ ಶಾಪಗಳೆ ಕಾರಣ ಎಂಬಂತೆ ತುರಿಸುತ್ತಾ ಕೊನೆಗೆ ಶಾಪವೇ ವರವಾಗುತ್ತದೆ. ಎಂಬುದು ಕಾದಂಬರಿಯಲ್ಲಿ ಬರುವ ವಿಶೇಷತೆ ಯಾಗಿದೆ.

- ಇಲ್ಲಿ ನಿರ್ಮಿತಿಯಲ್ಲಿ ಸಮಕಾಲೀನ ವಿವೇಕವು ಮಾಡುವ ಕೇಲಸ ಬಹು ಮುಖ್ಯವಾದದ್ದು. ಸಂಕಟ ಮತ್ತು ಸಂಭ್ರಮಗಳ ಸಮಚಿತ್ತ ಬೆಳಕನ್ನು ಅನಾವರಣ ಮಾಡುವದೇ ಈ ಕಾದಂಬರಿಯಲ್ಲಿರುವ ಶಕ್ತಿ ಮತ್ತು ಆಸಕ್ತಿಯಾಗಿರುವುದನ್ನು ಗುರ್ತಿಸಬಹುದು.

- ಪ್ರಾದೇಶಿಕ ಕೊಂಕಣಿ ಭಾಷೆಯನ್ನು ಕಾದಂಬರಿ ಹೊಂದಿದ್ದು. ಅಲ್ಲಲ್ಲಿ ಸಾಹಿತ್ಯ ಅಂಶಗಳಾದ ಬೈಗುಳ, ದ್ವಿರುಕ್ತಿಪದ, ಜೊಡು ನುಡಿಪದಗಳು, ವಿಶಿಷ್ಟ ಪದಗಳ ಬಳಕೆ ಗೊಂಡಿರುವದು ಕಾದಂಬರಿಗೆ ಸೊಗಸನ್ನು ನೀಡಿದೆ.

- ಕಾದಂಬರಿ ಇತಿಹಾಸ ಮತು ಕಲ್ಪನೆ ಮಿಶ್ರಿತ ರಚನೆಯಾಗಿದ್ದು ಕೆಲವು ಸಂದರ್ಭಗಳಲ್ಲಿ ನಿರೂಪಕರ ಕಲ್ಪನೆಯಲ್ಲಿ ಪಾತ್ರಗಳು ಹೊರಟಿವೆಯೋ ಇಲ್ಲಾ ಪಾತ್ರಗಳ ಹಿಂದೆ ನಿರೂಪಕರ ಕಲ್ಪನೆ ಹೊರಟಿದೆ ಎಂಬುದನ್ನು ನಿರ್ಧರಿಸುವದು ಕಷ್ಟ. ಅಷ್ಟೊಂದು ವಿಶೇಷತೆಯ ಹಿನ್ನೆಲೆಯಲ್ಲೇ ಕಾದಂಬರಿಯ ರಚನೆಯಾಗಿರುವದು.

- ಕನ್ನಡ ಕಾದಂಬರಿಗಳಲ್ಲಿ ಎಷ್ಟೋ ಕಾದಂಬರಿಗಳು ವ್ಯಕ್ತಿ, ಕುಟುಂಬ, ವಲಸೆ ಹೋಗುವ ಕುರಿತ ವಿಷಯಗಳನ್ನು ಒಳಗೊಂಡಿವೆ. ಆದರೇ ಈ ಕಾದಂಬರಿಗಳಿಗೆ ಭಿನ್ನವಾಗಿ 'ಸ್ವಪ್ನ ಸಾರಸ್ವತ'ವು ಸಾರಸ್ವತ ಸಮುದಾಯವೇ ವಲಸೆ ಹೋಗುವ ಚಿತ್ರಣ ಒಳಗೊಂಡಿರುವ ಕಾದಂಬರಿ. ಕನ್ನಡ ಸಾಹಿತ್ಯದಲ್ಲೇ ಸಮುದಾಯದ ವಲಸೆ ವಿಷಯದ ಮೊದಲ ಕಾದಂಬರಿಯಾಗಿದೆ.

ಹೀಗೆ ನಾವು ಕಾದಂಬರಿಯ ಅಧ್ಯಯನದ ಒಟ್ಟು ಫಲಿತಗಳನ್ನು ಗುರುತಿಸಬಹುದು ಚಾರಿತ್ರಿಕ ವ್ಯಕ್ತಿಗಳ ವ್ಯಕ್ತಿತ್ವದ ಪುನರ್ರಚನೆ ಇಲ್ಲಿಯ ಬರವಣಿಗೆಯ ಭಿತ್ತಿ. ಇದಕ್ಕೆ ಸಂಬಂಧಿಸಿದಂತೆ ಘಟನೆ ಸನ್ನಿವೇಶ ರೂಪ ಪಡೆಯುತ್ತವೆ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿರುವಂತೆ ಖಚಿತವಾದ ದಾಖಲೆಗಳು ಪೌರಾತ್ಯ ಸಂಸ್ಕೃತಿಯಲ್ಲಿ ಇಲ್ಲ. ಪರಸ್ಪರ ವೈರುಧ್ಯವಾದ ನಂಬಿಕೆಗಳು ವಿವರಗಳು ಪೌರಾಣಿಕ ನೆಲೆಗಳು, ಐತಿಹ್ಯಗಳು ಇವುಗಳಲ್ಲದೆ ಗಾಢ ಅರಿವಿನಲ್ಲಿ ರೂಪಗೊಳ್ಳುವ ಒಳನೋಟಗಳು ಸ್ವಪ್ನ ಸಾರಸ್ವತದಂತಹ ಕಾದಂಬರಿಗಳಲ್ಲಿ ಕಾಣುತ್ತೇವೆ. ಆಧುನಿಕ ಸಾಹಿತ್ಯದಲ್ಲಿ ರಚನೆಗೊಂಡ ಈ 'ಸ್ವಪ್ನ ಸಾರಸ್ವತ' ಕಾದಂಬರಿ ಓದುಗರಲ್ಲಿ ಹಿಂದಿನ ಇತಿಹಾಸದ ಜೊತೆಗೆ 'ಮಹಾಭಾರತದ'ದ ಕೆಲವು ಘಟನೆಗಳನ್ನು ಇಲ್ಲಿ ನೆನಪಿಗೆ ತರುತ್ತದೆ. ಜೊತೆಗೆ ವರ್ತಮಾನ ಕಾಲದಲ್ಲಿ ಸಾರಸ್ವತ ಬ್ರಾಹ್ಮಣರ ಕೆಲವು ವಿಧಿವಿಧಾನಗಳು ಸಹ ಕಾದಂಬರಿಯಲ್ಲಿ ತಕ್ಕಮಟ್ಟಿಗೆ ನೈಜತೆಯ ಹಿನ್ನೆಲೆಯಲ್ಲಿ ಬಳಸಿರುವದು ಉಂಟು. ಈ ಮಾತನ್ನು ಸಾರಸ್ವತ ಕುಟುಂಬಕ್ಕೆ ಸೇರಿದ ನರೇಂದ್ರ ಪೈರವರೆ ಹೇಳಿದ್ದಾರೆ.

ಬ್ರಾಹ್ಮಣತ್ವ ಪ್ರಚಾರಕ್ಕೆ ಪಾಂಡಿತ್ಯ ಪೂರ್ಣ ಹಾಗೂ ವೈಚಾರಿಕ ಬರಹಗಳಿಗೇನು ಕೊರತೆ ಇಲ್ಲ. ಆದರೆ ಭಾವಾವೇಶದಿಂದ ಎಲ್ಲಾ ಜನಸಾಮಾನ್ಯರು ಎಲ್ಲಾ ಕೃತಿಗಳನ್ನು ಓದುವುದಿಲ್ಲ. 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ಬರುವ ಮತಾಂತರ, ದೇವಾಲಯಗಳ ನಾಶ, ಪ್ರತಿಭಟನೆ ಅಸಹಾಯಕತೆ ಈ ಎಲ್ಲ ವಿಷಯಗಳನ್ನು ನೋಡುತ್ತಾ ಹೋರಟರೆ ಪೋರ್ಚುಗೀಸರು ನಮ್ಮ ದೇಶಕ್ಕೆ ಬಂದಿರುವದು ವ್ಯಾಪಾರ ಹಿನ್ನೆಲೆಯಾದರು ಸಹ ಅವರು ಏಕಸಾಮ್ಯತೆಯನ್ನು ಸಾಧಿಸುವಲ್ಲಿ ತಮ್ಮತನವನ್ನು ಮೆರೆದಿದ್ದರು ಎಂಬ ವಿಷಯ ಸ್ಪಷ್ಟವಾಗುತ್ತದೆ. ಹಾಗೆ ನೋಡಿದರೆ ವಸಾಹತು ಸಂದರ್ಭದಲ್ಲಿ ತಮ್ಮ ಸಾಂಸ್ಕೃತಿಕ ಹಿರಿಮೆಯನ್ನು ಸ್ಥಳಿಯರಿಗೆ ಮನದಟ್ಟುಮಾಡಿ ಅವರ ಅಂತರಂಗದಲ್ಲಿ ಅದರ ಉನ್ನತೆಯನ್ನು ಸ್ಥಾಪಿಸಲು ಪೋರ್ಚುಗೀಸರೆ ನೆರವಾದದ್ದು. ಚರಿತ್ರೆಯ ಮೇಲೆ ಮುಚ್ಚಿರುವ ಸುಳ್ಳು ಪರದೆಯನ್ನು ಕಿತ್ತು ಹಾಕಿ ಗತಕಾಲದ ಹಿಂದೂ ವೈಭವದ ಬೀಜ ಸ್ವರೂಪವನ್ನು ತೋರಿಸಲು ತಮ್ಮ ಹಿಂದುತ್ವ ಐಡಿಯಾಲಾಜಿಯನ್ನು ಸತ್ಯದ ಹೆಸರಿನಲ್ಲಿ ಮುಚ್ಚಿಹಾಕುವ, ತಾವು ಹೇಳುವ ಇತಿಹಾಸ ಕಲ್ಪನೆಯನ್ನು ಸತ್ಯವೆಂದೇ ಪ್ರತಿಪಾದಿಸುವ ಕೆಲಸವನ್ನು ಗೋಪಾಲಕೃಷ್ಣ ಪೈರವರು ಈ ಕಾದಂಬರಿಯ ಮುಖಾಂತರ ಮಾಡಿದ್ದಾರೆ.

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಗೋಪಾಲಕೃಷ್ಣ ಪೈ : **ಸ್ವಪ್ನ ಸಾರಸ್ವತ**
ಭಾಗ್ಯ ಲಕ್ಷ್ಮೀ ಪ್ರಕಾಶನ,
ಬೆಂಗಳೂರು – ೫೬೦೦೮೫
(ನಾ.ಮು.೨೦೧೧)

೨. ಎಂ. ಎಸ್. ಪುಟ್ಟಣ್ಣ : **ಮಾಡಿದ್ದುಣ್ಣೋ ಮಾಹಾರಾಯ**
ಕಾವ್ಯಾಲಯ ಪ್ರಕಾಶಕರು,
ಮೈಸೂರು – ೧೪ (ಮು.೧೯೯೨)

೩. ಶಿವರಾಂ ಕಾರಂತ : **ಮರಳಿ ಮಣ್ಣಿಗೆ**
ಎಸ್.ಬಿ. ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್
ಬೆಂಗಳೂರು (ಮು.೨೦೦೬)

೪. ಬಸವರಾಜ ಕಟ್ಟೀಮನಿ : **ಜ್ವಾಲಾಮುಖಿಯ ಮೇಲೆ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು (ಮು.೨೦೦೬)

೫. ಯು. ಆರ್. ಅನಂತಮೂರ್ತಿ : **ಪ್ರಜ್ಞೆ – ಪರಿಸರ**
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು (ಮು.೨೦೦೪)

೬. ಗೀತಾ ನಾಗಭೂಷಣ : **ಬದುಕು**
ಲೋಹಿಯಾ ಪ್ರಕಾಶನ,
ಬಳ್ಳಾರಿ (ತೃ.ಮು.೨೦೦೭)

೭. ಶಾಂತಿನಾಥ ದೇಸಾಯಿ : **ಮುಕ್ತಿ**
ವಿಶ್ವ ಕನ್ನಡ ಸಮ್ಮೆಳನ
ಬೆಂಗಳೂರು (ತೃ.ಮು – ೧೯೮೩)

೮. ಅರವಿಂದ ಮಾಲಗತ್ತಿ : **ಕುವೆಂಪು ಕೃತಿ ವಿಮರ್ಶೆ**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಬೆಂಗಳೂರು (೨೦೦೬)

೯. ಡಾ. ಜಿ. ಎಸ್. ಆಮೂರ : **ಕನ್ನಡ ಕಥನ ಸಾಹಿತ್ಯ: ಕಾದಂಬರಿ**
ಸಪ್ನ ಬುಕ್ ಹೌಸ
ಬೆಂಗಳೂರು (೨೦೦೬)

೧೦. ಓ. ಎಲ್. ನಾಗಭೂಷಣ ಸ್ವಾಮಿ : **ವಿಮರ್ಶೆಯ ಪರಿಭಾಷೆ: ಪರಿಸರ**
ಸಾಹಿತ್ಯ ಪ್ರಕಾಶನ ಶಿವಮೊಗ್ಗ (೧೯೮೩)

೧೧. ಎಲ್. ಎಸ್. ಶೇಷಗಿರಿರಾವ್ : **ಹೊಸಗನ್ನಡ ಸಾಹಿತ್ಯ**
ಕನ್ನಡ ಸಾಹಿತ್ಯ ಪರಿಷತ ಬೆಂಗಳೂರು. (೧೯೭೫)

೧೨. ಶಂಕರ ಪಾಟೀಲ (ಸಂ) : **ಕಾದಂಬರಿ ದರ್ಶನ: ಶ್ರೀ ಕೃಷ್ಣ ಮೂರ್ತಿ ಪುರಾಣಿಕ** ಸತ್ಕಾರ ಸಮಿತಿ, ಹುಬ್ಬಳ್ಳಿ ಧಾರವಾಡ (೧೯೭೪)

೧೩. ಡಾ. ಜಿ. ಎಸ್. ಆಮೂರ : **ಕಾದಂಬರಿ ಸ್ವರೂಪ ಹೊಸ ಚಿಂತನೆ**
ಕನ್ನಡ ಸಂಘ ಕ್ರೈಸ್ತ
ಕಾಲೇಜು ಬೆಂಗಳೂರು (೧೯೯೯)

೧೪. ಡಾ. ಗಿರಡ್ಡಿ ಗೋವಿಂದರಾಜು : **ಸಮಗ್ರ ವಿಮರ್ಶೆ**
ಶ್ರೀಮತಿ ಭಾನಾಮತಿ ಶಾ.ಬೆಂಗಳೂರು

೧೫. ಪಿ. ಬಿ. ಶಾಸ್ತ್ರಿ : **ಸಾಹಿತ್ಯದ ಪ್ರಕಾರಗಳು**
ಸಮಾಜ ಪುಸ್ತಕಾಲಯ
ಧಾರವಾಡ (೧೯೭೩)

೧೬. ರಂ. ಶ್ರೀ. ಮುಗಳಿ : **ಸಾಹಿತ್ಯೋಪಾಸನೆ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರ –೫೬೦೦೦ (೨೦೦೬)

೧೭. ಯು. ಆರ್. ಅನಂತಮೂರ್ತಿ : **ಸಂಸ್ಕಾರ**
ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ
ಕರ್ನಾಟಕ (ತೃ.ಮು.೨೦೦೮)

೧೮. ಡಾ. ಗುರುಪಾದ ಮರಿಗುದ್ದಿ : **ಕುವೆಂಪು ಕಾದಂಬರಿಗಳು**
ಕರ್ನಾಟಕ ಸಾಹಿತ್ಯ ಆಕಾಡೆಮಿ
ಕನ್ನಡ ಭವನ
ಬೆಂಗಳೂರು (೨೦೦೪)

೧೯. ವಿವಿದ ಲೇಖಕರು : **ಕಾದಂಬರಿ ಕಣ್ಣಲ್ಲಿ ಕಾರಂತರು**
ಪ್ರತಿಭಾಯುವ ವೇದಿಕೆ ರಾಜಾಜಿ
ನಗರ ಬೆಂಗಳೂರು (೧೯೯೭)

೨೦. ಡಾ. ಎಚ್. ಎಸ್. ಸುಜಾತಾ : **ಎಮ್. ಎಸ್. ಪುಟ್ಟಣ್ಣ ಒಂದು ಅಧ್ಯಯನ**
ಐ.ಬಿ.ಎಚ್.ಪ್ರಕಾಶನ
ಬೆಂಗಳೂರು (೧೯೮೧)

ನಿಯತಕಾಲಿಕೆಗಳು


೧) ಎಸ್.ಆರ್.ವಿಜಯಶಂಕರ : **ಸಾವಯವ ಶಿಲ್ಪದ ಸಮಗ್ರೀಕರಣ,** ಗಾಂಧಿಬಜಾರ್(ಮಾಸಪತ್ರಿಕೆ), ನವಂಬರ್ ೨೦೦೯, ಪು-೭

೨) ಹೆಚ್.ದಂಡಪ್ಪ : **ಚಾರಿತ್ರಿಕ ಪ್ರತಿಬಿಂಬ : ಸ್ವಪ್ನ ಸಾರಸ್ವತ,** ಪುಸ್ತಕ ಲೋಕ (ಸಂಚಿಕೆ ೧), ಜುಲೈ-ಸಪ್ಟೆಂಬರ್-೨೦೧೦, ಪು-೨೮

೩) ವಿಲಿಯಂ : **'ಸ್ವಪ್ನ ಸಾರಸ್ವತ' – ಸಮಚಿತ್ತ ಬೆಳಕಿನ ಕೃತಿ,** ಗಾಂಧಿಬಜಾರ್ (ಮಾಸಪತ್ರಿಕೆ), ಸಪ್ಟೆಂಬರ್-೨೦೧೦ ಪು-೭.

೪) ಗುರುಪ್ರಸಾದ್ ಕಾಗಿನೆಲೆ : **ಸ್ವಪ್ನ ಸಾರಸ್ವತ – ಕಾದಂಬರಿಯಾದ ಚರಿತ್ರೆ,** ಉದಯವಾಣಿ(ದಿನಪತ್ರಿಕೆ), ೯.೧.೨೦೧೦, ಪು-೬

೫) ನರೇಂದ್ರ ಪೈ : **'ಸ್ವಪ್ನ ಸಾರಸ್ವತ' – ಒಂದು ಮರುಓದು,** ಕೆಂಡಸಂಪಿಗೆ (ಅಂತರ್ಜಾಲ), ೨೪ ಡಿಸೆಂಬರ್ ೨೦೧೧



ಮೊದಲ ಮುದ್ರಣ - ೨೦೦೯



ಗೋಪಾಲಕೃಷ್ಣ ಪೈ





ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ





ಚಡಗ ಪ್ರಶಸ್ತಿ ಪ್ರದಾನ ಸಮಾರಂಭ

